ಮೊದಲನೇಯ ಖಂಡ, ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸರಿಸಲಾಯಿತು.

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿ).—೧೯೮೫ನೇ ಇಸವಿಯ ಕೃಷಿ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ... ೧೯೮೫ನೇ ಇಸವಿಯ ಕೃಷಿ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ವಿತ್ತೀಯ ಕಾರ್ಯಕಲಾಪಗಳು (ಮುಂ. ವ.)

ಅಭಿಯಾಚನೆ ಕ್ರಮಾಂಕ–೫೫ ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೫,೦೮,೬೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೩,೭೪,೪೬,೦೦೦ ರೂಪಾಯಿಗಳಿಂತ ಮೀರದ ಮೊತ್ತವನ್ನು ಲೇಖಾನುದಾದಲ್ಲಿ ಮಂಜರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧಿಯಾಚನೆ ಕ್ರಮಾಂಕ–೫೬ ಕ್ರಮಪಡಿಸಿದ ಮಾರುಕಟ್ಟೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ, ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೮೧,೨೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು —ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಿ. ಎಸ್. ಆಚಾರ್. (ಬೈಂದೂರು).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಮಂತ್ರಿಗಳು ಮಂಡಿಸಿದಂಥ ಅಧಿಸೂಚನೆ ಕ್ರಮಾಂಕ ೫೫ ಮತ್ತು ೫೬, ಸಹಕಾರ ಮತ್ತು ಕ್ರಮಪಡಿಸಿದ ಮಾರುಕಟ್ಟೆಗಳು ಇವುಗಳ ಕುರಿತಾದ ಬೇಡಿಕೆಗಳನ್ನು ಇದಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳ ಅನುಷ್ಠಾನದಲ್ಲಿನ ಲೋಪದೋಷ, ಪ್ರಗತಿಯಲ್ಲಿನ ಅಸಮರ್ಪಕತೆ ಇವುಗಳಿಗಾಗಿ ನಾನು ಇದನ್ನು ವಿರೋಧ ಮಾಡುತ್ತಾ ಇದ್ದೇನೆ. ಕಳೆದ ೮೦ ವರ್ಷಗಳ ಇತಿಹಾಸ ಭಾರತ ದೇಶದ ಸಹಕಾರಿ ರಂಗಕ್ಕೆ ಇದೆ. ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ಸೋಪಾನವಾಗಿ ಸಹಕಾರಿ ರಂಗ ಬೆಳೆದು ಬಂದಿದೆ. ಕರ್ನಾಟಕದಲ್ಲಿ ಸಹಕಾರಿ ರಂಗ ಅನೇಕ ವರ್ಷಗಳಿಂದ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಾ ಇದ್ದರೂ ಸಹ ಇನ್ನು ದೇಶದಮಟ್ಟದಲ್ಲಿ ೪ನೇ ಸ್ಥಾನದಲ್ಲಿದೆ. ಅದಕ್ಕಿಂತ ಮೇಲೆ ಏರಬೇಕಾದ ಅವಶ್ಯಕತೆ ಇದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ರಾಜ್ಯದಲ್ಲಿ ಸುಮಾರು ೨೩,೧೨೦ ವ್ಯವಸ್ಥಿತ ರೀತಿಯ ಸಹಕಾರ ಸಂಘಗಳಿವೆ. ಒಂದು ಕೋಟಿ ಜನರ ಸದಸ್ಯತ್ವ ಇದೆ. ಗ್ರಾಮೀಣ ಮಟ್ಟದಲ್ಲಿ ಶೇಕಡ ೬೨ರಷ್ಟು ಗ್ರಾಮೀಣ ಕುಟುಂಬಗಳು ಸದಸ್ಯತ್ವ ಹೊಂದಿವೆ ಎಂದು ಹೇಳುತ್ತಿದ್ದೀರಿ. ಇನ್ನೂ ಹೆಚ್ಚಿನ ಸದಸ್ಯತ್ವ ಮಾಡುವಂಥ ಅವಕಾಶವಿದೆ. ೨೨೦೦ ಕೋಟಿ ರೂಪಾಯಿಗಳಿಗೂ ಮಿಕ್ಕಿ ಹಣ ಚಲಾವಣೆ ಬಂಡವಾಳ ಇರುವ ಸಹಕಾರಿರಂಗ ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡುತ್ತಿದೆ, ಕೃಷಿಕರಿಗೆ ನೆರವು, ಮಾರುಕಟ್ಟೆ ವ್ಯವಸ್ಥೆ ಪೂರೈಕೆ, ಬಳಕೆ ಸಾಮಗ್ರಿ ವಿತರಣೆ, ಉತ್ಪಾದನಾ ಘಟಕಗಳು ಹೀಗೆ ಅನೇಕ ವಿಧವಾದ, ಬಹುವಿಧವಾದ ಕೆಲಸಗಳನ್ನು ಮಾಡುತ್ತಿದೆ. ಇದರ ಕೆಲಸದಿಂದ ನಮ್ಮ ರಾಜ್ಯವನ್ನು ಹೊಸನಾಡು, ರಸದ

ಬೀಡಸನ್ನು ಕಟ್ಟುವಂಥ ಸಹಕಾರಿ ರಂಗ ಆಗಬೇಕು ಎನ್ನುವ ಆಸೆ ನಮ್ಮದೂ ಕೂಡ ಆಗಿದೆ ಎಂದು ನಾನು ಮೊದಲಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸಹಕಾರಿ ರಂಗದಲ್ಲಿ ಎಲ್ಲವೂ ಒಳ್ಳೆಯದಿದೆಯೋ ಎಂದು ಕೇಳಿದರೆ ಕೆಲವು ವಿಚಾರದಲ್ಲಿ ಒಳ್ಳೆಯದಿಲ್ಲ ಎಂದು ಹೇಳಬೇಕಾಗುತ್ತದೆ. ಏಕೆಂದರೆ ಟೀಕೆಗಳು ಮಾತ್ರ ವಿಪಲವಾಗಿ ಬರುತ್ತಿವೆ. ನಮ್ಮಲ್ಲಿ ಒಂದು ಪ್ಯಾಷನ್ ಆಗಿಬಿಟ್ಟಿದೆ. ಸಹಕಾರ ರಂಗದಲ್ಲಿ ಭ್ರಷ್ಟಾಚಾರ ಪಟ್ಟಭದ್ರ ಹಿತರಿಂದ ಶೋಷಣೆ ಎನ್ನುವಂಥಾದ್ದು ಪ್ಯಾಷನ್ ಆಗಿಹೋಗಿದೆ. ಸಹಕಾರಿ ರಂಗದ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ಅದರ ಬಗ್ಗೆ ಕೆಲವರು ವ್ಯಾಖ್ಯಾನ ಮಾಡುವುದನ್ನು ನೋಡಿದರೆ ಬಹಳ ನೋವಾದಂತಾಗುತ್ತದೆ. ನಮ್ಮ ದೇಶದಲ್ಲಿ ಅನೇಕ ರಂಗಗಳಲ್ಲಿ ಭ್ರಷ್ಟಾಚಾರ ಇದೆ, ಅದನ್ನು ವಿವರವಾಗಿ ಹೇಳಲಿಕ್ಕೆ ಈಗ ಸಮಯವಿಲ್ಲ. ಕೈಗಾರಿಕಾ ರಂಗದಲ್ಲಿ, ಕೋಟಿಗಟ್ಟಲೆ ಬಂಡವಾಳ ಇರುವಂಥ ರಂಗದಲ್ಲಿ ಬಹಳ ದೊಡ್ಡ ರೀತಿಯ ಭ್ರಷ್ಟಾಚಾರ, ಅವ್ಯವಹಾರ ಇರುವುದನ್ನು ನಾವು ನೋಡುತ್ತಾ ಇದ್ದೇವೆ. ಆದರೆ ಸಹಕಾರಿ ರಂಗಕ್ಕೆ ಮಾತ್ರ ಇಷ್ಟೊಂದು ಪಬ್ಲಿಸಿಟಿ ಸಿಗುತ್ತಿದೆ. ಏಕೆಂದರೆ ಸಹಕಾರಿ ರಂಗದಲ್ಲಿ ಜನರ ಇನ್‌ವಾಲ್ವ್‌ಮೆಂಟ್ ಜಾಸ್ತಿ ಇದೆ ಜನರು ಚರ್ಚಿಸುತ್ತಿದ್ದಾರೆ. ಇದರ ಕುರಿತು ಪ್ರಚಾರ ಸಿಕ್ಕಿದೆ. ನನ್ನ ಅಭಿಪ್ರಾಯದಲ್ಲಿ ಇಷ್ಟು ಪ್ರಚಾರ ಅಗತ್ಯವಿಲ್ಲ ಎಂದರೆ ಯಾರೂ ತಪ್ಪು ತಿಳಿದುಕೊಳ್ಳಬಾರದು. ಇದರಲ್ಲಿ ಅವ್ಯವಹಾರ, ಭ್ರಷ್ಟಾಚಾರ ನಡೆದಿದ್ದಕ್ಕೆ ನಾನೂ ಬೆಂಬಲಿಸುತ್ತೇನೆ ಎಂದೂ ಯಾರೂ ತಪ್ಪು ತಿಳಿದುಕೊಳ್ಳಬಾರದು, ಅದನ್ನು ನಾನು ಖಂಡಿಸುತ್ತೇನೆ. ಎಲ್ಲೆಲ್ಲಿ ಲೋಪದೋಷ, ಭ್ರಷ್ಟಾಚಾರ ಅವ್ಯವಹಾರ ಇದೆ ಅದು ಸರಿ ಆಗಬೇಕು ಎಂದು ಹೇಳುವವನು ನಾನು. ಈ ರಂಗದಲ್ಲಿರುವ ಭ್ರಷ್ಟಾಚಾರಕ್ಕೆ ದೊಡ್ಡ ಪಬ್ಲಿಸಿಟಿ ಸಿಗುತ್ತಿದೆ, ಇದಕ್ಕೆ ಕಾರಣ ಸಹಕಾರ ರಂಗದಲ್ಲಿ ಲೋಪದೋಷಗಳು ಬಹಳಷ್ಟು ಇರುವುದು. ಇದರಲ್ಲಿ ನಾನು ಕಂಡುಕೊಂಡಿದ್ದು ಮೊದಲನೆಯದಾಗಿ, ಸದಸ್ಯರಿಗೆ ಸರಿಯಾದ ಸಹಕಾರಿ ಶಿಕ್ಷಣ ಇಲ್ಲದೇ ಇರುವಂಥಾದ್ದು. ಎರಡನೆಯದಾಗಿ, ತಾನು ಎಲ್ಲರಿಗಾಗಿ ದುಡಿಯುವವನು ಎಂದು ತಿಳಿದುಕೊಳ್ಳದೆ ಬೇರೆ ಬೇರೆ ಹಂತಗಳಲ್ಲಿ ನಾಯಕತ್ವ ಸಾಕಷ್ಟು ಇಲ್ಲದೇ ಇರುವಂಥಾದ್ದು. ಮೂರನೆಯದಾಗಿ, ಜನರಿಗಾಗಿ ಜನರೇ ಕಟ್ಟಿದ ಕ್ಷೇತ್ರ ಇದು ಸರ್ಕಾರದ ಇಲಾಖೆಯ ಕೈಗೊಂಬೆಯಲ್ಲ ಎನ್ನುವ ಅರಿವು ಇಲ್ಲದೇ ಇರುವಂಥಾದ್ದು. ನಾಲ್ಕನೆಯದು, ಸಹಕಾರ ರಂಗದ ವ್ಯವಸ್ಥಿತ ಹಂತಗಳಲ್ಲಿ ಸಾಕಷ್ಟು ಹೊಂದಾಣಿಕೆ ಇಲ್ಲದೇ ಇರುವಂಥಾದ್ದು. ಐದನೆಯದಾಗಿ. ಸಮರ್ಪಕವಾದ ಭದ್ರ ತಳಪಾಯದ ಕೊರತೆಯಿಂದ ಸ್ವಸಂಪೂರ್ಣ ಸ್ವಾಯತ್ತ ಘಟಕಗಳು ಆಗದೇ ಇರುವಂಥಾದ್ದು. ಆರನೆಯದು, ದುರಾಡಳಿತ, ಕ್ಲುಪ್ತಕಾಲದ ವಸೂಲಿಗಾಗಿ ಶ್ರಮವಹಿಸುವ ಮನೋಭಾವದ ಕೊರತೆ ರಾಜಕೀಯ ಹಸ್ತಕ್ಷೇಪಗಳು ಸಾಕಷ್ಟು ಆಗುತ್ತಾ ಇರುವಂಥಾದ್ದು. ಇವು ನಾನು ಕಂಡುಕೊಂಡಂತೆ ಲೋಪದೋಷಗಳಿಗೆ ಕೆಲವು ಕಾರಣಗಳು ನನ್ನ ಬೇಡಿಕೆ ಏನಾದರೂ ಇದ್ದಲ್ಲಿ ಅದು ಸಹಕಾರ ರಂಗದ ಸಮರ್ಪಕ ಕಾರ್ಯನಿರ್ವಹಣೆ ಆಗಬೇಕು ಎನ್ನುವುದು ಆ ದೃಷ್ಟಿಯಿಂದ ನಾನು ಭಾಷಣವನ್ನು ಮುಂದುವರಿಸುತ್ತಾ ಇದ್ದೇನೆ. ನಾನು ಸಹಕಾರ ರಂಗದ ಕುರಿತು ಹೇಳುವಾಗ ಹಿಂದಿನ ವರ್ಷಗಳಲ್ಲಿ ಭಾಷಣ ಮಾಡಿದವರ ವರದಿಗಳನ್ನು ಸ್ವಲ್ಪಮಟ್ಟಿಗೆ ನೋಡಿದ್ದೇನೆ. ಇದರಲ್ಲಿ ಪ್ರಥಮಬಾರಿಗೆ ಬರುವಂಥಾದ್ದು ಸಾಲ ನೀಡಿಕೆ ವಿಚಾರ. ಅದಕ್ಕೆ ನಾನು ನೇರವಾಗಿ ಹೋಗದೆ ಸಹಕಾರಿ ಶಿಕ್ಷಣಕ್ಕೆ ಹೋಗುತ್ತಾ ಇದ್ದೇನೆ. ನನ್ನ ದೃಷ್ಟಿಯಲ್ಲಿ ಸಹಕಾರಿ ಶಿಕ್ಷಣ ಸಹಕಾರಿ ರಂಗದಲ್ಲಿ ಅತ್ಯಂತ ಪ್ರಾಮುಖ್ಯವಾದುದು. ಸಹಕಾರಿ ರಂಗದಲ್ಲಿ ಯಾವರೀತಿ ಸೌಲಭ್ಯ ದೊರಕುತ್ತದೆ, ಸದಸ್ಯರು ಯಾವರೀತಿ ಇರಬೇಕು. ಯಾವರೀತಿ ಜವಾಬ್ದಾರಿ ವಹಿಸಬೇಕು. ಅವರ ಹಕ್ಕುಬಾಧ್ಯತೆಗಳೇನು ಎನ್ನುವುದರ ಕುರಿತು ಸಮರ್ಪಕವಾದ ಶಿಕ್ಷಣವನ್ನು ಸಹಕಾರ ರಂಗದಲ್ಲಿ ಇಡಬೇಕಾಗುತ್ತದೆ. ಸಹಕಾರಿ ಯೂನಿಯನ್ ಎಂದರೆ ಸಹಕಾರಿ ಸಂಸ್ಥೆ ಎನ್ನುವಂಥ ಭಾವನೆ ಇವೊತ್ತು ಅಫಿಷಿಯಲ್ ಮಟ್ಟದಲ್ಲಿ, 'ನಾನ್ ಅಫಿಷಿಯಲ್ ಮಟ್ಟದಲ್ಲಿ ಎರಡರಲ್ಲೂ ಇದೆ. ಇದು ತಪ್ಪಬೇಕು. ಸಹಕಾರಿ ಶಿಕ್ಷಣ ಪ್ರಾಮುಖ್ಯವಾದ ಕಾರ್ಯಕ್ರಮ ಎನ್ನುವಂಥಾದ್ದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಸಹಕಾರಿಗಳ ಗಮನಕ್ಕೂ ಇದನ್ನು ತರಬೇಕಾಗಿದೆ. ನಮ್ಮ ರಾಜ್ಯ ಸಹಕಾರಿ ಯೂನಿಯನ್ ೬ ಸಹಕಾರಿ ತರಬೇತಿ ಕೇಂದ್ರಗಳನ್ನು ನಡೆಸುತ್ತಿದೆ. ಇದರಲ್ಲಿ ಸಂಘಸಂಸ್ಥೆಗಳ ಸಿಬ್ಬಂದಿಗಳಿಗೆ ಇಲಾಖಾ ಅಧಿಕಾರಿಗೆ ತರಬೇತಿ ಜರುಗುತ್ತಿದೆ, ೨೩ ಸಾವಿರ ಸಹಕಾರ ಸಂಸ್ಥೆಗಳಿಗೆ ಈ ೬ ಕೇಂದ್ರಗಳು ಸಾಕಾಗುವುದಿಲ್ಲ. ಈ ವಿಚಾರವಾಗಿ ಹಿಂದೆ ಅನೇಕಬಾರಿ ಸರ್ಕಾರದ ಹತ್ತಿರ ನಾನು ಕೇಳಿಕೊಂಡದ್ದು ಉಂಟು. ಹಿಂದಿನ ಸಹಕಾರಿ ಸಚಿವರು ಮತ್ತು ಈಗಿನ ಸಹಕಾರಿ ಸಚಿವರಾದ ಶ್ರೀಮಾನ್ ಜಾಲಪ್ಪನವರು ಮಂಗಳೂರಿನಲ್ಲಿ, ಬೆಳಗಾಮಿನಲ್ಲಿ ಸಹಕಾರಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಿಕ್ಕೆ ಮಂಜೂರಾತಿ ಕೊಡುತ್ತೇನೆ ಎನ್ನುವ ಭರವಸೆ ನೀಡಿದ್ದರು. ಆ ಭರವಸೆ ಇಲ್ಲಿಯವರೆಗೆ ಈಡೇರಲಿಲ್ಲ.

ನಾನು ಕಳಕಳಿಯಿಂದ ಹೇಳುವುದೇನೆಂದರೆ ಇದು ಆಗುತ್ತದೆ ಅಥವಾ ಇಲ್ಲ ಎನ್ನುವಂಥ ವಿಚಾರವನ್ನು ಸರ್ಕಾರ ಹೇಳಬೇಕು. ಒಂದುವೇಳೆ ಆಗುವುದಿಲ್ಲ ಎನ್ನುವುದಾದರೆ ನಮ್ಮ ಸಹಕಾರಿಗಳು ಅಥವಾ ಜನ ಸುಳ್ಳು ಭರವಸೆ, ಆಸೆ ಇಟ್ಟುಕೊಳ್ಳುವುದು ಬೇಡ ಇಂಥದ್ದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿಬಿಡಬೇಕು ಮಾಡುತ್ತೇವೆ ಎನ್ನುವಂಥ ವಾಗ್ದಾನವನ್ನು ಪಡೆದಾಗ ಅದನ್ನು ಈಡೇರಿಸದೆ ಮುಂದು ವರಿಸಿಕೊಂಡು ಹೋಗುವುದು ಸರಿಯಲ್ಲ. ವಯಸ್ಕರ ಶಿಕ್ಷಣದ ಮೇಲೆ ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತಿದೆ. ಯಾವರೀತಿ ವಯಸ್ಕರ ಶಿಕ್ಷಣವನ್ನು ಪೈಲಟ್ ಪ್ರಾಜೆಕ್ಟಾಗಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೋ, ಪ್ರತಿ ಹಳ್ಳಿಯಲ್ಲಿ ಇದರ ಕಾರ್ಯಕ್ರಮವನ್ನು ಜಾರಿಗೆ ತರುತ್ತಿದ್ದಾರೋ ಅದೇ ರೀತಿ ಸಹಕಾರಿ ಶಿಕ್ಷಣವನ್ನು ಪೈಲಟ್ ಪ್ರಾಜೆಕ್ಟಾಗಿ ಮಾಡುವುದು ಅಗತ್ಯವಿದೆಯೆಂದು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಹಕಾರಿ ಶಿಕ್ಷಣ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ಅವ್ಯವಸ್ಥೆ ಇದೆ. ಇವರಿಗೆ ಸಿಗುವಂಥಾದ್ದು ತಿಂಗಳಿಗೆ ೬೦ ರೂಪಾಯಿಗಳ ಶಿಷ್ಯವೇತನ. ತರಬೇತಿ ಕಾಲೇಜಿನಲ್ಲಿ ೩೫೦ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅನೇಕ ವರ್ಷಗಳಿಂದ ಇದನ್ನು ೧೫೦ ಕ್ಕಾದರೂ ಏರಿಸಿ ಎನ್ನುವ ಬೇಡಿಕೆ ಇದೆ.

೪-೦೦ ಪಿ.ಎಂ.

ಇದನ್ನು ಸರ್ಕಾರದವರು ಗಮನಿಸಬೇಕು, ಸಹಕಾರಿ ಶಿಕ್ಷಣದ ಕಾರ್ಯಕ್ರಮ ಸಮರ್ಪಕವಾಗ ಬೇಕಾದರೆ ಪ್ರತಿಯೊಂದು ಹಳ್ಳಿಗಳಲ್ಲಿ ಸಮರ್ಪಕವಾಗಿ ಶಿಕ್ಷಣ ದೊರಕಬೇಕಾದರೆ ಸಾಕಷ್ಟು ಸಹಕಾರಿ ಶಿಕ್ಷಕರು ಇರಬೇಕಾಗುತ್ತದೆ. ಕನಿಷ್ಟ ತಾಲ್ಲೂಕಿಗೆ ಒಬ್ಬರು ಶಿಕ್ಷಕರು ಇರುವಂಥಾದ್ದು ಅವಶ್ಯಕ. ಈಗ ಇಡೀ ರಾಜ್ಯದಲ್ಲಿ ೫೨ ಮಂದಿ ಶಿಕ್ಷಕರು ಇದ್ದಾರೆ. ಸಾಕಷ್ಟು ಶಿಕ್ಷಕರು ಇಲ್ಲ, ಅವರಿಗ ಸರಿಯಾದ ವ್ಯವಸ್ಥೆ ಇಲ್ಲ. ಆದ್ದರಿಂದ, ಸಮರ್ಪಕವಾಗಿ ಈ ಶಿಕ್ಷಣ ಆಗಲಿಕ್ಕೆ ವ್ಯವಸ್ಥೆ ಮಾಡಬೇಕು. ಮಹಿಳೆಯರು ಹೆಚ್ಚು ಹೆಚ್ಚಾಗಿ ಸಹಕಾರಿ ರಂಗದಲ್ಲಿ ಪಾತ್ರ ವಹಿಸಬೇಕು. ಇದು ಸರ್ಕಾದ ನೀತಿ. ಮಹಿಳೆಯರಿಗೆ ಸಹಭಾಗಿತ್ವ ಬರಬೇಕೆಂದು ಸಹಕಾರ ಸಂಘದಲ್ಲಿ ಕಾನೂನಿಗೆ ತಿದ್ದುಪಡಿಯಾಗಿದೆ. ಮಹಿಳೆಯರಿಗೆ ತಮ್ಮ ಕರ್ತವ್ಯ ಪ್ರಜ್ಞೆ ಅನುಭವ ನೀಡುವಂಥಾದ್ದು ಆಗಬೇಕು. ತಾಲ್ಲೂಕಿಗೆ ಒಬ್ಬರು ಮಹಿಳಾ ಶಿಕ್ಷಕಿ ಇರಲಿ, ಜಿಲ್ಲೆಗೆ ಒಬ್ಬರಾದರೂ ಮಹಿಳಾ ಶಿಕ್ಷಕಿ ಹಾಕತಕ್ಕದ್ದು ಅಗತ್ಯ ಇದೆ. ಈಗ ೬ ಜನ ಮಾತ್ರ ಮಹಿಳಾ ಶಿಕ್ಷಕಿಯರಿದ್ದಾರೆ. ಪ್ರತಿ ಜಿಲ್ಲೆಗೆ ಒಬ್ಬರು ಮಹಿಳಾ ಶಿಕ್ಷಕಿಯರನ್ನು ಹಾಕುವಂಥಾದ್ದು ಮಾಡಿದರೆ ಮಹಿಳೆಯರಿಗೆ ಹೆಚ್ಚಿಗೆ ಸಹಕಾರಿ ಶಿಕ್ಷಣ ಕೊಟ್ಟಂತಾಗುತ್ತದೆ ಇದರ ಬಗ್ಗೆ ಮಾನ್ಯ ಮಂತ್ರಿಗಳು ಆಲೋಚಿಸಬೇಕು. ಇನ್ನು ಸಹಕಾರಿ ಶಿಕ್ಷಣ ತರಬೇತಿ ಕಾರ್ಯಕ್ರಮದ ಬಗ್ಗೆ ಹೇಳಬೇಕೆಂದರೆ ಸಹಕಾರಿ ಶಿಕ್ಷಣದ ಕಾರ್ಯಕ್ರಮ ಸರಿಯಾದ ರೀತಿಯಲ್ಲಿ ದೊರೆಯುತ್ತಿಲ್ಲ. ಸಹಕಾರ ಸಂಘಗಳು ನಷ್ಟದಲ್ಲಿರುವುದರಿಂದ ತನ್ನ ಕಾರ್ಯಕ್ರಮಗಳಿಗೆ ಸಿಬ್ಬಂದಿ ಸಂಬಳ ಪಾವತಿಗೆ ಎಲ್ಲದಕ್ಕೂ ಸರಕಾರದ ಮಂಜೂರಾತಿ ದೊರಕಬೇಕಾಗಿದೆ. ಪ್ರತಿಯೊಂದು ವಿಚಾರಕ್ಕೂ ಭಿಕ್ಷಾಪಾತ್ರೆ ಹಿಡಿದುಕೊಂಡು ಹೋಗಬೇಕಾದರೆ ಇದು ಎಂತಹ ಸಂಸ್ಥೆ ಭಿಕ್ಷಾಪಾತ್ರೆ ಹಿಡಿವ ಸಂಸ್ಥೆಯನ್ನಾಗಿ ಮಾಡಬೇಡಿ. ಮಾನ್ಯ ಸಹಕಾರ ಸಚಿವರು ಇದರ ಬಗ್ಗೆ ಗಮನಹರಿಸಬೇಕು. ಇದಕ್ಕೆ ಸಹಕಾರಿ ಯೂನಿಯನ್‌ನ್ನು ಜಿಲ್ಲಾ ಮಟ್ಟದಲ್ಲಿ ಬಲಪಡಿಸಬೇಕು. ಯೂನಿಯನ್ ಸರಿಯಾಗಿ ಕೆಲಸ ಮಾಡಿದಲ್ಲಿ ಜನರಿಂದ ನೆರವು ಸಿಕ್ಕುತ್ತದೆ. ಇನ್ನು ಇಲಾಖೆಯ ಕಾರ್ಯನಿರ್ವಹಣೆಯ ಬಗ್ಗೆ ಎರಡು ಮಾತನ್ನು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಸಹಕಾರಿ ಇಲಾಖೆ ಜೊತೆಗೆ ಮನಿಲೆಂಡರ್ಸ್ ಆ್ಯಕ್ಟ್, ಪಾನ್ ಬ್ರೋಕರ್ಸ್ ಆ್ಯಕ್ಟ್, ಚಿಟ್‌ಫಂಡ್ ಆ್ಯಕ್ಟ್ ಇವುಗಳ ನಿರ್ವಹಣೆ ಆಗಬೇಕು. ಈಗ ಡಿವಿಜನ್‌ಗೆ ಒಬ್ಬರು ಅಸಿಸ್ಟೆಂಟ್ ರಿಜಿಸ್ಟ್ರಾರ್ ಇದ್ದಾರೆ. ಅವರು ಎಲ್ಲಾ ಮೀಟಿಂಗ್ ಅಟೆಂಡ್ ಮಾಡಬೇಕು. ಪ್ರಜಾಪ್ರಭುತ್ವ ಕಾಲದಲ್ಲಿ ಮೀಟಿಂಗ್ ಎನ್ನುವುದು ಒಂದು ಪ್ಯಾಷನ್ ರೋಗವಾಗಿದೆ. ಅವರು ಇಲಾಖೆ ಕೆಲಸ ಮಾಡುವ ಬದಲು ಮೀಟಿಂಗ್ ಅಟೆಂಡ್ ಮಾಡುವಂತಹ ಕೆಲಸವೇ ಆಗುತ್ತದೆ. ಯಾವುದಾದರೂ ಸಮಸ್ಯೆ ತೆಗೆದುಕೊಂಡು ಹೋಗಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ನೋಡಬೇಕೆಂದರೆ ಅವರು ಸಿಕ್ಕುವುದೇ ಕಷ್ಟ. ತಾಲ್ಲೂಕು ಮಟ್ಟದಲ್ಲಿ ಸಹಕಾರಿ ವಿಸ್ತರಣಾಧಿಕಾರಿಗಳು ಇದ್ದಾರೆ. ಅವರು ಸಹಕಾರ ಕೆಲಸ ಬಿಟ್ಟು ಬೇರೆ ಮಿಕ್ಕೆಲ್ಲಾ ಕೆಲಸ ಮಾಡುತ್ತಾರೆ. ಅವರು ಅಂಡರ್ ದಿ ಕಂಟ್ರೋಲ್ ಆಫ್ ಬಿ.ಡಿ.ಓ. ಇರುತ್ತಾರೆ. ಅವರು ವಿಧವಾ ಮಾಸಾಶನ, ಗೋಬರ್‌ಗ್ಯಾಸ್, ಐಆರ್‌ಡಿಪಿ, ಫಲಾನುಭವಿಗಳನ್ನು ಗುರುತಿಸತಕ್ಕದ್ದು ಮಾಡುತ್ತಾರೆ ಸಹಕಾರಿ ಕೆಲಸ ಬಿಟ್ಟು ಬೇರೆ ಎಲ್ಲಾ ಮಾಡುತ್ತಾರೆ. ೭ನೇ ಯೋಜನೆಯಲ್ಲಿ ಸಹಕಾರಿ ರಂಗಕ್ಕೆ

ಪ್ರಮುಖವಾದ ಪಾತ್ರ ಇದೆ. ೨೦ ಅಂಶಗಳಲ್ಲಿ ೭ ಅಂಶಗಳು ಸಹಕಾರದಲ್ಲಿ ಆಗಬೇಕು. ತಾಲ್ಲೂಕಿಗೆ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅಥವಾ ಸಬ್ ಅಸಿಸ್ಟೆಂಟ್ ರಿಜಿಸ್ಟ್ರಾರ್ ಯಾವ ಹೆಸರನ್ನು ಬೇಕಾದರೂ ಅವರಿಗೆ ಕರೆಯಿರಿ. ಅವರನ್ನು ನೇಮಕ ಮಾಡಿ ಹೆಚ್ಚಿಗೆ ಕೆಲಸ ಕೊಡಿ. ಈಗಿನ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಸಿಬ್ಬಂದಿಯ ಕೊರತೆಯನ್ನು ನೀಗಿಸಿ. ಮತ್ತೊಂದು ವಿಚಾರ ತಿಳಿಸಬೇಕೆಂದರೆ, ಸಹಕಾರಿ ಸಿಬ್ಬಂದಿಯ ವೇತನ ಮಂಜೂರು ಮಾಡಲಿಕ್ಕೆ ತೆಗೆದುಕೊಂಡು ಹೋದರೆ ವರ್ಷಾನುಗಟ್ಟಲೆ ಪೆಂಡಿಗ್ ಇರುತ್ತದೆ ಸಹಕಾರಿ ಸಿಬ್ಬಂದಿ ಕೊರತೆ ನೀಗಿಸುವುದರ ಜೊತೆಗೆ ಅಲ್ಲಿಗೆ ಬೇಕಾಗತಕ್ಕ ಸ್ಟೇಷನರಿ ಕೊರತೆಯನ್ನು ತಾವು ನೀಗಿಸಬೇಕು. ಮೇಲ್ಮಟ್ಟದಲ್ಲಿ ಡೆಪ್ಯುಟಿ ರಿಜಿಸ್ಟ್ರಾರ್ ಅಡೀಷನಲ್ ರಿಜಿಸ್ಟ್ರಾರ ವರಗೆ ಸಮರ್ಪಕವಾದ ಒಂದು ವ್ಯವಸ್ಥೆ ಇದೆ. ಇನ್ನು ವಿಚಾರಣಾ ಮತ್ತು ತನಿಖಾ ವಿಭಾಗ ಮಟ್ಟದನ್ನು ಅತ್ಯಂತ ತೀವ್ರವಾಗಿ, ಧಕ್ಷತೆಯಿಂದ ಮಾಡಬೇಕು. ಈಗ ಇರತಕ್ಕ ನಮೂನೆಯಲ್ಲಿ ಇರುವುದು ಸರಿಯಲ್ಲ. ಹೀಗೆ ಕೆಲಸ ಮಾಡಿದರೆ ಅವ್ಯವಹಾರಗಳು ಕಡಿಮೆಯಾಗುತ್ತವೆ, ಇದನ್ನು ಬಲಪಡಿಸಬೇಕು. ಆದ್ದರಿಂದ, ಈ ವಿಚಾರವನ್ನು ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮಾನ್ಯ ಮಂತ್ರಿಗಳಿಗೆ ಗೊತ್ತಿದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿರ್ತಾಡಿ ಸಹಕಾರ ಸಂಘದಲ್ಲಿ ಹದಿನಾರು ಲಕ್ಷ ರೂಪಾಯಿಗಳ ದುರುಪಯೋಗವಾಯಿತು. ಯಾರೋ ಒಬ್ಬರು ದೊಡ್ಡ ಮಹಾಶಯರು ಇದನ್ನು ಕಬಳಿಸಿದರು. ಕಾರಣಾಂತರದಿಂದ ಇಲ್ಲಿಯವರೆಗೆ ಅದು ತನಿಖೆಯಾಗಲಿಲ್ಲ. ಹೈಕೋರ್ಟಿನಲ್ಲಿ ಸ್ಟೇ ಬರುತ್ತದೆ. ಆರ್ಬಿಟ್ರೇಷನ್‌ಗೆ ಹೋದಾಗ ಸ್ಟೇ ಬರುತ್ತದೆ. ಕ್ರಿಮಿನಲ್ ತನಿಖೆಗೆ ಸಿ.ಓ.ಡಿ. ಇನ್ಸ್‌ಪೆಕ್ಟರ್ ಹಾಕಿದ್ದಕ್ಕೆ ಇನ್ಸ್‌ಪೆಕ್ಟರ್ ವರ್ಗ ಆಯಿತು. ಅದಕ್ಕೆ ಬೇಕಾದಂಥ ಚಾರ್ಜ್‌ಷೀಟ್ ಹಾಕಲಿಕ್ಕೆ ಇನ್ನು ಆಗಿಲ್ಲ. ಪೋಲೀಸ್ ಇನ್‌ವೆಸ್ಟಿಗೇಷನ್‌ನಲ್ಲಿ, ಕೋರ್ಟಿನಲ್ಲಿ ವಿಳಂಬವಾಗುತ್ತಿದೆ. ಅದರ ಬಗ್ಗೆ ಏನು ಮಾಡಬೇಕೆಂದು ನಮ್ಮ ಸಹಕಾರ ಸಚಿವರಿಗೆ ಗೊತ್ತಿದೆ. ಅವರು ಸಹಕಾರಿ ರಂಗದಲ್ಲಿ ಬಹಳಷ್ಟು ಅನುಭವಿಗಳು. ಈ ತಿಮಿಂಗಿಲಗಳು ಸಹಕಾರಿ ರಂಗಗಳನ್ನು ಕಬಳಿಸಿದಂತೆ ಮಾಡಲಿಕ್ಕೆ ಏನಾದರೂ ದಾರಿಯನ್ನು ಹುಡುಕಬೇಕು. ಈಗ ಕಯ್ಯೂರು ಸೊಸೈಟಿಯಲ್ಲಿ ಲ್ಯಾಂಡ್ ಮಾರ್ಟಿಗೇಜ್ ಆಗಿದೆ. ಆರ್ಬಿಟ್ರೇಷನ್ ಆಗಲಿಕ್ಕೆ ಸಬ್ ರಿಜಿಸ್ಟ್ರಾರ್ ಎರಡು ಮೂರು ತಿಂಗಳುಗಳಿಂದ ಇಟ್ಟುಕೊಂಡಿದ್ದಾರೆ. ಏತಕ್ಕೋಸ್ಕರ ಈ ರೀತಿ ವಿಳಂಬ ಹೋಗಬೇಕು ಎನ್ನುವ ವಿಚಾರವನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಲಿಕ್ವಿಡೇಷನ್, ೪,೮೩೭ ಸಹಕಾರ ಸಂಘಗಳು ಸಮಾಪನ ಮಾಡುವ ಹಂತದಲ್ಲಿವೆ. ಮಾನ್ಯ ಮಂತ್ರಿಗಳು ಎಲ್ಲಿ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುವುದಿಲ್ಲ ಅವುಗಳನ್ನು ಲಿಕ್ವಿಡೇಟ್ ಮಾಡಲಿಕ್ಕೆ ಸಿದ್ಧ ಎಂದು ಹೇಳಿದ್ದಾರೆ ಅದಕ್ಕೆ ನನ್ನ ವಿರೋಧ ಇಲ್ಲ ಅವುಗಳನ್ನು ಸಮಾಪನಕೊಳಿಸಬೇಕು. ಈಗ ಕೆಲಸವನ್ನು ಮಾಡದೇ ಇರತಕ್ಕ ಸಂಘಗಳು ಬರೀ ಚುನಾವಣೆಗೆ ಮತ ನೀಡುವ ಸಂಘಗಳಾಗಿ ಬೆಳೆಯಬಾರದು. ಡಿ.ಸಿ.ಸಿ. ಚುನಾವಣೆ, ರಾಜ್ಯಮಟ್ಟದ ಚುನಾವಣೆಗಳು ಬರುತ್ತವೆ, ಅಲ್ಲಿ ರಬ್ಬರ್ ಸ್ಟ್ಯಾಂಪ್ ಹಾಕಿಕೊಂಡು ಓಟು ಮಾಡುವ ಸಹಕಾರ ಸಂಘಗಳು ಏನಿವೆ ಅವುಗಳನ್ನು ವಿಸರ್ಜನೆ ಮಾಡಬೇಕು ೪,೮೩೭ ಸಹಕಾರ ಸಂಘಗಳಲ್ಲಿ ೯ ಕೋಟಿ ಅಸೆಟ್ಸ್, ೧೦ ಕೋಟಿ ಲಿಯಾಬಿಲಿಟೀಸ್ ಇದೆ. ಆದ್ದರಿಂದ, ನಿಷ್ಕ್ರಿಯ ಸಹಕಾರ ಸಂಘಗಳನ್ನು ಸಮಾಪನ ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಲೆಕ್ಕ ಪರಿಶೋಧನೆ, ಸಹಕಾರ ಸಂಘಗಳ ಕಾಯಿದೆಯ ೬೩ನೇ ಕಲಂ ಪ್ರಕಾರ ಲೆಕ್ಕ ಪರಿಶೋಧಕರಿಂದ ವರ್ಷಕ್ಕೆ ಒಮ್ಮೆ ಶಾಸನಬದ್ಧವಾಗಿ ಲೆಕ್ಕಪರಿಶೋಧನೆ ಆಗಬೇಕೆಂದು ಇದೆ. ಆದರೆ ಈಗ ೨೩,೪೮೯ ಪ್ರಕರಣಗಳಲ್ಲಿ ಪರಿಶೋಧನೆ ಬಾಕಿ ಇದೆ. ೨೩,೪೮೯ ಪ್ರಕರಣಗಳಲ್ಲಿ ಆಡಿಟ್ ಆಗಬೇಕಾಗಿದೆ ಕೆಲವು ಸಂಘಗಳಲ್ಲಿ ಆಡಿಟ್ ಆಗಿದೆ. ಕೆಲವು ಸಂಘಗಳಲ್ಲಿ ಮೂರು ನಾಲ್ಕು ವರ್ಷಗಳಿಂದ ಆಡಿಟ್ ಆಗಿಲ್ಲ. ಸಕಾಲದಲ್ಲಿ ಆಡಿಟ್ ಮಾಡದೇ ಇದ್ದರೆ ಅವ್ಯವಹಾರಗಳ ಮೇಲೆ ಕ್ಷ ಕಿರಣ ಬೀರುವುದು ಹೇಗೆ ? ಕೇಳಿದರೆ, ಸಿಬ್ಬಂದಿ ಇಲ್ಲ ಎಂದು ಹೇಳಿದರೆ ಅದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು. ಇದರಲ್ಲಿ ೪,೬೯೧ ಸಂಘಗಳ ವಿಚಾರ ಬಹಳ ವಿಚಿತ್ರವಾಗಿದೆ. ಇದರಲ್ಲಿ ವಿಳಾಸ ಗೊತ್ತಿಲ್ಲದ ಸಂಘಗಳು ೨,೬೩೪, ವಿಸರ್ಜನಾ ಹಂತದಲ್ಲಿದ್ದು ಅಧಿಕಾರಿಗಳು ಚಾರ್ಜ್ ತೆಗೆದುಕೊಂಡಿಲ್ಲದೇ ಇರತಕ್ಕ ಸಹಕಾರ ಸಂಘಗಳು ೧೯೩, ಪುಸ್ತಕಗಳು, ಪೋಲೀಸ್, ಗುಪ್ತದಳ, ಕೋರ್ಟ್ ಇರತಕ್ಕ ಸಹಕಾರ ಸಂಘಗಳು ೯೯ ಆಡಿಟ್‌ಗೆ ಹಾಜರುಪಡಿಸದ ಅಪೂರ್ಣ ಪುಸ್ತಕ ತನಿಖೆ, ೯೫೨, ಆಡಿಟ್ ಸಿಬ್ಬಂದಿ ಕೊರತೆ ೧,೧೮೭. ಈ ರೀತಿ ಒಟ್ಟು ೪,೬೯೧ ಇವೆ. ಇದಕ್ಕೆ ಯಾರು ಹೊಣೆ ? ಆದಷ್ಟು ಬೇಗ ಸಹಕಾರಿ ಸಿಬ್ಬಂದಿಯನ್ನು ನೇಮಕ ಮಾಡುವ ಕೆಲಸ ಆಗಬೇಕು. ಇನ್ನು ಆಡಿಟ್ ಇಲಾಖೆಯಲ್ಲಿ

ನ್ಯೂನತೆ ಏನಿದೆ ಅದನ್ನು ಸರಿಪಡಿಸಬೇಕಾದ್ದು ಅತಿಮುಖ್ಯ. ಇನ್ನು ಪ್ರತಿವರ್ಷ ಆಯಾ ಸಂಘಗಳ ಮಹಾಸಭೆ ಆಗುವಾಗ ಸರ್ವ ಸದಸ್ಯರ ಸಭೆಯಲ್ಲಿ ಹಿಂದಿನ ವರ್ಷದ ಆಡಿಟ್ ರಿಪೋರ್ಟ್ ಇಡುವಂತಹ ವ್ಯವಸ್ಥೆ ಮಾಡಿದರೆ ಸರಿಯಾದ ವ್ಯವಸ್ಥೆ ಆಗುತ್ತದೆಂದು ಮಾನ್ಯ ಸಚಿವರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಕಾಯಿದೆ ತಿದ್ದುಪಡಿ ಬಗ್ಗೆ ಹೇಳಬೇಕೆಂದರೆ, ಸಹಕಾರಿ ಸಚಿವರು ಕಳೆದ ಬಾರಿ ಆಕ್ಟ್‌ಗೆ ಕೆಲವು ತಿದ್ದುಪಡಿಗಳನ್ನು ತಂದಾಗ ಹಿಂದಿನ ಸರ್ಕಾರ ನೇಮಿಸಿದ್ದ ಮಾನ್ಯ ಕೆ. ಹೆಚ್. ಪಾಟೀಲರು ಸಲ್ಲಿಸಿದ ಸಮಿತಿಯವರ ವರದಿಯನ್ನು ಪರಿಶೀಲಿಸಿದ್ದಾರೆ.

ಸಹಕಾರಿ ಮಸೂದೆಗೆ ಕಾಂಪ್ರಿಯೆನ್ಸೀವ್ ಅಮೆಂಡ್‌ಮೆಂಟ್ ತರುತ್ತೇವೆಂದು ಒಂದು ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದರು. ಇವರು ಕೊಟ್ಟಂತಹ ಭರವಸೆ ಇಲ್ಲಿಯ ತನಕ ಈಡೇರಲಿಲ್ಲ. ಆದರ ಬದಲಿಗೆ ಕೆಲವು ಅಮೆಂಡ್‌ಮೆಂಟ್ಸ್ ಬಂದಿವೆ. ಇದರಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆ ಬರುವ ಯಾವುದೇ ನಿಯಮಗಳಿರಬಾರದು. ಸೆಕ್ಷನ್ ೧೭ರಂತೆ, ತನಗೆ ತೋಚಿದಂತೆ ಉಪ ನಿಬಂಧನೆಗಳಿಗೆ ತಿದ್ದುಪಡಿ ಮಾಡುವಂತೆ ಸಹಕಾರಿ ಸಂಘಗಳಿಗೆ ಆದೇಶ ನೀಡಲು ರಿಜಿಸ್ಟ್ರಾರ್‌ರವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಸಹಕಾರಿ ಸಂಘಗಳ ರಿಜಿಸ್ಟ್ರಾರ್‌ರವರು 'ಬ್ರಹ್ಮ, ವಿಷ್ಣು, ಮಹೇಶ್ವರ' ಇದ್ದಹಾಗೆ. ಸೃಷ್ಟಿ–ಸ್ಥಿತಿ–ಲಯ ಆ ರೀತಿ ಸಂಘವನ್ನು ಹುಟ್ಟುಹಾಕಬಹುದು, ಬೆಳಸಬಹುದು, ವಿಸರ್ಜನೆ ಮಾಡಬಹುದು. ಯಾರದೋ ಒತ್ತಾಯಕ್ಕೆ ಸಿಕ್ಕಿ ಬೇಕಾದ್ದನ್ನು ಮಾಡತಕ್ಕಂಥ ಪರಿಸ್ಥಿತಿ ಬರುತ್ತದೆ. ಜನತಂತ್ರದ ಮೌಲ್ಯದ ಹೆಸರಿನಲ್ಲಿ ಇದು ಬೇಡ. ಈ ರೀತಿ ಅಧಿಕಾರ ಕೊಡುವುದರಿಂದ ಖಂಡಿತ ಮೌಲ್ಯಾಧಾರಿತ ಆಡಳಿತ ಆಗುವುದಿಲ್ಲವೆನ್ನುವ ಅಂಶವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ.

ಎರಡನೆಯದಾಗಿ ನಾಮಕರಣ ವಿಚಾರದಲ್ಲಿ ಒಂದು ವಿಚಾರ ಹೇಳಬೇಕಾಗಿದೆ. ಕೆಲವು ತಿಂಗಳ ಹಿಂದೆ ಡಿ. ಸಿ. ಸಿ. ಬ್ಯಾಂಕುಗಳ ಚುನಾವಣೆಯ ಬಗ್ಗೆ ರಿಜಿಸ್ಟ್ರಾರ್ ಅವರಿಂದ ಒಂದು ಡೈರೆಕ್ಷನ್ ಬಂತು. ಸೆಕ್ಷನ್ ೩೦ (ಬಿ) ಪ್ರಕಾರ ಆಡಳಿತ ಮಂಡಳಿಯನ್ನು ರಚಿಸಿಕೊಳ್ಳಿ, ಆಡಳಿತ ಮಂಡಳಿಯಲ್ಲಿ ಇಬ್ಬರು ಸರ್ಕಾರಿ ಅಧಿಕಾರಿಗಳು ಇರಬೇಕು ಅವರು ಯಾರು ಎಂದರೆ ಡೆಪ್ಯುಟಿ ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟೀಸ್ ಮತ್ತೊಬ್ಬರು ಜಿಲ್ಲಾ ಗ್ರಾಮೀಣಾಭಿವೃದ್ಧಿ ಸಂಘದ ಪ್ರಾಜೆಕ್ಟ್ ಡೈರೆಕ್ಟರ್. ಎಲ್ಲಾ ಸಹಕಾರಿ ಸಂಘಗಳಲ್ಲೂ ಇದೇರೀತಿ ತಿದ್ದುಪಡಿಯನ್ನು ಮಾಡಿಕೊಂಡರೆ, ಸರ್ಕಾರಿ ಅಧಿಕಾರಿಗಳನ್ನು ಆಡಳಿತ ಮಂಡಳಿಯಲ್ಲಿ ಹಾಕಿಕೊಂಡ ಮೇಲೆ, ಇನ್ನೊಂದು ವಿಷಯ ಸೆಕ್ಷನ್ ೨೮ರ ಪ್ರಕಾರ ಮೂರು ಜನರನ್ನು ನಾಮಕರಣ ಮಾಡಿಕೊಳ್ಳಬಹುದು, ಅಲ್ಲಿಗೆ ಆಡಳಿತ ಮಂಡಳಿಗೆ ಮೂರನೇಯ ಒಂದು ಭಾಗ ನಾಮಕರಣವಾಗುತ್ತದೆ. ಇದು ಮಾನ್ಯ ಸಚಿವರ ಹತ್ತಿರ ರಾಜಕೀಯ ನಾಮಕರಣ ಎಂದು ಹೇಳಿದರೆ ಅದರಲ್ಲಿ ಏನೂ ಅನುಮಾನವಿಲ್ಲ, ಹಿಂದಿನವರೂ ಅದೇ ರೀತಿ ಮಾಡಿದ್ದಾರೆಂದು ನೀವು ಹೇಳಬಹುದು, ನಾಮಕರಣ ಇವೊತ್ತು ಕೂಡ ಆಗುತ್ತಾ ಇದೆ. ಹಿಂದೆ ನಾಮಕರಣವನ್ನು ಮಾಡುವಾಗ ಅವರ ಬಯೋಡೇಟಾ ತರಿಸಿಕೊಂಡು ಪರಿಶೀಲನೆ ಮಾಡಿ ನಾಮಕರಣ ಮಾಡುವ ಪರಿಪಾಠ ವಿತ್ತು. ಇವೊತ್ತು ಅದು ಏನೂ ಇಲ್ಲದೆ ನಾಮಕರಣವಾಗುತ್ತಿದೆ, ಅವರು ಸಹಕಾರಸಂಘಗಳಲ್ಲಿ ಕೆಲಸ ಮಾಡಿದ್ದಾರೋ ಇಲ್ಲವೋ ಯಾವುದೂ ಗೊತ್ತಿಲ್ಲ, ಏನೂ ಗೊತ್ತಿಲ್ಲದವರು ನಾಮಿನೇಟ್‌ಡ್ ಆಗುತ್ತಾರೆ. ಸಹಕಾರಿ ಕ್ಷೇತ್ರದಲ್ಲಿ ಏನೂ ಗೊತ್ತಿಲ್ಲದವರನ್ನು ನಾಮಕರಣ ಮಾಡಿದರೆ ಅದರಿಂದ ಬಹಳಷ್ಟು ವಿಪರಾಸ್ಯವಾಗುತ್ತದೆಂದು ನಾನು ಹೇಳಬಯಸುತ್ತೇನೆ. ನಾಮಕರಣ ಮಾಡುವುದನ್ನು ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಸಹಕಾರ ಮಂತ್ರಿಗಳಾಗಿದ್ದಾಗ ವಿರೋಧಿಸಿದ್ದಾರೆ. ಮಾನ್ಯ ಸಹಕಾರ ಸಚಿವರಾದ ಜಾಲಪ್ಪನವರು ಸಹ ನಾಮಕರಣ ಮಾಡುವುದನ್ನು ಹಿಂದೆ ವಿರೋಧಿಸಿದ್ದಾರೆ. ಈಗ ಅವರೇ ಅದಕ್ಕೆ ಪುರಸ್ಕಾರ ಕೊಡುವ ಪರಿಸ್ಥಿತಿಯಲ್ಲಿದ್ದಾರೆಂದರೆ ನನಗೆ ವೇದನೆಯಾಗುತ್ತದೆ. ಸಹಕಾರಿ ಕೇಂದ್ರದ ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿದ್ದಾಗ ನಾಮಕರಣದಿಂದ ಬಲಿಪಶುವಾದಂತಹ ನಿದರ್ಶನಗಳು ತಮಗೆ ಗೊತ್ತಿದೆ. ನಾಮಕರಣ ಪದ್ಧತಿಯನ್ನು ಇನ್ನೂ ಮುಂದು ವರಿಸಿಕೊಂಡು ಹೋಗುತ್ತಿದ್ದಾರೆ. ಇನ್ನಾದರೂ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಹಕಾರಿ ಸಂಸ್ಥೆ ಹೋಗಲಿಕ್ಕೆ ಬಿಡಿ.

ಒಬ್ಬ ಮಾನ್ಯಸದಸ್ಯರು.—ಕಾಂಗ್ರೆಸ್ ಸರ್ಕಾರ ಇದ್ದಾಗಲೂ ನಾಮಕರಣ ಮಾಡುವುದು ಇತ್ತು, ಅದು ಹೋಗಿರಲಿಲ್ಲ.

ಶ್ರೀ ಜಿ. ಎಸ್. ಆಚಾರ್.—ನಾನು ಅದಕ್ಕೆ ಉತ್ತರ ಕೊಡಲಿಕ್ಕೆ ಹೋಗುವುದಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಮಾನ್ಯ ಕೆ. ಎಚ್. ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆ ಸಮಿತಿಯು ಕೊಟ್ಟ ವರದಿಯಲ್ಲಿ ಏನಿದೆ ಎಂಬುದು ತಮಗೆ ಗೊತ್ತಿದೆ. ವ್ಯವಸಾಯ ಸಹಕಾರಿ ಸಂಘಗಳಿಗೆ ಮತದಾನದ ಹಕ್ಕು ಕೊಡಬೇಕಾದರೆ ೫೦ ಪರ್ಸೆಂಟ್ ವರ್ಷಾಂತ್ಯಕ್ಕೆ ವಸೂಲಿಯಾಗಬೇಕು. ಜುಲೈ ೧೫ರೊಳಗೆ ಪಾವತಿ ಮಾಡಬೇಕೆಂದು ಇದೆ. ಆದರೆ ಇತರ ಸಂಘಗಳು ಸುಸ್ತಿದಾರರು ಆದರೂ ಅಡ್ಡಿ ಇಲ್ಲ. ಅವರು ಓಟು ಕೊಡಬೇಕು. ಆಡಳಿತ ಮಂಡಳಿಯ ಸದಸ್ಯರೇ ಆಗಬೇಕು ಇದು ಏತಕ್ಕೆ ? ಯಾವ ಉದ್ದೇಶ ? ಇದರ ಹಿನ್ನೆಲೆ ಏನು ? ಇದು ಯಾವ ಮೌಲ್ಯ ?

ಎಲ್ಲಾ ಸಹಕಾರ ಸಂಘಗಳ ಜನರಲ್ ಬಾಡಿ ಮೀಟಿಂಗ್ ಸೆಪ್ಟೆಂಬರ್ ಅಂತ್ಯದೊಳಗೆ ಅಂದರೆ ವರ್ಷದ ಕೊನೆಯ ಮೂರು ತಿಂಗಳುಗಳು ಇರುವಾಗ ಜನರಲ್ ಬಾಡಿ ಮೀಟಿಂಗ್ ಆಗಬೇಕೆನ್ನುವ ನಿಯಮವಿದೆ. ಇದರಲ್ಲಿ ಒಂದು ವಿಷಯ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಗ್ರಾಮಮಟ್ಟದಿಂದ ತಾಲ್ಲೂಕು ಮಟ್ಟಕ್ಕೆ, ತಾಲ್ಲೂಕು ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ, ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡತಕ್ಕ ಅಗತ್ಯವಿದೆ. ಎಲ್ಲಾ ಮಟ್ಟದಲ್ಲೂ ಎಲ್ಲಾ ಸಹಕಾರ ಸಂಘಗಳ ಚುನಾವಣೆಯನ್ನು ಸೆಪ್ಟೆಂಬರ್ ಅಂತ್ಯದೊಳಗೆ ನಡೆಸಿದರೆ, ಯಾರೂ ಚುನಾವಣೆಯಲ್ಲಿ ಸೋತಿರುತ್ತಾರೆ. ಯಾರು ಜನರಿಂದ ತಿರಸ್ಕರಿಸಲ್ಪಟ್ಟಿರುತ್ತಾರೆ ಅಂತಹವರನ್ನು ಆಡಳಿತ ಮಂಡಳಿಗೆ ನೇಮಕ ಮಾಡುವ ನಿರ್ಧಾರ ಮಾಡಿದರೆ, ಅಂತಹವರು ಸಹಕಾರ ಸಂಘಕ್ಕೆ ಬರುವುದು ಇದು ಅನ್ಯಾಯವಲ್ಲವೆ ? ಗ್ರಾಮ ಪಟ್ಟದ ಸಹಕಾರ ಸಂಘಗಳ ಚುನಾವಣೆಯನ್ನು ಸೆಪ್ಟೆಂಬರ್ ಅಂತ್ಯದೊಳಗೆ ಮಾಡಿ. ತಾಲ್ಲೂಕು ಮಟ್ಟದ ಸಹಕಾರ ಸಂಘಗಳ ಚುನಾವಣೆಯನ್ನು ಆಕ್ಟೋಬರ್ ತಿಂಗಳಲ್ಲಿ ಮಾಡಿ. ಅದೇರೀತಿ ಜಿಲ್ಲಾಮಟ್ಟದ ಸಹಕಾರ ಸಂಘಗಳ ಚುನಾವಣೆಯನ್ನು ನವೆಂಬರ್ ತಿಂಗಳಿನಲ್ಲಿ ಮಾಡಿ ರಾಜ್ಯಮಟ್ಟದ ಸಹಕಾರ ಸಂಘಗಳ ಚುನಾವಣೆಯನ್ನು ಡಿಸೆಂಬರ್ ತಿಂಗಳಿನಲ್ಲಿ ನಡೆಸಿದರೆ ಅದರಲ್ಲಿ ಬಹಳಷ್ಟು ವ್ಯತ್ಯಾಸವೇನು ಆಗುವುದಿಲ್ಲವೆನ್ನುವ ಅಂಶವನ್ನು ಮಾನ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಅದೇರೀತಿ ಪದಾಧಿಕಾರಿಗಳ ಚುನಾವಣೆ ಪ್ರತಿ ವರ್ಷ ಆಗಬೇಕೆಂದು ಇದೆ, ಪದಾಧಿಕಾರಿಗಳನ್ನು ಬೋರ್ಡ್ ಆಫ್ ಡೈರೆಕ್ಟರ್‌ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಇದೆ. ಅಧ್ಯಕ್ಷರು ಉಪಾಧ್ಯಕ್ಷರು ಅವರನ್ನು ಆಯ್ಕೆ ಮಾಡಿಕೊಳ್ಳುವುದು ಅದು ಬೇರೆ ಇದೆ. ಪ್ರತಿ ವರ್ಷ ಪದಾಧಿಕಾರಿಗಳ ಬದಲಾವಣೆ ಆಗತಕ್ಕದ್ದು ಪಂಚಾಯತಿಯಲ್ಲಿ ಇಲ್ಲ, ಈಗ ಬರತಕ್ಕ ಜಿಲ್ಲಾ ಪರಿಷತ್‌ನಲ್ಲೂ ಕೂಡ ಇಲ್ಲ. ವಿಧಾನ ಸಭೆಯಲ್ಲೂ ಇಲ್ಲ, ಪ್ರತಿ ವರ್ಷ ಹೊಸ ಹೊಸ ಮಂತ್ರಿಗಳನ್ನು ಹೊಸ ಸಭಾಧ್ಯಕ್ಷರನ್ನು ಆಯ್ಕೆ ಮಾಡಿಕೊಳ್ಳುವಂತಹ ಪದ್ಧತಿ ಯಾವ ಕಡೆಯಲ್ಲೂ ಇಲ್ಲ. ಸಹಕಾರಿ ರಂಗಕ್ಕೆ ಮಾತ್ರ ಇವೆ. ಹೊಸಬರಿಗೆ ಅವಕಾಶ ಕೊಡಬೇಕೆನ್ನುವ ಉದ್ದೇಶದಿಂದ ಸರ್ಕಾರದವರು ಆ ರೀತಿ ಮಾಡಿದ್ದಾರೆ. ಹೊಸಬರಿಗೆ ಅವಕಾಶ ಕೊಡಬೇಕಾದರೆ ಅದು ಸಹಕಾರಿ ರಂಗಕ್ಕೆ ಮಾತ್ರ ಏತಕ್ಕೆ ಸೀಮಿತವಾಗಿರಬೇಕು ! ಸ್ಥಳೀಯ ಸಂಸ್ಥೆಗಳಲ್ಲಿ ಈ ವ್ಯವಸ್ಥೆ ಇಲ್ಲ. ಮುನಿಸಿಪಾಲಿಟಿಗಳಲ್ಲಿ ಇಲ್ಲ, ಯಾವುದೇ ಆಡಳಿತ ಮಂಡಳಿಗಳಲ್ಲಿ ಇಲ್ಲ. ವಿಧಾನಸಭೆ ಮತ್ತು ವಿಧಾನಪರಿಷತ್‌ಗಳಲ್ಲಿ ಇಲ್ಲ, ಯಾವುದೇ ಹಂತದಲ್ಲಿ ಈ ಪದ್ಧತಿ ಇಲ್ಲದೇ ಇರುವಾಗ ಈ ನಿಯಮವನ್ನು ಸಹಕಾರಿ ಸಂಘಕ್ಕೆ ಮಾತ್ರ ಬರುವಹಾಗೆ ಕಡ್ಡಾಯ ಮಾಡಿದರೆ ಹೇಗೆ ? ಆರು ವರ್ಷಗಳ ಕಾಲ ಸೇವೆಸಲ್ಲಿಸಿದ್ದರೆ ಪುನಃ ಸೇವೆ ಸಲ್ಲಿಸುವ ಅವಕಾಶವಿಲ್ಲ ಎಂದರೆ, ಇದರಿಂದಾಗಿ ಇವೊತ್ತು ಅನೇಕ ಸಂಘ ಸಂಸ್ಥೆಗಳು ನಿಷ್ಕ್ರಿಯವಾಗುವಂತಹ ಪರಿಸ್ಥಿತಿ ಬಂದಿದೆ. ಕೆಲವು ಸಂಸ್ಥೆಗಳು ಮುಚ್ಚಿ ಹೋಗಿವೆ. ಅವುಗಳಿಗೆ ಎಕ್ಸ್‌ಟೆನ್ಸ್‌ನ್ ಕೊಟ್ಟಿದ್ದಾರೆ. ಸಹಕಾರೀ ಸಂಘದಲ್ಲಿ ಯಾವಾಗಲೂ ಸದಸ್ಯರಾಗಿ ಇರಬೇಕೆನ್ನುವ ವಾದವನ್ನು ನಾನು ಒಪ್ಪುವುದಿಲ್ಲ.

ಇವೊತ್ತು ಅಸಂಖ್ಯಾತ ಅರ್ಬಿಟ್ರೇಷನ್ ಕೇಸುಗಳು ಬಂದಿವೆ. ಅವುಗಳ ಶೀಘ್ರ ವಿಲೇವಾರಿಗಾಗಿ ಯಾವುದೇ ಆಫೀಸು ಇಲ್ಲ, ಬೇಕಾದ ಸಿಬ್ಬಂಧಿ ವ್ಯವಸ್ಥೆ ಇಲ್ಲ. ಮಾನ್ಯ ಸಚಿವರು ಇದಕ್ಕೆ ಸಿಬ್ಬಂದಿ ವ್ಯವಸ್ಥೆಯನ್ನು ಮಾಡಬೇಕು. ಜಿಲ್ಲಾಮಟ್ಟದಲ್ಲಿ ಸಹಕಾರಿ ಕೋರ್ಟ್‌ಗಳನ್ನು ಮಾಡಿ. ಜಿಲ್ಲಾ ಮಟ್ಟದಲ್ಲಿ ಸಹಕಾರಿ ಕೋರ್ಟ್‌ಮಾಡಿ, ರಾಜ್ಯಮಟ್ಟದಲ್ಲಿ ಸಹಕಾರಿ ಅಪಲೇಟ್ ಟ್ರಿಬ್ಯುನಲ್ ಅನ್ನು

ಮಾಡಿದರೆ ಸಾಧ್ಯವಾದ ಮಟ್ಟಿಗೆ ಆರ್ಬಿಟ್ರೇಷನ್ ಕೆಲಸ ಬೇಗ ಆಗಬಹುದು ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಇನ್ನು ಸಾಲ ತೆಗೆದುಕೊಂಡವರ ಭೂಮಿಯನ್ನು ಹರಾಜು ಹಾಕಿದಾಗ ಯಾರೂ ಹರಾಜಿನಲ್ಲಿ ಭೂಮಿಯನ್ನು ಕೊಂಡುಕೊಳ್ಳದಿದ್ದರೆ, ಜಿಲ್ಲಾಧಿಕಾರಿಗಳು ಹರಾಜಿನಲ್ಲಿ ಭೂಮಿಯನ್ನು ಕೊಂಡುಕೊಳ್ಳುವುದಕ್ಕೆ ವಿಧಾನಸಭೆಯಲ್ಲಿ ತಿದ್ದುಪಡಿಯನ್ನು ಮಂಜೂರು ಮಾಡಿದ್ದು ಕಾರಣಾಂತರಗಳಿಂದ ಅದಕ್ಕೆ ವಿಧಾನ ಪರಿಷತ್‌ನಲ್ಲಿ ಮಂಜೂರಾತಿ ಸಿಕ್ಕಿಲ್ಲವೆಂದು ತಿಳಿದು ಬಂದಿದೆ. ಸಾಲ ಪಡೆದುಕೊಂಡವರ ಜಮೀನು ಹರಾಜು ಆದಾಗ ಯಾರೂ ಕೊಂಡುಕೊಳ್ಳುವುದಕ್ಕೆ ಬರದಿದ್ದರೆ ಅಂತಹ ಸಂದರ್ಭಗಳಲ್ಲಿ ಜಿಲ್ಲಾಧಿಕಾರಿಗಳು ಹರಾಜಿನಲ್ಲಿ ಆ ಭೂಮಿಯನ್ನು ಪಡೆದುಕೊಳ್ಳಬಹುದು. ಇದು ಚಿಕ್ಕ ರೈತರಿಗೆ ಅನ್ವಯ ಆಗಬಾರದು. ಸಹಕಾರಿ ಸಂಘಗಳ ಸಾಲವನ್ನು ವಸೂಲಿ ಮಾಡುವಾಗ, ಯಾರೂ ಬಿಡ್ ಮಾಡದೇ ಹೋದರೆ ಭೂ ಸುಧಾರಣೆ ಕಾಯಿದೆ ಕಾಲಂ ನಂ ೭೯. (ಬಿ) ಗೆ ತಿದ್ದುಪಡಿ ತನ್ನಿ. ಜಿಲ್ಲಾಧಿಕಾರಿಗಳು ಬಿಡ್‌ನಲ್ಲಿ ನಿಲ್ಲುವುದು ಬೇಡ. ಸಹಕಾರಿ ಸಂಘಗಳೇ ಒಂದು ತಿಂಗಳಿನಲ್ಲಿ ವಿಷಯವನ್ನು ಡಿಸ್‌ಪೋಸಲ್ ಮಾಡಲಿ. ಈ ವ್ಯವಸ್ಥೆಯನ್ನು ನಾವು ಮಾಡಬಹುದು.

ಸಾಮಾನ್ಯ ಶ್ರೇಣಿ ಪ್ರಾಧಿಕಾರ ಎನ್ನುವಂತಹದ್ದನ್ನು ಮಾಡಿ ಒಂದು ದೊಡ್ಡ ಗೊಂದಲವಾಗಿದೆ. ಕೆಲವರು ಸಿಸಿಎ ಯಲ್ಲಿ ಭದ್ರತೆ ಇಲ್ಲವೆಂದು ಹೇಳುತ್ತಾರೆ, ಕೆಲವರು ಸಿಸಿಎ ಬೇಕೆಂದು ಹೇಳುತ್ತಾರೆ. ಪ್ರಾಥಮಿಕ ಸಹಕಾರ ಸಂಘವಾಗಲಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಆಗಲಿ ಅಲ್ಲಿ ಸಿಸಿಎ ಮಾಡಬೇಕೆಂದು ಹೊರಟಿದ್ದಾರೆ. ಈ ವಿಚಾರವನ್ನು ಅವರವರಿಗೆ ಬಿಟ್ಟು ಬಿಡಿ. ಇವೊತ್ತು ಸಾವಿರಾರು ಜನ ನೌಕರರು ದಿನಗೂಲಿಯ ಮೇಲೆ ದುಡಿಯುತ್ತಿದ್ದಾರೆ. ನೌಕರಿಯ ಭದ್ರತೆ ಇಲ್ಲ ದಿನಗೂಲಿಯ ಮೇಲೆ ಕೆಲಸ ಮಾಡುತ್ತಿದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲೂ ದಿನಗೂಲಿಯ ಮೇಲೆ ಕೆಲಸ ಮಾಡುತ್ತಿದ್ದಾರೆ ಸಹಕಾರಿ ರಂಗದಲ್ಲೂ ಇದು ಸಾಕಷ್ಟು ಇದೆ.

ಆದ್ದರಿಂದ ಈ ಸಿ.ಸಿ.ಎ. ಎಂಬ ನಿಯಮವನ್ನು ಬಿಟ್ಟು ಆಯಾ ಸಂಘಕ್ಕೆ ಅವರ ಆರ್ಥಿಕ ಭದ್ರತೆಯ ಮೇಲೆ ಬೇಕಾದಷ್ಟು ಜನರನ್ನು ನೇಮಕ ಮಾಡಿಕೊಳ್ಳುವ ಹಾಗೆ ಅವರ ಸಂಬಳಗಳನ್ನು ನಿಷ್ಕರ್ಷೆ ಮಾಡಿ ಅದನ್ನು ಮಂಜೂರು ಮಾಡುವಂತಹ ಅಧಿಕಾರವನ್ನು ಹಿಂದೆ ಇದ್ದಂತಹ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ನಂತರ ಸಹಕಾರಿ ಇಲಾಖೆಯಲ್ಲಿ ಒಂದು ಇಲಾಖಾ ಸಮಾಲೋಚನ ಸಮಿತಿಯನ್ನು ರಚಿಸಬೇಕು. ಇಲಾಖೆಗೆ ಸಂಬಂಧಪಟ್ಟಂತೆ ಯಾವುದೇ ತಿದ್ದುಪಡಿಯನ್ನು ತರಬೇಕೆಂದಾಗ ಪೂರ್ವ ಭಾವಿಯಾಗಿ ಆ ಸಮಿತಿಯಲ್ಲಿ ಚರ್ಚೆಮಾಡಿ ಒಂದು ಅಂತಿಮ ತೀರ್ಮಾನಕ್ಕೆ ಬರುವಂತಾಗಬೇಕು. ಮೊನ್ನೆ ಮೇಲ್ಮನೆಯಲ್ಲಿ ತಾವು ತಂದಂತಹ ತಿದ್ದುಪಡಿಗೆ ಮುಖಭಂಗವಾಯಿತು. ಅಂತಹದ್ದನ್ನೆಲ್ಲಾ ತಪ್ಪಿಸುವುದಕ್ಕೆ ಸಾಧ್ಯವಾಗುತ್ತಿತ್ತು ಎಂದು ಹೇಳುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ಅದನ್ನು ಕೋ-ಆಪರೇಟೀವ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಬೇಕಾದರೆ ಮಾಡಿ. ರಾಜ್ಯಮಟ್ಟದ ಸಂಸ್ಥೆಗಳಿಗೆ ವ್ಯವಹಾರಕ್ಕೆ ಸಂಬಂಧಿಸಿದಂತೆ ವ್ಯವಹಾರಗಳನ್ನು ಮುಂದುವರಿಕೊಂಡು ಹೋಗುವಂತಹ ಸಂಸ್ಥೆಯಾಗಿರಬೇಕು. ಅದಕ್ಕೆ ಬೇಕಾದರೆ ತಾವು ತಿಂಕ್ ಟ್ಯಾಂಕ್ ಎಂದು ಕರೆಯಿರಿ. ಆದರೆ ಈ ಒಂದು ಸಂಸ್ಥೆ ಬರೀ ಅಡ್ವೈಜರಿ ಮಾಡತಕ್ಕಂಥ ಸಂಸ್ಥೆಯಾಗಬಾರದು. ಸಹಕಾರಿ ರಂಗದಲ್ಲಿ ಕೆಲಸ ಮಾಡಿ ಅಪಾರ ಅನುಭವವನ್ನು ಪಡೆದಿರತಕ್ಕಂಥವರೇ ಇದರಲ್ಲಿ ಇರಬೇಕು. ಅಂತಹ ಒಂದು ಬೋರ್ಡ್ ಇರುವಂಥಹದ್ದು ಅಗತ್ಯವೆಂದು ನನಗನ್ನಿಸುತ್ತದೆ. ನಂತರ ೧೯೮೪–೮೫ನೇ ವಾರ್ಷಿಕ ವರದಿಯನ್ನು ನೋಡುವಾಗ ೧೯೮೫–೮೬ರಲ್ಲಿ ನೀವು ಸಾಧನೆ ಮಾಡಬೇಕೆಂದಿರುವ ಗುರಿ ೨೬೦೦.೯೯ ಲಕ್ಷ ರೂಪಾಯಿಗಳು. ಇದರಲ್ಲಿ ೧೩ ಹೊಸ ಯೋಜನೆಗಳ ಬಗ್ಗೆ ವ್ಯಾಖ್ಯಾನ ಮಾಡಿದ್ದೀರಿ. ಅದರಲ್ಲಿ ಕೆಲವನ್ನು ಹೇಳುವುದಾದರೆ, ಹರಿಜನ ಸದಸ್ಯರಿಗೆ ಆಟೋ ರಿಕ್ಷಾ ಕೊಡಿಸುವಂಥದ್ದು, ಬೆಳೆ ವಿಮೆ, ಅಂತ್ಯೋದಯ, ನೇಗಿಲಭಾಗ್ಯ, ಸಬ್ಸಿಡಿ ಹಾಗೂ ಲ್ಯಾಂಪ್ ಸೊಸೈಟಿಗಳು ಏನು ನಿದ್ರಾವಸ್ಥೆಯಲ್ಲಿವೆ ಅವುಗಳು ಸಕ್ರಿಯವಾಗಿ ಕೆಲಸ ಮಾಡುವ ಹಾಗೆ ಮಾಡುವುದು ಈ ರೀತಿಯ ಕೆಲವು ಹೊಸ ಯೋಜನೆಗಳನ್ನು ತಾವು ಹಾಕಿಕೊಂಡಿದ್ದೀರಿ. ಇಂತಹ ಒಂದು ಸವಲತ್ತನ್ನು ನಮ್ಮ ಜನರಿಗೆ ಕೊಡುವುದಕ್ಕೆ ತಾವು ಮುಂದೆ ಬಂದಿದ್ದೀರಿ. ಆದರೆ ಇವುಗಳು ಸಮರ್ಪಕವಾಗಿ ಆಗಿಲ್ಲ ಎಂದು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಅಂದರೆ ಈ ಒಂದು ಹೊಸ ಕಾರ್ಯಕ್ರಮದಲ್ಲಿ ತಾವು ಖರ್ಚು ಮಾಡುವಂಥದ್ದು ೪೫೦.೪೦ ಲಕ್ಷ ರೂಪಾಯಿಗಳು. ಈ ಹಣವನ್ನು ಮೂಲ

ಯೋಜನೆಯ ೩೬೦೦.೯೯ ಲಕ್ಷ ರೂಪಾಯಿಗಳಲ್ಲಿ ಕಳೆದರೆ ೨೧೫೦.೫೯ ಲಕ್ಷ ಹಣವನ್ನು ಈ ಸಾಲಿನಲ್ಲಿ ಖರ್ಚು ಮಾಡಬೇಕೆಂಬ ಗುರಿಯನ್ನು ತಾವು ಇಟ್ಟುಕೊಂಡಿದ್ದೀರಿ. ಇದನ್ನು ಕಳೆದ ಸಾಲಿಗೆ ಹೋಲಿಸಿ ನೋಡಿದಾಗ ಕಳೆದಸಾಲಿನಲ್ಲಿ ತಾವು ಇಟ್ಟಂಥದ್ದು ೨೮೩೦.೭೧ ಲಕ್ಷ ರೂಪಾಯಿಗಳು ಇದ್ದರೆ ಈ ವರ್ಷ ೨೧೫೦.೫೯ ಲಕ್ಷ ರೂಪಾಯಿಗಳು ಇದೆ. ಅಂದರೆ ೧೯೮೪–೮೫ಕ್ಕಿಂತ ಕಡಿಮೆ ಗುರಿಯನ್ನು ತಾವು ಇರಿಸಿಕೊಂಡಿದ್ದೀರಿ. ಎಂಬುದಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ೧೯೮೪–೮೫ರಲ್ಲಿ ತಾವು ಮಾಡಿರುವಂಥ ಸಾಧನೆ ಬಗ್ಗೆ ಹೇಳುವುದಾದರೆ, ಸ್ಟೇಟ್ ಸೆಕ್ಟರ್ ಸ್ಕೀಮಿನಲ್ಲಿ ನಿಮ್ಮ ಗುರಿ ೯೫೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದರೆ, ನಿಮ್ಮ ಸಾಧನೆ ೮೨೦ ಲಕ್ಷ. ಅಂದರೆ ೮೬ ಪರ್ಸೆಂಟ್ ಆಯಿತು. ಅದೇ ರೀತಿ ಡಿಸ್ಟ್ರಿಕ್ಟ್ ಸೆಕ್ಟರ್ ಸ್ಕೀಮಿನಲ್ಲಿ ನಿಮ್ಮ ಗುರಿ ೧೮೮ ಲಕ್ಷ ಇದ್ದರೆ, ಸಾಧನೆ ಮಾಡಿರುವಂಥದ್ದು ೧೭೧ ಲಕ್ಷ. ಇದರ ಶೇಕಡಾವಾರು ೯೦ ಆಗುತ್ತದೆ. ಅದೇ ರೀತಿ ಇನ್‌ವೆಸ್ಟ್‌ಮೆಂಟ್ ಇನ್ ಅಗ್ರಿಕಲ್ಚರಲ್ ಫೈನಾನ್ಸಿಯಲ್ ಇನ್ಸಿಟ್ಯೂಷನ್, ಇದರಲ್ಲಿ ನಿಮ್ಮ ಗುರಿದ್ದದ್ದು ೨೩೮ ಲಕ್ಷ ಇದ್ದರೆ ನಿಮ್ಮ ಸಾಧನೆ ೨೫೬ ಲಕ್ಷ. ಇದರ ಶೇಕಡಾವಾರು ೧೦೭ ಆಗುತ್ತದೆ. ಅದೇ ರೀತಿ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮಿನಲ್ಲಿ ನಿಮ್ಮ ಗುರಿ ೨೦೧ ಲಕ್ಷ ಇದ್ದರೆ, ನೀವು ಸಾಧನೆ ಮಾಡಿರುವಂಥದ್ದು ೬೧ ಲಕ್ಷ. ಇದರ ಶೇಕಡಾವಾರು ೩೦ ಆಗುತ್ತದೆ. ಅದೇ ರೀತಿ ಸೆಂಟ್ರಲ್ ಸೆಕ್ಟರ್ ಅಂಡ್ ಎನ್.ಸಿ.ಡಿ.ಸಿ. ಸ್ಕೀಮುಗಳು ಇದರಲ್ಲಿ ನಿಮ್ಮ ಗುರಿ ೧೨೩೮ ಲಕ್ಷ ಇದ್ದರೆ ನಿಮ್ಮ ಸಾಧನೆ ೫೩೩ ಲಕ್ಷ. ಇದರಲ್ಲಿ ಶೇಕಡಾವಾರು ೪೪ ಆಗುತ್ತದೆ. ಹೀಗೆ ಈ ಎಲ್ಲಾ ಸ್ಕೀಮುಗಳನ್ನು ಸೇರಿಸಿ ಒಟ್ಟಾಗಿ ತೆಗೆದುಕೊಂಡರೂ ನಿಮ್ಮ ಗುರಿ ಇದ್ದದ್ದು ೨೫೭೦.೭೧ ಲಕ್ಷ ರೂಪಾಯಿಗಳಾಗಿದ್ದರೆ, ನಿಮ್ಮ ಸಾಧನೆ ೧೮೬೪.೩೮ ಲಕ್ಷ ರೂಪಾಯಿಗಳು. ಇದು ಒಟ್ಟು ಸರಾಸರಿ ೬೬.೧೨ ಪರ್ಸೆಂಟ್ ಆಗುತ್ತದೆ. ಇದಕ್ಕೆ ಹಿಂದಿನ ವರ್ಷಗಳ ಸಾಧನೆಯನ್ನು ಸ್ವಲ್ಪ ತುಲನೆ ಮಾಡಿ ನೋಡಿದಾಗ ಅನೇಕ ಸಲ ಬೇರೆ ಬೇರೆ ರಂಗಗಳಲ್ಲಿ ಇನ್‌ವೆಸ್ಟ್‌ಮೆಂಟ್ ಏನಿದೆ. ಖರ್ಚು ಏನು ಇದೆ ಎಂಬುದನ್ನು ನೋಡಿದಾಗ ಇದು ಬಹಳ ಕಡಿಮೆ ಎಂದು ಅನ್ನಿಸುತ್ತದೆ, ಹಿಂದಿನ ಸಾಧನೆಯನ್ನು ಹೇಳುವುದಾದರೆ, ೧೯೮೦–೮೧ರಲ್ಲಿ ಸಾಧನೆ ೮೮ ಪರ್ಸೆಂಟ್. ೧೯೮೧–೮೨ರಲ್ಲಿ ೬೭ ಪರ್ಸೆಂಟ್. ೧೯೮೨–೮೩ರಲ್ಲಿ ೫೬ ಪರ್ಸೆಂಟ್, ೧೯೮೩–೮೪ರಲ್ಲಿ ೭೫ ಪರ್ಸೆಂಟ್ ೧೯೮೪–೮೫ರಲ್ಲಿ ೬೬ ಪರ್ಸೆಂಟ್ ಹೀಗೆ ಗುರಿಗೆ ಸರಿಯಾಗಿ ಸಾಧನೆಯಾಗಿಲ್ಲ ಕಡಿತವಾಗಿದೆ. ಇರತಕ್ಕ ಲೂಪ್‌ಹೋಲ್ಸ್‌ನ್ನು ಸರಿಯಾಗಿ ಮಾಡಿಕೊಳ್ಳಿ ಎಂಬುದಾಗಿ ಸಲಹೆ ಮಾಡುತ್ತಿದ್ದೇನೆ. ಮತ್ತೆ ಡಿಸ್ಟ್ರಿಕ್ಟ್ ಸೆಕ್ಟರ್ ಸ್ಕೀಮಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಸಹಕಾರಿ ಏತ ನೀರಾವರಿ ಯೋಜನೆಗಾಗಿ ಇಟ್ಟಂತದ ೨೦ ಲಕ್ಷ ರೂಪಾಯಿಗಳು ವಿನಿಯೋಗವಾಗಿಯೇ ಇಲ್ಲ. ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮಿನಲ್ಲಿ ನಿಮ್ಮ ಭೌತಿಕ ಗುರಿಯ ಸಾಧನೆ ಬಹಳ ನಿರಾಶದಾಯಕ, ೧೯೮೪–೮೫ರಲ್ಲಿ ನಿಮ್ಮ ಗುರಿ ಇದ್ದುದ್ದು ೨೦೧ ಲಕ್ಷ ಇದ್ದರೆ, ನೀವು ಸಾಧನೆ ಮಾಡಿರುವಂಥಾದ್ದು ೬೧.೯೪ ಲಕ್ಷ. ಅದೇ ರೀತಿ ಕನ್ಸ್ಯೂಮರ್ಸ್ ಸೆಕ್ಟರ್‌ನಲ್ಲಿ ನಿಮ್ಮ ಸಾಧನೆ ೧೦೧ ಲಕ್ಷ ಇದ್ದರೆ, ನಿಮ್ಮ ಸಾಧನೆ ೧೧.೯೪ ಲಕ್ಷ. ಅದೇ ರೀತಿ ೧೯೮೪–೮೫ರಲ್ಲಿ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮಿನಲ್ಲಿ ಅಲೋಕೇಷನ್ ಇದ್ದುದು ೧೨೩೮.೬೬ ಲಕ್ಷ ಯುಟಿಲೈಜ್ ಆದದ್ದು, ೫೫೩.೬೪ ಲಕ್ಷ. ಇದರಲ್ಲಿ ಕೆಲವು ಉದಾಹರಣೆಗಳನ್ನು ಕೊಡಬೇಕಾದರೆ, ಎನ್.ಸಿ.ಡಿ.ಸಿ. ಸ್ಕೀಂ–ಡಿಸ್ಟ್ರಿಬ್ಯೂಷನ್ ಆಫ್ ಕನ್ಸ್ಯೂಮರ್ಸ್ ಆರ್ಟಿಕಲ್ಸ್ ಇನ್‌ರೂರಲ್, ಏರಿಯಾಸ್ ಇದರಲ್ಲಿ ನಿಮ್ಮ ಟಾರ್ಗೆಟ್ ಇದ್ದುದು ೪ ಲಕ್ಷ ಇದ್ದರೆ, ನೀವು ಮಾಡಿರುವಂಥ ಸಾಧನೆ ೧.೯೮ ಲಕ್ಷ ರೂಪಾಯಿಗಳು. ಅದೇ ರೀತಿ ಓಪನ್ನಿಂಗ್ ಆಫ್ ಡಿಪಾರ್ಟ್‌ಮೆಂಟ್‌ಲ್ ಸ್ಟೋರ್ಸ್ ಇದರಲ್ಲಿ. ನಿಮ್ಮ ಗುರಿ ೮ ಲಕ್ಷ ಇದ್ದರೆ, ನಿಮ್ಮ ಸಾಧನೆ ೦.೭೫ ಲಕ್ಷ. ನಂತರ ಇನ್‌ವೆಸ್ಟ್‌ಮೆಂಟ್ ಇನ್ ಸರ್ವೀಸ್ ಕೋಪರೇಟಿವ್ ಸೊಸೈಟೀಸ್ ಇದರಲ್ಲಿ ನಿಮ್ಮ ಗುರಿ ೪೫.೦೦ ಲಕ್ಷ ಇದ್ದರೆ, ನಿಮ್ಮ ಸಾಧನೆ ೨೬.೫೫ ಲಕ್ಷ ನಂತರ ಷೇರ್‌ಕ್ಯಾಪಿಟಲ್ ಡಿಸ್ಟ್ರಿಬ್ಯೂಷನ್ ಟು ಪ್ರೊಸಸಿಂಗ್ ಸೊಸೈಟೀಸ್ ಫಾರ್ ಪ್ರೊಸೆಸ್ಸಿಂಗ್ ಎನ್.ಸಿ.ಡಿ.ಸಿ.ಸ್ಕೀಮ್ಸ್ ಇದರಲ್ಲಿ ನಿಮ್ಮ ಗುರಿ ೧೩೦.೦೦ ಲಕ್ಷ ಇದ್ದರೆ ನಿಮ್ಮ ಸಾಧನೆ ೧೭.೨೬ ಲಕ್ಷ. ಅದೇ ರೀತಿ ಗ್ರೈನೇಜ್ ಕಮ್ ಚಾಕಿ ರೇರಿಂಗ್ ಸೆಂಟರ್ಸ್ ಬೈ ಸಿರಿಕಲ್ಚರಿಸ್ಟ್ (ಎನ್.ಸಿ.ಡಿ.ಸಿ.) ಇದರಲ್ಲಿ ನಿಮ್ಮ ಗುರಿ ಇದ್ದದ್ದು ೭.೦೦ ಲಕ್ಷ ಇದ್ದರೆ, ನಿಮ್ಮ ಸಾಧನೆ ೦.೯೨ ಲಕ್ಷ. ನಂತರ ಡಿಸ್ಟ್ರಿಬ್ಯೂಷನ್ ಆಫ್ ಕನ್ಸ್ಯೂಮರ್ಸ್ ಆರ್ಟಿಕಲ್ಸ್ ಇನ್ ರೂರಲ್ ಏರಿಯಾ ಇದರಲ್ಲಿ ನಿಮ್ಮ ಗುರಿ ೨೩ ಲಕ್ಷ ಇದ್ದರೆ, ನಿಮ್ಮ ಸಾಧನೆ ೮.೩೪ ಲಕ್ಷ. ಈ ರೀತಿಯಾಗಿ ನಿಮ್ಮ ಸಾಧನೆ ಪ್ರತಿವರ್ಷಕ್ಕೂ ಇಳಿಯುತ್ತಾ ಹೋಗಿದೆ. ಸಹಕಾರಿ ರಂಗದಲ್ಲಿನ ಪ್ರಗತಿ ಇಳಿಮುಖವಾಗಿದೆ. ಆಶಾದಾಯಕವಾಗಿಲ್ಲ ಎನ್ನುವಂಥದ್ದನ್ನು ನಾನು ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ,

ಇನ್ನು ಸಹಕಾರಿ ರಂಗದಲ್ಲಿ ಅತ್ಯಂತ ಪ್ರಾಮುಖ್ಯವಾದುದು ಕೃಷಿ ಸಾಲ. ಇದರ ವಿಚಾರವನ್ನು ಏಕೆ ಹೇಳುವುದಕ್ಕೆ ಬಯಸುತ್ತೇನೆಂದರೆ, ಅನೇಕ ವರ್ಷಗಳ ಹಿಂದೆ ಸಹಕಾರಿ ಸಂಘಗಳನ್ನು ವಯಬಲ್ ಯೂನಿಟ್‌ಗಳನ್ನಾಗಿ ಮಾಡಬೇಕೆಂದು ಶಿವರಾಮನ್ ಕಮಿಟಿಯು ವರದಿಯ ಪ್ರಕಾರ ವ್ಯವಸಾಯ ಸೇವಾ ಸಹಕಾರ ಸಂಘ ಎಂಬುದಾಗಿ ಸ್ಥಾಪನೆ ಮಾಡಿದ್ದರು. ಅವುಗಳು ಸಹಕಾರಿ ರಂಗದಲ್ಲಿ ಮಾತ್ರ ಇದ್ದವು. ಇದು ಸಾಲದು ಎಂಬುದಾಗಿ ತಿಳಿದು ಕೆಲವನ್ನು ರಾಷ್ಟ್ರೀಕೃತ ಬ್ಯಾಂಕುಗಳಿಗೂ ಕೊಟ್ಟರು. ಇನ್ನೂ ಕೆಲವನ್ನು ಕೆಲವು ಖಾಸಗಿ ಬ್ಯಾಂಕುಗಳಿಗೂ ಕೂಡ ವಹಿಸಿಕೊಟ್ಟರು. ಇದರ ಪ್ರಗತಿಯನ್ನು ನೋಡಬೇಕೆಂಬ ಯೋಚನೆ ಕೂಡ ಬಂತು. ಇದರ ಪರಿಣಾಮ ಏನಾಯಿತು ಎಂದರೆ ಇತ್ತೀಚಿನ ರಿಸರ್ವ್‌ಬ್ಯಾಂಕಿನವರ ವರದಿ ಪ್ರಕಾರ ಈ ವ್ಯವಸಾಯ ಸೇವಾ ಸಹಕಾರ ಸಂಘಗಳು ಯಾವುವು ಸಹಕಾರಿ ರಂಗದಲ್ಲಿ ಇದ್ದವೋ ಅವುಗಳು ಮಾತ್ರ ಕೆಲಸ ಮಾಡುತ್ತಿವೆ. ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ಖಾಸಗಿ ಬ್ಯಾಂಕುಗಳು ಕೈಕೆಳಗೆ ಕೆಲಸ ಮಾಡುತ್ತಿದ್ದಂತಹ ವ್ಯವಸಾಯ ಸೇವಾ ಸಹಕಾರ ಸಂಘಗಳು ಕೆಲಸ ಮಾಡುತ್ತಿಲ್ಲವೆಂಬ ವರದಿ ಬಂದಿದೆ. ಆದ್ದರಿಂದ ಖಾಸಗಿ ರಂಗದಲ್ಲಿ ಹಾಗೂ ರಾಷ್ಟ್ರೀಕೃತ ಬ್ಯಾಂಕು ಗಳು ಅಷ್ಟೇ ತಮ್ಮ ಸಾಧನೆಯನ್ನು ಹೇಳಿಕೊಂಡರೆ ಸಾಲದು. ಗ್ರಾಮೀಣ ಮಟ್ಟದಲ್ಲಿ ಸಹಕಾರಿ ಸಂಘಗಳು ಅಸ್ತಿತ್ವದಲ್ಲಿ ಉಳಿಯಬೇಕು. ಮತ್ತು ಸಹಕಾರಿ ಸಂಘಗಳ ಅಗತ್ಯ ಕೂಡ ಇದೆ. ಎಂಬು ದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಅಮಾಲ್ಗಮೇಷನ್ ಆಫ್ ಸೊಸೈಟೀಸ್ ಬಗ್ಗೆ ಹೇಳುವುದಾದರೆ. ಅನೇಕ ಕಡೆಯಲ್ಲಿ ಇದರಿಂದ ತೊಂದರೆಯಾಗಿದೆ. ಅಮಾಲ್ಗಮೇಷನ್ ಮಾಡಿ ಬಿಟ್ಟರೆ ತೊಂದರೆ ಇರಬಾರದು ಎಂಬುದು ಇದರ ಗುರಿ. ಆದರೆ ಅದನ್ನು ಪುನರ್‌ಪರಿಶೀಲನೆ ಮಾಡು ವಂಥದ್ದು ಅಗತ್ಯ ಎಂಬುದು ನನ್ನ ಸೂಚನೆ. ನಷ್ಟದಲ್ಲಿರುವ ಸೊಸೈಟಿಯ ಜೊತೆಗೆ ಇನ್ನೊಂದು ನಷ್ಟ ದಲ್ಲಿರುವ ಸೊಸೈಟಿಯನ್ನೇ ಜೊತೆಗೂಡಿಸಿದರೆ ಹೇಗೆ ಒಳ್ಳೆಯದಾಗುವುದಿಲ್ಲವೋ ಅದೇ ರೀತಿ ನಷ್ಟದಲ್ಲಿ ರುವ ಸೊಸೈಟಿಯನ್ನು ಒಳ್ಳೆಯ ಲಾಭದಾಯಕವಾಗಿರುವ ಸೊಸೈಟಿಗೆ ಹಾಕಿ ಅದನ್ನೂ ಕೆಡಿಸಿರುವ ಉದಾಹರಣೆಗಳು ಉಂಟು. "ಸನ್ಯಾಸಿ ತಬ್ಬಿದವನಿಗೆ ಮೈಯೆಲ್ಲಾ ಬೂದಿ" ಎಂಬ ಗಾದೆಯ ಹಾಗೆ, ಒಳ್ಳೆಯ ಸಹಕಾರಿ ಸಂಘವನ್ನು ಕೆಟ್ಟ ಸಹಕಾರಿ ಸಂಘದ ಜೊತೆಯಲ್ಲಿ ಜೋಡಿಸಿ ಆ ಸಹಕಾರಿ ಸಂಘವೂ ಕೂಡ ಹಾಳಾಗಿ ಹೋಗುವ ಹಾಗೆ ಆಯಿತು. ಈ ಕುರಿತು ಪುನರ್‌ಪರಿಶೀಲನೆ ಮಾಡಬೇಕು. ಸಂಘದ ಆಡಳಿತ ಮಂಡಲಿಯವರನ್ನು ಯಾವ ರೀತಿ ಬದಲಾವಣೆ ಮಾಡ ಬೇಕೆಂಬುದನ್ನು ಯೋಜನೆ ಮಾಡಬೇಕು. ಸದ್ಯದಲ್ಲೇ ಮಂಡಲ್ ಪಂಚಾಯಿತಿಗೆ ಚುನಾವಣೆ ಗಳು ಬರುತ್ತಿವೆ. ಆದ್ದರಿಂದ ಇವುಗಳನ್ನು ಪುನರ್‌ಸಂಘಟಿಸುವುದಕ್ಕೆ ಸಾಧ್ಯವಿದೆಯೋ ಎನ್ನುವ ಕುರಿತು ಆಲೋಚನೆ ಮಾಡುವುದು ಅಗತ್ಯ ಇದೆ. ೧೯೮೭-೮೮ರಲ್ಲಿ ಅಲ್ಪಾವಧಿ ಸಾಲ ೧೩೦೦೦ ಲಕ್ಷ ಮಧ್ಯಮಾವಧಿ ಸಾಲ ೧೫೮೦ ಲಕ್ಷ ಹಾಗೂ ದೀರ್ಘಾವಧಿ ಸಾಲ ೪೦೦೦ ಲಕ್ಷ ಎಂದು ಗುರಿಯನ್ನು ಇಟ್ಟುಕೊಂಡಿದ್ದೀರಿ. ಅದು ಸಾಧನೆಯಾಗಲೆಂದು ನಾನು ಹಾರೈಸುತ್ತೇನೆ. ಆದರೆ ಇದು ೧೯೮೪-೮೫ಕ್ಕೆ ಸಾಧನೆಗೆ ಸ್ವಲ್ಪ ಕಡಿಮೆಯಾಗಿದೆ. ೧೯೮೪-೮೫ಕ್ಕೆ ಅಲ್ಪಾವಧಿ ಸಾಲ ೧೧,೫೦೦ ಲಕ್ಷ ಗುರಿ ಇದ್ದರೆ, ಸಾಧನೆ ಮಾಡಿರುವಂಥದ್ದು ೧೦೫೬೩ ಲಕ್ಷ. ಮಧ್ಯಮಾವಧಿ ಸಾಲದಲ್ಲಿ ಸ್ವಲ್ಪ ಕಡಿಮೆಯಾಗಿದೆ. ಅದೇ ರೀತಿ ದೀರ್ಘಾವಧಿ ಸಾಲದಲ್ಲಿ ಸ್ವಲ್ಪ ಹೆಚ್ಚು ಆಗಿದೆ. ಸಣ್ಣ ರೈತರಿಗೆ ಹೆಚ್ಚು ಸಹಾಯ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆ ಎಂಬುದಾಗಿ ಹೇಳಿದ್ದಾರೆ. ಅವರಿಗೆ ೩೫ ಪರ್ಸೆಂಟ್ ವರೆಗೆ ಕೊಡುವಂತಹ ಗುರಿಯು ಸಾಧನೆಯಾಗಿದ್ದರೆ, ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈ ಸಣ್ಣ ರೈತರಿಗೆ ೫೦ ಪರ್ಸೆಂಟ್‌ಗಿಂತ ಹೆಚ್ಚು ಕೊಡಬೇಕೆಂಬ ನಿಮ್ಮ ಗುರಿಯು ಸಾಧನೆಯಾಗಿದ್ದರೆ, ಅದು ಏಕೆ ಆಗುವುದಿಲ್ಲ. ಅದರ ಬಗ್ಗೆ ಈಗಲೇ ವಿಚಾರಣೆಯನ್ನು ಮಾಡುವಂತಹ ಅಗತ್ಯ ಇದೆ. ಸಾಲವನ್ನು ಕೊಡುವಂಥ ವ್ಯವಸ್ಥೆಯಲ್ಲೂ ಕೆಲವೊಂದು ಬದಲಾವಣೆ ಆಗಬೇಕು, ಅದು ಪರಂಪರೆಯ ಕ್ರಮಗಳಾಗಿ ಬರುತ್ತಿವೆ. ಎಂ.ಸಿ.ಎಸ್. ಇದನ್ನು ಪ್ರತಿ ವರ್ಷ ಮಾಡಿಸಬೇಕು. ಇವರಲ್ಲಿ ಬಹಳ ಕಂಬರ್‌ಸಮ್ ಪ್ರೋಸೆಸ್ ಇದೆ. ಇದರಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯ ಇದೆ. ಕೇರಳಾ ರಾಜ್ಯದಲ್ಲಿ ಇದನ್ನು ಮೂರು ವರ್ಷಗಳಿಗೊಂದು ಸಾರಿ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ.

೪-೩೦ ಪಿ.ಎಂ.

ಅದಕ್ಕೆ ನಬಾರ್ಡ್‌ನವರು ಅನುಮತಿ ಕೊಟ್ಟಿದ್ದಾರೆ. ಇದನ್ನು ಕುರಿತು ನಮ್ಮಲ್ಲಿ ಚಿಂತನೆ ಆಗಬೇಕು. ಇವೊತ್ತು ಸಹಕಾರಿ ರಂಗ ಮತ್ತು ಕ್ರೆಡಿಟ್ ಸೆಕ್ಟಾರ್ ಎಂಬುದು ಕವಲು ದಾರಿಯಲ್ಲಿದೆ. ವಾಣಿಜ್ಯ ಬ್ಯಾಂಕುಗಳೊಡನೆ ಸ್ಪರ್ಧೆ ಮಾಡಬೇಕಾಗಿದೆ, ರಿಜನಲ್ ಮತ್ತು ರೂರಲ್ ಬ್ಯಾಂಕುಗಳೊಡನೆ

ಸ್ಪರ್ಧೆ ಮಾಡಬೇಕಾಗಿದೆ. ಇವು ಎನ್.ಸಿ.ಎಸ್. ನಿಯಮಾವಳಿ ರೀತಿ ಸಾಲ ಕೊಡುತ್ತಿಲ್ಲ. ಇವಕ್ಕೆ ಆಡಳಿತ ಮಂಡಲಿಯ ಮಂಜೂರಾತಿ ಅಗತ್ಯವಿಲ್ಲ. ಷೇರು ಬಂಡವಾಳ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಜನರು ಆ ಕಡೆ ಆಕರ್ಷಿತರಾಗುತ್ತಿದ್ದಾರೆ ತುಂಗಭದ್ರ ಮತ್ತು ಮಲಪ್ರಭಾ ಗ್ರಾಮೀಣ ಬ್ಯಾಂಕುಗಳು ಬಹಳ ಪಾಪ್ಯುಲರ್ ಆಗುತ್ತಿವೆ ಎಂದು ಕೇಳಿದ್ದೇನೆ. ಹೀಗಾದರೆ ಸಹಕಾರಿ ರಂಗಕ್ಕೆ ಬಿಗು ನಿಯಮಗಳಿಂದಾಗಿ ಧಕ್ಕೆ ಆಗುತ್ತದೆ. ಯಾವ ರೀತಿಯಲ್ಲಿ ಸಾಲ ಕೊಡಬೇಕು. ಯಾರಿಗೆ ಅತಿ ಶೀಘ್ರವಾಗಿ ಕೊಡಬೇಕೆನ್ನುವುದರ ಬಗ್ಗೆ ವ್ಯವಸ್ಥೆ ಆಗಬೇಕು. ಅಗತ್ಯ ಇದ್ದರೆ ಬಹಿರಂಗವಾಗಿ ಸಾಲ ಕೊಡುವ ವ್ಯವಸ್ಥೆ ಆಗಬೇಕು. ಲೋನ್ ಮೇಳದ ಬಗ್ಗೆ ಟೀಕೆ ಇದೆ. ಅದಕ್ಕಾಗಿ ನಾನು ಒಂದು ಸೂಚನೆಯನ್ನು ಸಚಿವರಿಗೆ ಕೊಡಬಯಸುತ್ತೇನೆ ಅಗತ್ಯ ಇದ್ದಲ್ಲಿ ಕೋ-ಆಪರೇಟೀವ್ ಲೋನ್ ಮೇಳಗಳನ್ನು ಮಾಡಿ ಸಾಲಗಳನ್ನು ಕೊಡಿಸಿ ಯಾರಿಗೆ ಸಾಲ ಕೊಡುವುದಕ್ಕಾಗುತ್ತದೆ ಆವಾಗ ಬಹಿರಂಗವಾಗಿ ಸಾಲ ಕೊಡತಕ್ಕ ವ್ಯವಸ್ಥೆ ಆದರೆ ಈ ರಂಗ ಪುನಶ್ಚೇತನಗೊಳ್ಳುತ್ತದೆ ೧೯ ಜಿಲ್ಲಾ ಬ್ಯಾಂಕುಗಳಲ್ಲಿ ಹಿಕ್ಕ ನಬಾರ್ಡ್ ಕ್ರೆಡಿಟ್ ಲಿಮಿಟ್ ಇಲ್ಲ, ಮೈಸೂರ, ಕೋಲಾರ, ಶಿವಮೊಗ್ಗ, ಗುಲ್ಬರ್ಗಾದ ಬ್ಯಾಂಕುಗಳು ಬಹಳ ಕಷ್ಟದಲ್ಲಿವೆ ಯಾವ ಡಿಸಿಸಿ ಬ್ಯಾಂಕುಗಳಲ್ಲಿ ಕ್ರೆಡಿಟ್ ಲಿಮಿಟ್ ಇಲ್ಲವೋ ಅಲ್ಲಿ ಸಾಲ ಮಂಜೂರ್ಮಾಡುವುದು ಕಡಿಮೆಯಾಗುತ್ತಿದೆ ಒಂದೊಂದು ಜಿಲ್ಲೆಯಲ್ಲಿ ಒಂದೆರಡು ಕೋಟಿ ರೂಪಾಯಿಗಳನ್ನು ಕೊಟ್ಟರೆ ಅದು ಬಹಳಷ್ಟು ಕಡಿಮೆ. ೬-೭ ಕೋಟಿ ರೂಪಾಯಿಗಳನ್ನು ಸಾಲವಾಗಿ ಕೊಡುತ್ತಿದ್ದ ಜಿಲ್ಲೆಗಳಲ್ಲಿ ಈ ರೀತಿ ಇಳಿಮುಖವಾದರೆ ಇದು ಪ್ರಗತಿಯ ಲಕ್ಷಣ ಅಲ್ಲವೆಂದು ನಾನು ಹೇಳಬಯಸುತ್ತೇನೆ. ಅದೇ ರೀತಿ ವಸೂಲಿಯಲ್ಲಿ ಕೂಡ ಇಳಿಮುಖವಾಗಿದೆ. ಅಲ್ಪಾವಧಿ ಸಾಲ ೮೨-೮೩ರಲ್ಲಿ ೬೩ ಪರ್ಸೆಂಟ್, ೮೩-೮೪ರಲ್ಲಿ ೫೪ ಪರ್ಸೆಂಟ್ ವಸೂಲಾಗಿದೆ, ೮೪-೮೫ರದ್ದು ನನ್ನ ಹತ್ತಿರ ಪೂರ್ತಿ ಅಂಕಿ ಸಂಖ್ಯೆ ಇಲ್ಲದಿರುವುದರಿಂದ ಹೇಳುವುದಕ್ಕೆ ಹೋಗುವುದಿಲ್ಲ ಮಧ್ಯಮಾವಧಿ ಸಾಲ ೮೨-೮೩ರಲ್ಲಿ ೩೩ ಪರ್ಸೆಂಟ್, ೮೩-೮೪ರಲ್ಲಿ ೨೨ ಪರ್ಸೆಂಟ್ ವಸೂಲಾಗಿದೆ. ದೀರ್ಘಾವಧಿ ಸಾಲ ಮಾತ್ರ ಒಂದೇ ರೀತಿಯಲ್ಲಿದೆ. ಬಡ್ಡಿ ರಿಯಾಯಿತಿ ಕೊಟ್ಟವರೂ ಏತಕ್ಕೆ ಸಾಲ ವಸೂಲಾತಿಯಲ್ಲಿ ಇಳಿಮುಖವಾಗಿದೆ ಎಂದು ನಾನು ಸರ್ಕಾರದವರಲ್ಲಿ ಕೇಳಬಯಸುತ್ತೇನೆ. ಡಿಸಿಸಿ ಬ್ಯಾಂಕುಗಳನ್ನು ಟೇಕನ್ ಓವರ್ ಮಾಡಿದರೂ ಏತಕ್ಕೆ ಈ ರೀತಿ ಆಗಿದೆ ? ತಮ್ಮ ಅಧಿಕಾರಿಗಳೇ ಅಲ್ಲಿ ಅಡ್ಮಿನಿಸ್ಟ್ರೇಟರ್ ಮತ್ತು ಎಂ.ಡಿ.ಗಳು ಆಗಿದ್ದಾರೆ. ಆದರೂ ಏತಕ್ಕೆ ಇಳಿಮುಖವಾಗುತ್ತಿದೆ? ಇವೊತ್ತು ಎಲ್ಲಿ ವಸೂಲ್ಮಾಡನ್ನುವ ಬೇಕೆಕಳಕಳಿ ಅಧಿಕಾರಿಗಳಲ್ಲಿ ಇದೆಯೋ ಅಲ್ಲಿ ಶೇಕಡ ೮೦ಕ್ಕೆ ಮೇಲ್ಪಟ್ಟು ವಸೂಲಾಗಿದೆ. ಕೊಡಗು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೮೦-೮೫ ಪರ್ಸೆಂಟ್ ಸಾಲ ವಸೂಲಾಗುತ್ತಿದೆ. ಬೇರೆ ಜಿಲ್ಲೆಗಳಲ್ಲಿ ಏತಕ್ಕೆ ಬ್ಯಾಂಕುಗಳು ವಸೂಲ್ಮಾಡುವುದಕ್ಕೆ ಹೋಗುವುದಿಲ್ಲ ಎಂಬ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳುತ್ತೇನೆ ಈಗ ಬೆಳೆ ವಿಮೆ ಕಾರ್ಪೊರೇಷನ್ ಮೂಲಕ ಜಾರಿಗೆ ಬಂದಿದೆ. ಹಿಂದಿನ ವರ್ಷ ಇದರ ಕಡ್ಡಾಯ ಇರಲಿಲ್ಲ ಈ ವರ್ಷ ಕಡ್ಡಾಯ ಮಾಡಬೇಕೆಂದು ತೀರ್ಮಾನಿಸಿದ್ದಾರೆ. ಭತ್ತ, ಗೋಧಿ, ಜೋಳಗಳನ್ನು ಬೆಳೆಯಲು ಒಂದು ಸಾವಿರ ರೂಪಾಯಿಗಳ ಸಾಲ ತೆಗೆದುಕೊಂಡರೆ ಒಂದೂವರೆ ಸಾವಿರ ರೂಪಾಯಿಗಳ ಬೆಳೆ ವಿಮೆ ಮಾಡಬೇಕು. ಪ್ರೀಮಿಯಂ ಕಟ್ಟಬೇಕು. ಮುಂದೆ ಇನ್ನು ಎರಡು ಪಟ್ಟು ವಿಸ್ತರಿಸುವ ಯೋಜನೆ ಇದೆ. ಇದರ ಪರಿಸ್ಥಿತಿ ಹೇಗಿದೆ ಎಂದರೆ, ಬೆಳೆ ವಿಮೆ ಮಾಡುವ ಮೊದಲು ಕ್ರಾಪ್ ಎಕ್ಸ್‌ಪರಿಮೆಂಟ್ ಮಾಡುತ್ತಾರೆ. ಒಂದು ತಾಲ್ಲೂಕಿನಲ್ಲಿ ೧೬ ಕಡೆ ಇದನ್ನು ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‌ಮೆಂಟಿನವರು ಮಾಡುತ್ತಾರೆ ಆ ಒಂದು ಅಂದಾಜಿನ ಮೇಲೆ ದಾಖಲೆ ಇಟ್ಟುಕೊಂಡಿರುತ್ತಾರೆ. ಯಾರು ವಿಮೆ ಮಾಡಿರುತ್ತಾನೆ ಆತ ಬೆಳೆ ಹಾಳಾಗಿದೆ ಎಂದು ಅರ್ಜಿ ಹಾಕಿದರೆ ಅವನ ಬೆಳೆಯನ್ನು ಪರೀಕ್ಷೆ ಮಾಡುವುದಿಲ್ಲ ಅದಕ್ಕೆ ಬದಲು ರ್‍ಯಾಂಡಂ ಸರ್ವೆ ಮಾಡುತ್ತಾರೆ. ಆದರಲ್ಲಿ ಬೆನಿಫಿಟ್ ಸಿಕ್ಕಿದರೆ ಸಿಗುತ್ತದೆ, ಇಲ್ಲದಿದ್ದರೆ ಇಲ್ಲ ಆದ್ದರಿಂದ ಇದನ್ನು ಎಲ್ಲಿ ಅಭಾವ ಪರಿಸ್ಥಿತಿ ಇರುತ್ತದೆ ಅಂಥ ಜಿಲ್ಲೆಗಳಿಗೆ ಮಾತ್ರ ಅನ್ವಯಿಸಿಕೊಳ್ಳಿ. ಮಲೆನಾಡಿನ ಜಿಲ್ಲೆಗಳಿಗೆ ಅಥವಾ ನೀರಾವರಿ ಸೌಕರ್ಯ ಇರುವ ಜಿಲ್ಲೆಗಳಿಗೆ ಇದರ ಅಗತ್ಯವಿಲ್ಲ. ಇದರ ಸಾಲುವಾಗಿ ಸಾಕಷ್ಟು ಮನವಿಸಲಿಸಲಾಗಿದೆ ಪರಿಣಾಮ ಏನಾಗಿದೆ ಎಂದರೆ, ರಾಜ್ಯ ಮಟ್ಟದಲ್ಲಾಗಲಿ, ಅಪೆಕ್ಸ್ ಬ್ಯಾಂಕ್ ಮಟ್ಟದಲ್ಲಾಗಲಿ ಒಂದು ಇಂಚೂ ಮುಂದೆ ಹೋಗಲಿಲ್ಲ. ಅಧಿಕಾರಿಗಳು ಸರ್ಕಾರದ ಆದೇಶ ಇದೆ ಎಂದು ಪ್ರತಿವರ್ಷ ಕಡ್ಡಾಯ ಮಾಡುತ್ತಾರೆ. ಇದರ ಪರಿಣಾಮವಾಗಿ ದಕ್ಷಿಣ ಕನ್ನಡ ಜಿಲ್ಲೆ ಒಂದರಲ್ಲೇ ರೈತರು ಅನವಶ್ಯವಾಗಿ ೮ ಲಕ್ಷ ರೂಪಾಯಿಗಳನ್ನು ಪ್ರೀಮಿಯಂ ಆಗಿ ಕಟ್ಟಿದ್ದಾರೆ. ಅದರಿಂದ ಒಂದು ಅಣೆ ಪರಿಹಾರ ಇಲ್ಲದೆ ಪ್ರೀಮಿಯಂ ಕಟ್ಟಬೇಕಾದ ಪರಿಸ್ಥಿತಿ ಇದೆ. ಈ ರೀತಿ ಲಕ್ಷಾಂತರ ರೂಪಾಯಿಗಳನ್ನು ಅನವಶ್ಯಕವಾಗಿ ಬೆಳೆ ವಿಮೆ ಯೋಜನೆಯಲ್ಲಿ ತೊಡಗಿಸುವುದು ವ್ಯರ್ಥ ಅನ್ನಿಸುತ್ತದೆ. ಇದನ್ನು ಕುರಿತು ಸರ್ಕಾರ ತೀವ್ರವಾಗಿ

ಆಲೋಚಿಸಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಸರ್ಕಾರ ಬಡ್ಡಿ ರಿಯಾಯಿತಿಯ ಸವಲತ್ತನ್ನು ಜಾರಿಗೆ ತಂದಿದೆ, ಇದರಿಂದ ಏನೂ ಇಲ್ಲದಿದ್ದ ಸಂದರ್ಭದಲ್ಲಿ ಸ್ವಲ್ಪವಾದರೂ ಉಸಿರಾಡುವ ಅವಕಾಶ ಸಿಕ್ಕಿದಂತಾಗುತ್ತದೆ. ಇದು ಮೆಚ್ಚತಕ್ಕದಂತಾಗುತ್ತದೆ. ಆದರೆ ರೈತರಿಗೆ ಅಸಲು ಕಟ್ಟುವುದಕ್ಕೆ ಸಮಸ್ಯೆಯಾಗಿದೆ. ಏಕೆಂದರೆ ಅವರು ಇವತ್ತಿನ ದಿವಸ ಅಷ್ಟೊಂದು ತೊಂದರೆ ತಾಪತ್ರಯಗಳಿಗೆ ಒಳಗಾಗಿದ್ದಾರೆ. ಸರ್ಕಾರ ಈ ವರ್ಷ ಬಡ್ಡಿ ರಿಯಾಯಿತಿಗಾಗಿ ೫೦.೯೯ ಕೋಟಿ ರೂಪಾಯಿಗಳನ್ನು ಮಂಜೂರ್ಮಾಡಿದೆ. ಆ ವಿವರಗಳನ್ನೆಲ್ಲ ಈಗ ಹೇಳುವುದಕ್ಕೆ ಹೋಗುವುದಿಲ್ಲ. ಜೂನ್ ೧೯೮೧ ರಿಂದ ೧೯೮೪ರವರೆಗೆ ೨೧.೮೧ ಕೋಟಿ ರೂಪಾಯಿ ಸಹಕಾರ ಸಂಘಗಳಿಗೆ ಪಾವತಿಯಾಗಿದೆ. ೩೦-೩-೧೯೮೫ ರಲ್ಲಿ ಬಿಡುಗಡೆಯಾದ ಹಣವನ್ನು ಅಪೆಕ್ಸ್ ಬ್ಯಾಂಕಿನಲ್ಲಿ ಇಡಲಾಯಿತು. ಅದರಲ್ಲಿ ೨ ಕೋಟಿ ರೂಪಾಯಿಗಳನ್ನು ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ ಕೊಡಲಾಯಿತು. ಉಳಿದ ೨೮ ಕೋಟಿ ರೂಪಾಯಿಗಳನ್ನು ಅಪೆಕ್ಸ್ ಬ್ಯಾಂಕಿನಿಂದ ವಾಪಸ್ಸ್ ತೆಗೆದು ರಿಜಿಸ್ಟ್ರಾರ್ ಅವರ ಪಿ.ಡಿ. ಅಕೌಂಟಿನಲ್ಲಿ ಇಡಲಾಯಿತು ಇದರಲ್ಲಿ ಎಷ್ಟು ಹಣ ನಿಜವಾಗಿ ಸಹಕಾರ ಸಂಘಗಳಿಗೆ ಹೋಗಿದೆ ಎಂದು ನಾನು ಕೇಳಬಯಸುತ್ತೇನೆ. ಒಂದು ಕಾಲದಲ್ಲಿ ಬಹಳಷ್ಟು ಆರೋಪ ಬಂದಿತ್ತು. ಕೆಲವು ತಿಂಗಳ ಹಿಂದೆ ಸರ್ಕಾರದ ಹತ್ತಿರ, ಸರ್ಕಾರೀ ಸಿಬಂದಿ ವರ್ಗದವರಿಗೆ ಸಂಬಳ ಕೊಡಲು ಹಣ ಇಲ್ಲದೆ ಅಪೆಕ್ಸ್ ಬ್ಯಾಂಕಿನಿಂದ ಹಣ ತೆಗೆದರು ಎಂದು ಒಂದು ದೊಡ್ಡ ಆರೋಪ ಇತ್ತು. ಬಹುಶಃ ಇದು ಇರಬಹುದು ಅನ್ನಿಸುತ್ತದೆ. ತಾತ್ಕಾಲಿಕವಾಗಿ ಸರ್ಕಾರ ಅಡ್ಜಸ್ಟ್ ಮೆಂಟ್ ಮಾಡಿಕೊಂಡಿರಬಹುದು. ಅದನ್ನು ವಾಪಸ್ಸು ಕೊಟ್ಟಾಗಿದೆ ಎಂಬ ಮಾತನ್ನು ಈಗ ಕೇಳುತ್ತಿದ್ದೇನೆ. ಸಂತೋಷ ಇನ್ನೊಂದು ವಿಚಾರ ನನ್ನ ಗಮನಕ್ಕೆ ಬಂದಿರುವುದೇನೆಂದರೆ ಇಂಟರೆಸ್ಟ್ ಸಬ್ಸಿಡಿ ಏನಿದೆ ಇದನ್ನು ಕೆಲವು ಸಂದರ್ಭಗಳಲ್ಲಿ ಸಹಕಾರಿ ಪೇರು ಬಂಡವಾಳಕ್ಕೆ ವಜಾ ಮಾಡಿಕೊಂಡಿದ್ದಾರೆ ಸರಕಾರ ಹಿಂದೆ ಕೊಟ್ಟಂತಹ ಸಾಲಗಳಿಗೆ ವಜಾ ಹಾಕಿಕೊಂಡಿದ್ದಾರೆಂಬ ಆರೋಪ ಬಂದಿದೆ ಇದರಿಂದ ಒಂದು ಕೈಯಲ್ಲಿ ಕೊಟ್ಟು ಮತ್ತೊಂದು ಕೈಯಲ್ಲಿ ವಾಪಸು ತೆಗೆದುಕೊಂಡ ಹಾಗೆ ಆಗುತ್ತದೆ. ದಯುವಿಟ್ಟು ಇದನ್ನು ಮಾಡಬೇಡಿ. ಬಡ್ಡಿ ರಿಯಾಯಿತಿ ಹಣವನ್ನು ಕೊಡುವಾಗ ತುಂಬ ತಡವಾಗುತ್ತಿದೆ. ಈ ರೀತಿ ತಡವಾದರೆ ಸಹಕಾರ ಸಂಘಗಳ ಗತಿ ಏನು, ಡಿಸಿಸಿ. ಬ್ಯಾಂಕಿನ ಗತಿ ಏನು, ಇದನ್ನು ಸಚಿವರು ಆಲೋಚಿಸಬೇಕು. ಮಾನ್ಯ ಸಚಿವರು ಸಹಕಾರ ರಂಗದ ತಳಪಾಯದಿಂದ ಮೇಲಕ್ಕೆ ಬಂದವರು. ಅವರಿಗೆ ಎಲ್ಲಾ ಸಂಗತಿಗಳು ಚೆನ್ನಾಗಿ ತಿಳಿದಿರುತ್ತವೆ. ಒಂದರಿಂದ ಒಂದೂವರೆ ಪರ್ಸೆಂಟ್ ರಿಯಾಯಿತಿಯನ್ನು ಡಿಸಿಸಿ. ಬ್ಯಾಂಕಿನವರು ಅಪೆಕ್ಸ್ ಬ್ಯಾಂಕಿನವರೂ ಕೊಡಬೇಕೆಂದು ಇದೆ. ತಮ್ಮ ನಿಧಿಯಿಂದಲೆ ಸಾಲಕೊಟ್ಟಲ್ಲಿ. ಪ್ರೈಮರಿ ಸೊಸೈಟಿಗಳು ತಮ್ಮ ಫಂಡಿನಿಂದ ಒಂದೂವರೆ ಪರ್ಸೆಂಟ್ ಕೊಡಬೇಕೆಂದು ಮಾಡಿದ್ದಾರೆ. ಇದೆಲ್ಲ ಎಲ್ಲಿ ಸಾಧ್ಯಗುತ್ತದೆ ಇದು ಸರ್ಕಾರದ ಪಾಪ್ಯುಲರೈಸ್ಟ್ ಪ್ರೋಗ್ರಾಂ ಎಂದು ಇಟ್ಟುಕೊಳ್ಳೋಣ. ರೈತರಿಗೆ ನೆರವು ಕೊಡುವ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೋಸ್ಕರ ಸಹಕಾರ ರಂಗದಲ್ಲಿ ಕೆಲಸ ಮಾಡತಕ್ಕ ಸಂಸ್ಥೆಗಳು ಸಂಕಟ ಪಡುವುದಾದರೆ, ಆ ಸ್ಥಿತಿಗೆ ಆ ಸಂಸ್ಥೆಗಳನ್ನು ತಂದಂತಹ ಪಾಪ ಸರ್ಕಾರಕ್ಕೆ ಬರುತ್ತದೆ. ಆ ಪಾಪವನ್ನು ನೀವು ಕಟ್ಟಿಕೊಳ್ಳಬೇಡಿ ಹೇಗೂ ನೀವು ಕೊಟ್ಟಿದ್ದೀರಿ, ಅದನ್ನು ಸಂತೋಷದಿಂದ ಕೊಡಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಫಲ ಬಾವಿಗಳಿಗೆ ಸಾಲ ರಿಯಾಯಿತಿ ನೀಡುವ ಯೋಜನೆ ಇದೆ. ಅನೇಕ ಬಾರಿ ಇದು ವಿಳಂಬವಾಗುತ್ತದೆ. ಇದು ಆದಷ್ಟು ಜಾಗ್ರತೆ ವಿತರಣೆ ಆಗತಕ್ಕ ವ್ಯವಸ್ಥೆ ಆಗಬೇಕು. ಎಲ್ಲಿ ಬಾವಿ ವಿಫಲವಾಗಿದೆ ಅಲ್ಲಿ ಪುನಃ ಬಾವಿ ತೋಡಿಸುವ ವ್ಯವಸ್ಥೆ ಆಗಬೇಕು. ಅಭಾವ ಪರಿಸ್ಥಿತಿಯಲ್ಲಿ ಅಲ್ಪಾವದಿ ಸಾಲಗಳನ್ನು ಮಧ್ಯಮಾವದಿ ಸಾಲಗಳನ್ನಾಗಿ ಪರಿವರ್ತಿಸುವ ಯೋಜನೆ ಇದೆ ಇದೂ ಕೂಡ ವಿಳಂಬವಾಗುತ್ತಿದೆ. ಇದರ ಕಡೆ ಸಚಿವರು ಗಮನ ಹರಿಸಬೇಕು. ನಬಾರ್ಡ್ ಸಂಸ್ಥೆಯನ್ನು ಸ್ಥಾಪನೆ ಮಾಡಿದಾಗ ಕೃಷಿ ಸಾಲಕ್ಕೆ ವಿಶೇಷವಾದ ಪ್ರತ್ಯೇಕ ವ್ಯವಸ್ಥೆ ಆಗುತ್ತದೆಂಬ ಅಭಿಪ್ರಾಯ ಇತ್ತು. ಆದರೆ ಅದು ಈಗ ಆರ್.ಬಿ.ಐ. ಅಂಗವಾಗಿರುವುದು ಸರಿಯಲ್ಲ.

ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ಇರತಕ್ಕ ಯೋಗ್ಯವಾದ ಕಲ್ಪನೆಯನ್ನು ಹೊಂದಿದಂಥ ಬ್ಯಾಂಕ್ ಇದು ಆಗಬೇಕು ಎಂಬುದಾಗಿ ನಮ್ಮ ರಾಜ್ಯದ ಸಹಕಾರಿ ರಂಗ ಸೂಚನೆ ಕೊಡಬೇಕಾದ ಅಗತ್ಯ ಇದೆ ಎಂದು ನನಗನ್ನಿಸುತ್ತದೆ. ಮಾನ್ಯ ಅಧ್ಯಕ್ಷರೇ, ಸರ್ಕಾರ ಐದು ಜಿಲ್ಲಾ ಬ್ಯಾಂಕುಗಳ ಆಡಳಿತ ಮಂಡಳಿಯನ್ನು ರದ್ದುಪಡಿಸಿದೆ. ಆದರೂ ಕೂಡ ಜಿಲ್ಲಾ ಬ್ಯಾಂಕುಗಳ ವ್ಯವಹಾರದಲ್ಲಿ ಪ್ರಗತಿ ಇಲ್ಲ. ನಾನು ಹೇಳುತ್ತೇನೆ, ಕೆಲವೊಂದು ಸಂದರ್ಭದಲ್ಲಿ ಪ್ರಭಲವಾದ ರಾಜಕೀಯ ಹಿನ್ನೆಲೆ ಇದೆ. ಇದು

ದುರಾದೃಷ್ಟ. ಕೆಲವೊಂದು ಜಿಲ್ಲಾ ಬ್ಯಾಂಕುಗಳಿಗೆ ಸೂಪರ್‌ಸೆಷನ್‌ಗೆ ಯಾವ ಕಾರಣ ಆಯಿತೋ ಅದೇ ಕಾರಣ ಇನ್ನುಳಿದ ಡಿ.ಸಿ.ಸಿ. ಬ್ಯಾಂಕುಗಳಲ್ಲಿ ಇದ್ದರೂ ಇರಬಹುದು. ಹಾಗಿದ್ದ ಮೇಲೆ ಎಲ್ಲ ಬ್ಯಾಂಕುಗಳನ್ನೂ ಇದೇರೀತಿ ಸೂಪರ್‌ಸೆಷನ್ ಮಾಡಿದರೆ ಯಾವ ನೀತಿ ಇದು ? ಅಧಿಕಾರ ದುರುಪಯೋಗ ಮಾಡಿ ತಮ್ಮ ಕೈಗೆ ಪೂರ್ತಿ ಅಧಿಕಾರ ತೆಗೆದುಕೊಳ್ಳುವುದು ಪ್ರಜಾಪ್ರಭುತ್ವದ ಲಕ್ಷಣವಲ್ಲ. ಸರ್ಕಾರ ಇನ್ನಾದರೂ ಇದನ್ನು ಕೈಬಿಡಲಿ ಎಂದು ಹೇಳುತ್ತೇನೆ. ನಾನು ಯಾವುದು ಎಂದು ಹೆಸರು ಹೇಳುವುದಿಲ್ಲ. ಒಂದು ಡಿ.ಸಿ.ಸಿ. ಬ್ಯಾಂಕನ್ನು ಸರ್ಕಾರದವರು ಸೂಪರ್‌ಸೀಡ್ ಮಾಡಿದರು. 'ಹಿಂಬಾಗಿಲಿನಿಂದ ಹೊರತಳ್ಳಿದರೆ ಗವಾಕ್ಷಿಯಿಂದ ತೂರಿ ಬಂದ' ಎಂಬಂತೆ ಆಡಳಿತ ಮಂಡಲಿಯವರು ನೇರವಾಗಿ ಜನತಾ ಪಕ್ಷಕ್ಕೆ ಬಂದಿದ್ದಾರೆ. ಮತ್ತೆ ಅವರೇ ಚುನಾವಣೆಯಲ್ಲಿ ಗೆದ್ದು ಆಡಳಿತಕ್ಕೆ ಬಂದಿದ್ದಾರೆ. ಹೀಗಾದರೆ ಏನೂ ಮಾಡುವುದಕ್ಕೆ ಆಗದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಈ ರೀತಿ ಆಡಳಿತ ಮಂಡಳಿಯನ್ನು ವಿಸರ್ಜನೆ ಮಾಡುವಂಥಾ ಕ್ರಮವನ್ನು ಕೈಬಿಡಿ ಎಂದು ನಾನು ಹೇಳಬಯಸುತ್ತೇನೆ. ಈ ರೀತಿ ಆಡಳಿತ ಮಂಡಳಿಗಳನ್ನು ರದ್ದು ಮಾಡುತ್ತಾ ಹೋದರೆ ಡಿ.ಸಿ.ಸಿ. ಬ್ಯಾಂಕಿನ ಪ್ರತಿನಿಧಿಗಳಿಲ್ಲದೆ ಅಪೆಕ್ಸ್ ಬ್ಯಾಂಕ್ ಆಡಳಿತ ಮಂಡಳಿ ಶಿಥಿಲವಾಗುತ್ತದೆ. ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರು ಇಲ್ಲೇ ಇದ್ದಾರೆ. ಈ ಮಾತನ್ನು ಅವರೂ ಒಪ್ಪುತ್ತಾರೆಂದು ಕಾಣುತ್ತದೆ. ಇದೇರೀತಿ ಮುಂದುವರಿದರೆ ಮುಂದೆ ಒಂದು ದಿವಸ ಅಪೆಕ್ಸ್ ಬ್ಯಾಂಕ್ ಮೀಟಿಂಗಿಗೆ ಕೋರಂ ಕೂಡ ಬಾರದ ಪರಿಸ್ಥಿತಿ ಬರಬಹುದು. ಆದ್ದರಿಂದ ಈ ಕೆಲಸಕ್ಕೆ ಕೈ ಹಾಕಬಾರದೆಂದು ಹೇಳುತ್ತೇನೆ. ಜಿಲ್ಲಾ ಬ್ಯಾಂಕುಗಳು ಸಮರ್ಪಕವಾದ ಸಹಕಾರಿ ವ್ಯವಸ್ಥೆ. ಇದಕ್ಕೆ ಖಂಡಿತ ನ್ಯೂನತೆ ಬರದೇ ಇರಲಿ. ನಾನು ರೈತರ ಚಳುವಳಿ ವಿಚಾರ ಸ್ವಲ್ಪ ಹೇಳಿ ಬಿಟ್ಟಿದ್ದೆ. ರೈತರ ಚಳುವಳಿ ಜೋರಾಗಿ ಆದಾಗ ಬಡ್ಡಿ ರಿಯಾಯಿತಿ ಮಾಡಿದಿರಿ. ಆದರೆ ಇದರಲ್ಲೂ ರೈತರು ಕೇಳಿದ್ದೇ ಬೇರೆ, ತಾವು ಕೊಟ್ಟಿದ್ದೇ ಬೇರೆ ಎಂಬ ವಾದ ಇದೆ. ಆಪರೇಷನ್ ಮಾಡುವಾಗ ಕತ್ತರಿ ಒಳಗಿಟ್ಟು ಹೊಲಿದರೆ ಪೇಷೆಂಟ್ ಕೊಲಾಪ್ಸ್ ಆಗುವ ಹಾಗೆ ರೈತರ ಪರಿಸ್ಥಿತಿ ''ಆಪರೇಷನ್ಸ್ ಸಕ್ಸಸ್, ಪೇಷೆಂಟ್ ಡೈಡ್'' ಎನ್ನುವಂತಾಗಿದೆ. ರೈತರಿಗೆ ಇದರಿಂದ ಸಮಾಧಾನದಲ್ಲಿಲ್ಲ. ರೈತರು ಸಾಲದ ಸಮುದ್ರಕ್ಕೆ ಬಿದ್ದಿದ್ದಾರೆ. ಆದರೆ ಅವರನ್ನು ಮೇಲೆತ್ತುವ ವ್ಯವಸ್ಥೆ ಏನಾಗಿದೆ ಎಂಬುದನ್ನು ಹೇಳಬೇಕು. ಸಮುದ್ರ ಎಂದಾಗ ನನಗೊಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಸಮುದ್ರ ತೀರದಲ್ಲಿ ಬಂದರಿನಲ್ಲಿ ಒಬ್ಬ ನೀರಿಗೆ ಬಿದ್ದ. ಎಲ್ಲಾ ನೋಡುತ್ತಾ ನಿಂತಿದ್ದರು. ಯಾರೂ ಎಳೆದು ತೆಗೆಯುವವರಿಲ್ಲ. ಒಬ್ಬ ದಿಢೀರನೆ ಕೆಳಕ್ಕೆ ಹಾರಿ ಬಿದ್ದವನನ್ನು ಮೇಲಕ್ಕೆ ತಂದ. ನಂತರ ಮೇಲೆ ತಂದವನಿಗೆ ಸನ್ಮಾನ ಆಯಿತು. ನಮ್ಮ ದೇಶದಲ್ಲಿ ಎಲ್ಲದಕ್ಕೂ ಸನ್ಮಾನ ಮಾಡುವುದು ಸಂಪ್ರದಾಯ. ಸನ್ಮಾನ ಮಾಡಿ ಹಾಡಿದರು, ಹೊಗಳಿದರು. ಅವನ ಯೋಗ್ಯತೆಯನ್ನು ಬಣ್ಣಿಸಿದರು. ಕೊನೆಯಲ್ಲಿ ಅವನು ಹೇಳಿದ ನಾನು ಮಾತನಾಡುವುದಿರಲಿ, ಸನ್ಮಾನ ಮಾಡುವುದಿರಲಿ, ನಾನು ಸುಮ್ಮನೆ ನಿಂತಿದ್ದೆ, ನನ್ನನ್ನು ದೂಡಿದವರು ಯಾರು ಎಂದು ಕೇಳಿದ. ಬಿದ್ದಾಗ ಪ್ರಾಣಭಯ ಇದ್ದುದರಿಂದ ಇಬ್ಬರೂ ತಬ್ಬಿಕೊಂಡು ಹೇಗೋ ಮಾಡಿ ಮೇಲೆ ಬಂದಿದ್ದರು. ಮುಳುಗಿರುವವನಿಗೆ ಹುಲ್ಲು ಕಡ್ಡಿ ಸಿಕ್ಕಿದರೂ ಸಾಕು ಎಂಬಂತೆ ಆಗಿತ್ತು. ರೈತರಿಗೆ ಸ್ವಲ್ಪಮಟ್ಟಿಗೆ ತೃಪ್ತಿಯಾಗಿದ್ದರೂ ಪರಿಪೂರ್ಣವಾಗಿ ತೃಪ್ತಿಯಾಗಿಲ್ಲ. ಆದ್ದರಿಂದ ಈ ಬಗ್ಗೆ ಸಮರ್ಪಕವಾದ ವ್ಯವಸ್ಥೆಯನ್ನು ಮಾಡಬೇಕು. ರೈತರ ಕ್ಷಿಪಣಿ ಮೇಲೆ ಹತ್ತಿ ಅಧಿಕಾರಕ್ಕೆ ಬಂದು ಉಪಗ್ರಹವನ್ನೇರಿದ್ದೀರಿ. ಉಪಗ್ರಹದ ಫೋರ್ಸ್ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ತಿರುಗುತ್ತದೆ. ಆದರೆ ತಾವು ಕ್ಷಿಪಣಿಯನ್ನು ಮರೆತು ಹೋಗುತ್ತೀರಿ. ಮುಂದೆ ಏನಾಗುತ್ತದೆ ಎಂಬುದನ್ನು ಊಹಿಸಿಕೊಳ್ಳಿ. ನಾನು ಹೇಳುವುದಕ್ಕೆ ಬಯಸುವುದಿಲ್ಲ, ೧೯೮೧ರ ಮಾರ್ಚಿ ೨೭ನೇ ತಾರೀಖಿನ ದಿವಸ ವಿಧಾನ ಪರಿಷತ್ತಿನಲ್ಲಿ ಮಾನ್ಯ ಜಾಲಪ್ಪನವರು ಒಂದು ಭಾಷಣ ಮಾಡುವಾಗ ನೀರಾವರಿ ಬಾವಿಗಳಿಗೆ ಸರ್ಕಾರವೇ ಹಣ ಕೊಟ್ಟು ರೈತರಿಂದ ವಾಟರ್ ರೇಟ್ ಏತಕ್ಕೆ ವಸೂಲು ಮಾಡಬಾರದು ಎಂಬ ಸೂಚನೆ ಕೊಟ್ಟಿದ್ದಾರೆ. ಮಾನ್ಯ ಸಹಕಾರ ಸಚಿವರಿಗೆ ಈಗ ಅವಕಾಶ ಬಂದಿದೆ. ಆದ್ದರಿಂದ ಇದರ ಬಗ್ಗೆ ಆಲೋಚನೆ ಮಾಡಬೇಕು. "The concessions which have been extended to the farmers of project areas should also be extended to the farmers of non-project areas" ಎಂದಿದ್ದಾರೆ. ಇದು ನ್ಯಾಯವಾದ ಮಾತು. ಬಾವಿ ತೋಡಿಸಿ ಬೋರ್‌ವೆಲ್ ಹಾಕಿಸಿ ೭೫ ಪರ್ಸೆಂಟ್ ಬೋರ್‌ವೆಲ್‌ಗೆ ಸಬ್ಸಿಡಿ ಕೊಡಿ ಎಂದು ತಾವೇ ಹೇಳಿದ್ದೀರಿ. ಆದರೆ ಈಗ ಅದು ಅನುಷ್ಠಾನಕ್ಕೆ ಬಂದಿಲ್ಲ ೧೯೭೫-೭೬ರಲ್ಲಿ ಬಾವಿಗೆ ೩ ಪರ್ಸೆಂಟ್ ಸಾಲ ಕೊಟ್ಟು ಉಳಿದದ್ದನ್ನು ಸರ್ಕಾರದಿಂದ ಸಬ್ಸಿಡಿ ಕೊಡುವ ಪದ್ಧತಿ ಇತ್ತು. ಈಗಲಾದರೂ ಅದನ್ನು ಜಾರಿಗೆ ತನ್ನಿ ಎಂದು ಮಾನ್ಯ ಸಹಕಾರ ಸಚಿವರ ಹತ್ತಿರ

ಹೇಳುತ್ತಿದ್ದೇನೆ. ದಂಡನೆ ಬಡ್ಡಿ ವೇವ್ ಮಾಡುವುದು ಅಗತ್ಯ. ಈ ಕುರಿತು ಹೊರಡಿಸಿರುವ ಆದೇಶಗಳು ಸಮರ್ಪಕವಾಗಿಲ್ಲ. ರಾಜ್ಯದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಸಾಧನೆ ಸಾಕಷ್ಟಿದ್ದರೂ ಕೂಡ ಇನ್ನೂ ಪ್ರಗತಿಗೆ ಅವಕಾಶ ಇದೆ. ೭ನೇ ಯೋಜನೆಯಲ್ಲಿ ಬೃಹತ್ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಆದರೆ ೧೭೭ ಪ್ರಾಥಮಿಕ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ೧೦೫ ನಷ್ಟದಲ್ಲಿವೆ, ೭೭ ಲಾಭದಲ್ಲಿವೆ. ೩೬೦ ಲಕ್ಷ ರೂಪಾಯಿಗಳ ನಷ್ಟವಾಗಿದ್ದರೆ, ೭೭ ಪ್ರಾಥಮಿಕ ಕೃಷಿ ಗ್ರಾಮೀಣ ಬ್ಯಾಂಕ್‌ಗಳಲ್ಲಿ ೧೦೦ ಲಕ್ಷ ರೂಪಾಯಿಗಳ ಲಾಭದಲ್ಲಿದೆ. ನಷ್ಟದಲ್ಲಿರುವುದನ್ನು ಪುನರುಜ್ಜೀವನಗೊಳಿಸಬೇಕು. ಎಲ್ಲಾ ಕೆಲಸಗಳೂ ಪಿ ಎಲ್.ಡಿ.ಬಿ. ಮಟ್ಟದಲ್ಲೇ ಆಗುವಂತೆ ಮಾಡಬೇಕು. ಎಲ್ಲಾ ರೆಕಾರ್ಡ್‌ಗಳೂ ಅಲ್ಲೇ ಆಗಬೇಕು. ಒಮ್ಮೆ ಸಾಲ ಮಂಜೂರಾದರೆ ನಂತರ ಎರಡನೇ ಹಂತದಲ್ಲಿ ಮಂಜೂರಾತಿಗೆ ಬೆಂಗಳೂರಿಗೆ ಬರಬೇಕಾಗುತ್ತದೆ. ಇದು ಏತಕ್ಕೆ ? ಇದನ್ನು ತೆಗೆಯಬೇಕು. ಒಂದು ಸಲ ಸಾಲ ಮಂಜೂರಾದ ನಂತರ ಯಾವ ಸ್ಟೇಜಿನಲ್ಲೇ ಇರಲಿ ಬ್ರಾಂಚ್ ಆಫೀಸ್ ಮೂಲಕ ಆಗುವಹಾಗೆ ಮಾಡಬೇಕು. ಭೂ ಸುಧಾರಣೆಯಲ್ಲಿ ಮಾಲೀಕತ್ವದ ಹಕ್ಕು ಪಡೆಯಲು ಸಾಲ ಕೊಡುವ ಯೋಜನೆ ಇದೆ. ಭೂಸುಧಾರಣೆಯಲ್ಲಿ ಪರಿಹಾರವನ್ನು ಕೊಡಬೇಕಾಗಿಲ್ಲ ಎಂಬ ಕಾನೂನನ್ನು ಸರ್ಕಾರ ಜಾರಿಗೆ ತಂದಿದೆ. ಆದರೆ ಸಾಲದ ಹೊರೆ ಮಾತ್ರ ರೈತರ ಮೇಲಿದೆ. ಈ ಕುರಿತು ಚಿಂತನೆ ಮಾಡಬೇಕು. ಇದನ್ನು ವಜಾ ಮಾಡುವ ಅವಶ್ಯಕತೆ ಇದೆ. ರೈತರ ಅವಶ್ಯಕತೆಗಳನ್ನು ಪೂರೈಕೆ ಮಾಡುವುದಕ್ಕೆ, ಉತ್ಪನ್ನಗಳನ್ನು ನ್ಯಾಯ ಬೆಲೆಯಲ್ಲಿ ಮಾರಾಟ ಮಾಡುವುದಕ್ಕೆ, ಸಂಸ್ಕರಣ ಮಾಡುವುದಕ್ಕೆ ಮಾರ್ಕೆಟಿಂಗ್ ಸೊಸೈಟಿಗಳಿವೆ. ಆದರೆ ಇದರಲ್ಲಿ ಶೇಕಡ ೮೫ರಷ್ಟು ಸಂಘಗಳು ನಷ್ಟದಲ್ಲಿವೆ. ಒಟ್ಟು ನಷ್ಟದ ಅಂದಾಜು ೨ ಕೋಟಿ ರೂಪಾಯಿಗಳು. ಗೊಬ್ಬರವನ್ನು ಕಾರ್ಖಾನೆಗಳಿಂದ ನೇರವಾಗಿ ಖರೀದಿ ಮಾಡಿ ಮಾರ್ಕೆಟಿಂಗ್ ಸೊಸೈಟಿಗಳು ಕೊಡುವ ಹಾಗೆ ವ್ಯವಸ್ಥೆಯಾದರೆ ಸ್ವಲ್ಪಮಟ್ಟಿಗೆ ಲಾಭ ಬರುತ್ತದೆ. ಇದನ್ನು ಕುರಿತು ಆಲೋಚನೆ ಮಾಡಬೇಕು. ಕೃಷಿ ಉತ್ಪನ್ನದ ಆಧಾರದ ಒತ್ತೆ ಸಾಲಕ್ಕೆ ಕಡಿಮೆ ಬಡ್ಡಿಯಲ್ಲಿ ಹಣ ಪೂರೈಸುವ ವ್ಯವಸ್ಥೆ ಆಗಬೇಕು. ಸಕ್ಕರೆ, ಸೀಮೆಎಣ್ಣೆ ಇದರಲ್ಲಿ ಷಾರ್ಟೇಜ್ ಬರುತ್ತದೆ. ಸಿಮೆಂಟ್ ಟ್ರಾನ್ಸ್‌ಪೋರ್ಟ್ ಚಾರ್ಜ್‌ನಿಂದಾಗಿ ಸಾಕಷ್ಟು ನಷ್ಟ ಅನುಭವಿಸುತ್ತಿದ್ದಾರೆ. ಇದರ ಕುರಿತು ಸರ್ಕಾರ ಚಿಂತನೆ ಮಾಡಬೇಕು. ಹಿಂದೆ ಸರ್ಕಾರದ ಒತ್ತಾಯದಿಂದಾಗಿ ಅಕ್ಕಿ ಗಿರಣಿಗಳು ಸ್ಥಾಪಿತವಾಗಿವೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವು ನಷ್ಟದಲ್ಲಿವೆ. ಈಗಿನ ಲೆವಿ ನೀತಿ ಪ್ರಕಾರ ಕಷ್ಟವಾಗುತ್ತಿದೆ. ಟಿ.ಎ.ಪಿ.ಸಿ.ಎಂ.ಎಸ್. ಗಳಿಗೆ ಇದರಲ್ಲಿ ವಿನಾಯಿತಿ ನೀಡಬೇಕು. ಕರ್ನಾಟಕ ಆಹಾರ ನಿಗಮದ ಬಟ್ಟಿಯನ್ನು ಕೋ-ಆಪರೇಟೀವ್ ಮಿಲ್‌ಗಳಿಗೆ ಕೊಡಬೇಕೆಂದು ಹೇಳಬಯಸುತ್ತೇನೆ.

ಉಪಾಧ್ಯಕ್ಷರು.—ನೀವು ಪ್ರಾರಂಭ ಮಾಡಿ ಒಂದು ಗಂಟೆಯಾಯಿತು, ಇನ್ನು ಮೂರು ನಾಲ್ಕು ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀ ಜಿ ಎಸ್. ಆಚಾರ್,—ನಮ್ಮಲ್ಲಿ ಗ್ರಾಹಕರ ಸಹಕಾರ ಸಂಘಗಳು ಇವೆ. ಗ್ರಾಹಕರ ಚಳುವಳಿ ಗ್ರಾಹಕರ ರಂಗದಲ್ಲಿ ಪಿ.ಎ.ಸಿ.ಎಸ್. ಲೆವೆಲ್‌ನಲ್ಲಿ ಆಗಬೇಕು. ರೀಟೇಲ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ಎಲ್ಲಾ ಸಂಘಗಳಲ್ಲಿ ಇರುವಂತಾಗಬೇಕು. ೨೦ ಅಂಶದ ಕಾರ್ಯಕ್ರಮದ ಪ್ರಕಾರ ದುರ್ಬಲ ವರ್ಗದವರಿಗೆ ಬಳಕೆ ವಸ್ತುಗಳ ವಿತರಣೆ ಮಾಡುವುದು ಪ್ರಮುಖ್ಯವಾದುದು. ಆದ್ದರಿಂದ ಗ್ರಾಹಕರ ಸಹಕಾರಿ ಸಂಘಗಳನು ಬಲಪಡಿಸುವಂಥಾದ್ದು ಅತೀ ಅಗತ್ಯವಿದೆ. ಇತ್ತೀಚೆಗೆ ಆಹಾರ ಮಂತ್ರಿಗಳು ನಿರುದ್ಯೋಗಿಗಳಿಗೆ ಅಂಗಡಿಗಳನ್ನು ತೆರೆಯಲು ಅನುಮತಿ ನೀಡುತ್ತೇವೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಅಪೇಕ್ಷೆಪಡುತ್ತೇನೆ. ಗ್ರಾಹಕರ ಸಹಕಾರ ಸಂಘಗಳನ್ನು ತೆಗೆದುಬಿಟ್ಟು ಖಾಸಗಿಯಾಗಿ ಅಂಗಡಿಗಳನ್ನು ಸ್ಥಾಪನೆ ಮಾಡುವ ಕಾರ್ಯ ಉತ್ಕೃಷ್ಟವಾದುದಲ್ಲ. ಗ್ರಾಹಕರ ಸಂಘಗಳು ಮೇಲೆ ಬರಬೇಕಾದರೆ ಸಹಕಾರಿ ರಂಗದಲ್ಲಿ ಗ್ರಾಹಕ ಚಟುವಟಿಕೆ ಉನ್ನತ ಮಟ್ಟಕ್ಕೆ ಬರಬೇಕಾದರೆ ಸೇಲ್ಸ್ ಟ್ಯಾಕ್ಸ್‌ನಲ್ಲಿ ರಿಯಾಯಿತಿ ನೀಡುವ ವ್ಯವಸ್ಥೆ ಆಗಬೇಕು.

ಈ ಸಹಕಾರಿ ರಂಗದಲ್ಲಿ ರಾಮನ ಲೆಕ್ಕ, ಕೃಷ್ಣನ ಲೆಕ್ಕ ಎಂದು ಇಲ್ಲ. ಆದುದರಿಂದ ಇದಕ್ಕೆ ಬೇಕಾದ ನೆರವನ್ನು ತಾವು ಕೊಡಬೇಕು. ಇವತ್ತು ಟ್ರಾನ್ಸ್‌ಪೋರ್ಟ್ ಛಾರ್ಜಿನಲ್ಲಿ ಏನು ಷಾರ್ಟೇಜ್ ಇದೆ. ಏನು ನಷ್ಟ ಇದೆ ಅದನ್ನು ತುಂಬಿಕೊಳ್ಳುವ ವ್ಯವಸ್ಥೆ ಸಹಕಾರಿ ರಂಗದಲ್ಲಿ ಆಗಬೇಕೆನ್ನುವ ಮಾತನ್ನು ನಾನು ಹೇಳುತ್ತೇನೆ. ಇವತ್ತು ನಮ್ಮಲ್ಲಿ ೧೯೦೨ ಕೈಗಾರಿಕಾ ಸಂಘಗಳು ಇದ್ದು ಅವುಗಳಲ್ಲಿ ಶೇಕಡಾ ೫೧ರಷ್ಟು ನಿದ್ರಿಸುತ್ತಿವೆ. ಇವನ್ನು ಇವೊತ್ತು ಪುನಶ್ಚೇತನಗೊಳಿಸತಕ್ಕದ್ದು ಅಗತ್ಯ ಇದೆ. ಇವತ್ತು

ಜಿಲ್ಲಾ ಮಟ್ಟದಲ್ಲಿ ಕೈಗಾರಿಕಾ ಬ್ಯಾಂಕ್ ಇಲ್ಲ. ತಾಲ್ಲೂಕು ಮಟ್ಟದಲ್ಲಿ ಇವು ನಿಷ್ಕ್ರಿಯವಾಗಿವೆ. ರಾಜ್ಯ ಕೈಗಾರಿಕಾ ಬ್ಯಾಂಕ್ ರಾಜಧಾನಿಯಿಂದ ನೇರವಾಗಿ ಉದ್ಯಮಿಗಳಿಗೆ ಸಾಲ ಕೊಡುವ ವ್ಯವಸ್ಥೆ ಇದೆ. ಇದರಿಂದಾಗಿ ಕಂಟ್ರೋಲ್ ಮತ್ತು ಸೂಪರ್‌ವಿಷನ್ ಸರಿಯಾಗಿ ಆಗುತ್ತಾ ಇಲ್ಲ. ಹಾಗೂ ಸರಿಯಾಗಿ ವಸೂಲಾತಿ ಇಲ್ಲ. ಆದುದರಿಂದ ಇದನ್ನು ಪುನಶ್ಚೇತನಗೊಳಿಸುವ ವ್ಯವಸ್ಥೆಯಾಗಬೇಕೆಂದು ನಾನು ಹೇಳುತ್ತೇನೆ ಇವೊತ್ತು ರಾಜ್ಯ ಕೈಮಗ್ಗ ಸಹಕಾರಿ ಫೆಡರೇಷನ್ ಇದೆ. ಕೇಟೆಕ್ಸ್ ಇದೆ. ನನಗೆ ಬಂದ ವರ್ತಮಾನದ ಪ್ರಕಾರ ಸಹಕಾರಿ ರಂಗದಲ್ಲಿ ಅಥವಾ ವ್ಯಾಪಾರದ ಅನುಭವ ಇಲ್ಲದೇ ಇರುವವರು ಒಬ್ಬರನ್ನು ಅಸಿಸ್ಟೆಂಟ್ ಕಮಿಷನರ್‌ರನ್ನು ಸ್ಪೆಷಲ್ ಆಫೀಸರ್ ಆಗಿ ಇಲ್ಲಿ ಹಾಕಿದ್ದಾರೆ. ಯಾವುದೇ ವ್ಯಕ್ತಿಯನ್ನು ಟೀಕೆ ಮಾಡುವುದಕ್ಕೆ ನಾನು ಇದನ್ನು ಹೇಳುತ್ತಿಲ್ಲ. ಆದರೆ ಯಾವುದೋ ಒಬ್ಬ ಸಹಕಾರಿ ಅಧಿಕಾರಿಯನ್ನು ನೇಮಿಸುವಾಗ ಸಹಕಾರಿ ರಂಗದಲ್ಲಿನ ಹಿನ್ನೆಲೆ, ಮಾರಾಟದ ಹಿನ್ನೆಲೆ ಇರುವ ಒಬ್ಬ ವ್ಯಕ್ತಿಯನ್ನು ಹಾಕಬೇಕು ಎನ್ನುವ ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಸರ್ಕಾರದ ಸಹಕಾರಿ ಕೈಮಗ್ಗ ಸೊಸೈಟಿಗಳು ಅನೇಕ ಇವೆ. ಜನತಾ ಸೀರೆ ಮತ್ತು ಧೋತಿ ಕೊಡಬೇಕೆಂದು ಸರ್ಕಾರದ ಯೋಜನೆ ಇದೆ. ಇದನ್ನು ತಾವು ಸಹಕಾರಿ ರಂಗಕ್ಕೇ ಕೊಡಿ. ಇವುಗಳನ್ನು ನೀವು ಹೊರಗಡೆಯಿಂದ ತರಿಸುವುದು ಬೇಡ ಎನ್ನುವ ವಿಚಾರವನ್ನು ಹೇಳುತ್ತೇನೆ. ಸಹಕಾರಿ ಬೀಡಿ ಫೆಡರೇಷನ್ ಮಾಡಬೇಕೆನ್ನುವ ಒಂದು ಕೂಗು ಸಹಕಾರಿ ರಂಗದಲ್ಲಿ ಇದೆ. ಒಂದು ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರೈಮರಿ ಲೆವೆಲ್ ಸಹಕಾರಿ ಸಂಘಗಳನ್ನು ಹುಟ್ಟುಹಾಕಲಾಯಿತು. ಅವುಗಳು ಇವೊತ್ತು ಕೂಡ ಕೆಲಸ ಮಾಡುತ್ತಿಲ್ಲ. ಫೆಡರೇಷನ್ ಮಾಡಬೇಕೆನ್ನುವ ಒಂದು ವಿಚಾರ ಸರ್ಕಾರದ ಮುಂದೆ ಇದ್ದರೂ ಕೂಡಾ ಇದು ಕೆಲಸ ಆಗಿಲ್ಲ. ಇನ್ನು ನಮ್ಮ ರಾಜ್ಯದಲ್ಲಿ ಮೂರು ಹಣ್ಣು ಸಂಸ್ಕರಣಾ ಸಂಘಗಳು ಇವೆ. ಶಿರಸಿ, ಕುಶಾಲನಗರ, ಗೋಣಿಕೊಪ್ಪಲ್‌ನಲ್ಲಿ, ಇವು ನಿಷ್ಕ್ರಿಯವಾಗಿವೆ. ಇವಕ್ಕೆ ಹೇರಳ ಬಂಡವಾಳವನ್ನು ಕೊಟ್ಟು ಮೆಷಿನರಿಯನ್ನು ಹಾಕಲಾಗಿದೆ. ಇವತ್ತು ಖಾಸಗೀ ರಂಗದಲ್ಲಿ ಇರುವ ಸಂಘಗಳಿಂದ ಒಳ್ಳೆಯ ಕೆಲಸಗಳು ಆಗುತ್ತಿದ್ದು, ನಮ್ಮ ಸಂಘಗಳು ಏಕೆ ಒಳ್ಳೆಯ ಕೆಲಸ ನಡೆಸುತ್ತಿಲ್ಲ. ಉದಾಹರಣೆಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರೊಸೆಸಿಂಗ್ ಯೂನಿಟ್ ಇದೆ ಕರ್ನಾಟಕ ಮತ್ತು ಕೇರಳದ ಜಂಟಿ ಕಾರ್ಯ ನಿರೂಪಣೆಯಿಂದ ನಿರ್ವಹಿಸಲ್ಪಟ್ಟ ಕಂಕೋ ಇದಾಗಿದೆ. ಇದು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಾ ಇದೆ. ಅದೇ ರೀತಿ ಹೊಗೇ ಸೊಪ್ಪನ್ನು ತಯಾರಿಸಲ್ಪಡುವ ಇನ್ನೊಂದು ಸಂಸ್ಥೆ ಏಕೆ ಕೆಲಸ ಮಾಡುತ್ತಿಲ್ಲ ? ಇದರ ಕುರಿತು ಚಿಂತನೆ ಆಗಬೇಕಾಗಿದೆ.

ಇನ್ನು ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ೧೬ ಸಕ್ಕರೆ ಕಾರ್ಖಾನೆಗಳು ಇದ್ದು ಇವುಗಳಲ್ಲಿ ೧೫ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿವೆ. ಇವುಗಳಲ್ಲಿ ಸುಮಾರು ೪೦ ಕೋಟಿ ರೂಪಾಯಿಗಳಿಗೂ ಮೀರಿ ನಷ್ಟ ಇದೆ. ರೈತರ ಜೀವನಾಡಿ ಆಗಬೇಕಾದ ಸಹಕಾರಿ ಸಕ್ಕರೆ ಕಾರ್ಖಾನೆಗಳು ಜೀವ ಹಿಂಡುವ ಬಾಡಿಗಳಾಗಿವೆ. ಇವೊತ್ತು ಮಹಾರಾಷ್ಟ್ರದಲ್ಲಿ, ಉತ್ತರ ಪ್ರದೇಶದಲ್ಲಿ ಪರಿಸ್ಥಿತಿ ಹೀಗೇ ಇದೆಯೋ ಇದನ್ನು ಕುರಿತು ಸ್ವಲ್ಪ ಪರಿಶೀಲನೆ ಮಾಡಬೇಕು. ಏನೋ ಒತ್ತಾಯಕ್ಕೆ ಮಣಿದು ಹೊಸ ಕಾರ್ಖಾನೆಗಳನ್ನು ಮಾಡಬೇಡಿ. ಇರುವ ಸಕ್ಕರೆ ಕಾರ್ಖಾನೆಗಳು ತಮ್ಮ ಕಾಲಮೇಲೆ ತಾವು ನಿಲ್ಲುವ ಹಾಗೆ ನೋಡಿಕೊಳ್ಳಬೇಕೆಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ, ಇಷ್ಟು ಕನಿಷ್ಟ ಪರಿಸ್ಥಿತಿಯಲ್ಲಿ ಇದ್ದರೂ ಕೂಡಾ ಸಕ್ಕರೆ ಕಾರ್ಖಾನೆಗಳು ರೈತರಿಗೆ ಇನ್ನೂ ಅನುಕೂಲ ಕೊಡುತ್ತಿವೆ. ಒಂದು ವಿಚಾರ ಹೇಳಬೇಕೆಂದರೆ ಪತ್ರಿಕೆಗಳಲ್ಲಿ ಬಂದ ವಾದ್ವಾನಿ, ಮಹಾಲಿಂಗಂ ಅವರಿಗಿಂತ ನಮ್ಮ ಸಕ್ಕರೆ ಕಾರ್ಖಾನೆಗಳು ಎಷ್ಟೋ ಲೇಸು ಆದ್ದರಿಂದ ಸಕ್ಕರೆ ಕಾರ್ಖಾನೆಗಳನ್ನು ಬಲಪಡಿಸಿ ಎಂದು ಮಾನ್ಯ ಸಹಕಾರಿ ಸಚಿವರನ್ನು ಕೇಳುತ್ತಿದ್ದೇನೆ. ದಕ್ಷಿಣ ಕನ್ನಡದಲ್ಲಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ಆರಂಭವಾಗಿದೆ. ಇವೊತ್ತು ಅದು ಏನಾಗಿದೆ ಎಂದರೆ, ಹುಟ್ಟುವಾಗಲೇ ಸಾಯುವ ಪರಿಸ್ಥಿತಿ ಅದಕ್ಕೆ ಬಂದಿದೆ. ಅಲ್ಲಿ ಬೇಕಾದಷ್ಟು ನೀರಾವರಿ ಸೌಕರ್ಯ ಇಲ್ಲ. ಇದು ಯಾವುದೋ ಒಂದು ಕಾಲದಲ್ಲಿ ಕಬ್ಬು ಸಾಕಷ್ಟು ಸಿಗಬಹುದು ಎಂದು ಪ್ರಾರಂಭವಾಯಿತು. ಅಲ್ಲಿ ವಾರಾಹಿ ಯೋಜನೆ ಆಗದೇ ಅಲ್ಲಿ ಕಬ್ಬು ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲಾ ನಾನು ಮೊನ್ನೆ ಪಿ.ಡಬ್ಲ್ಯು.ಡಿ. ವಿಚಾರದಲ್ಲಿ ಮಾತನಾಡುವಾಗ ಹೇಳಿದ್ದೆ. ವಾರಾಹಿ ಯೋಜನೆಯನ್ನು ಬಹಳ ದೊಡ್ಡ ಯೋಜನೆಯಾಗಿ ತೆಗೆದುಕೊಳ್ಳುವುದರ ಬದಲಿಗೆ ಡೈವರ್ಷನ್ ವಾಲ್ ಎಂದು ೯ ಕೋಟಿ ರೂಪಾಯಿಗಳ ಯೋಜನೆಯನ್ನು ತೆಗೆದುಕೊಳ್ಳಿ, ೬೦ ಸಾವಿರ ಎಕರೆ ಬದಲು ೩೦ ಸಾವಿರ ಎಕರೆ

ಇದರಿಂದ ಇರಿಗೇಟ್ ಆಗುತ್ತದೆ. ಮತ್ತು ೧,೮೦೦ ಹೆಕ್ಟೇರ್ ಕಾಡು ನಾಶವಾಗುವುದರ ಬದಲು ಕೇವಲ ೧೦೦ ಹೆಕ್ಟೇರ್ ಅರಣ್ಯ ನಾಶದಲ್ಲಿ ಇದು ಆಗುತ್ತದೆ. ಇದರಿಂದ ಎಕಲಾಜಿಕಲ್ ಬ್ಯಾಲೆನ್ಸ್ ತಪ್ಪುವುದಿಲ್ಲ ಎನ್ನುವ ವಿಚಾರವನ್ನು ನಾನು ಹೇಳಿದ್ದೇನೆ. ಈ ಒಂದು ವಿಚಾರದ ಬಗ್ಗೆ ಸಹಕಾರಿ ಸಚಿವರು ನೀರಾವರಿ ಖಾತೆಗೆ ಶಿಫಾರಸ್ಸು ಮಾಡಿ ಈ ಒಂದು ನೀರಾವರಿ ಯೋಜನೆ ಆಗಬೇಕು. ಕಬ್ಬು ಬೆಳೆಯುವುದಕ್ಕೆ ಬೇಕಾದ ನೀರನ್ನು ಒದಗಿಸುವ ವ್ಯವಸ್ಥೆ ಆಗಬೇಕು. ನಮ್ಮ ದಕ್ಷಿಣ ಕನ್ನಡದ ಸಹಕಾರಿ ಕಾರ್ಖಾನೆ ಎನ್ನುವಂತಹದ್ದು ಕರ್ನಾಟಕ ರಾಜ್ಯದಲ್ಲಿ ಇರುವುದು ಒಂದೇ ಒಂದು ಪೋರ್ಟ್ ಮಿಲ್-ಸಕ್ಕರೆ ಕಾರ್ಖಾನೆ. ಆದುದರಿಂದ ಈಗ ರಾ ಶುಗರ್‌ನ್ನು ಇಂಪೋರ್ಟ್ ಮಾಡಬೇಕು ಎನ್ನುವುದು ಕೇಂದ್ರ ಸರ್ಕಾರದ ನೀತಿಯಾಗಿದೆ. ಯಾವುದನ್ನು ಇಂಪೋರ್ಟ್ ಮಾಡುತ್ತಾರೋ ಅದನ್ನು ಮಂಗಳೂರು ಬಂದರು ಮೂಲಕ ಸಂಸ್ಕರಣ ಮಾಡುವುದಕ್ಕೆ ಸಾಧ್ಯವಿದೆ. ಈ ಒಂದು ಫೆಸಲಿಟಿಯನ್ನು ನಮ್ಮ ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಕೊಡಬೇಕೆನ್ನುವ ವಿಚಾರವನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ, ಇನ್ನೊಂದು ವಿಚಾರವನ್ನು ಈಗ ಹೇಳುತ್ತೇನೆ. ಅದು ಮೊಲ್ಯಾಸಸ್ ಬಗ್ಗೆ ಎ ಗ್ರೇಡ್ ಮೊಲ್ಯಾಸಸ್ ಟನ್‌ಗೆ ೬೫ ರೂಪಾಯಿಯಂತೆ ಅಬಕಾರಿ ಇಲಾಖೆಯಿಂದ ಮಾರಾಟವಾಗುತ್ತಿದೆ. ಇದನ್ನು ಯಾರು ನಿಗಧಿ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಓಪನ್ ಮಾರ್ಕೆಟ್‌ನಲ್ಲಿ ಈಗ ೨,೫೦೦-೦೦ ರೂಪಾಯಿಗಳು ಒಂದು ಟನ್‌ಗೆ ಇದೆ. ಸಹಕಾರಿ ಸಂಸ್ಥೆಗಳನ್ನು ಬೋಳಿಸಿ ಡಿಸ್ಟಿಲರಿ ಬೆಳೆಸುವಂತಹ ವ್ಯವಸ್ಥೆ ಆಗಬಾರದು. ಈ ಹಣ ಸಹಕಾರಿ ಸಂಸ್ಥೆಗಳಿಗೆ ಸಿಕ್ಕುವುದಾದರೆ ಇವೊತ್ತು ನಮ್ಮ ಸಕ್ಕರೆ ಕಾರ್ಖಾನೆಗಳು ಸ್ವಲ್ಪ ಒಳ್ಳೆಯ ಸ್ಥಿತಿಗೆ ಬರುವುದಕ್ಕೆ ಸಾಧ್ಯವಾಗುತ್ತದೆ. ಗೃಹ ನಿರ್ಮಾಣ ಬಹಳ ದೊಡ್ಡ ಸಮಸ್ಯೆಯಾಗಿದೆ. ಇವತ್ತು ರಾಜ್ಯದಲ್ಲಿ ಒಂದು ಬೃಹತ್ ಗೃಹ ನಿರ್ಮಾಣದ ನೀತಿಯನ್ನು ರೂಪಿಸಬೇಕಾಗಿದೆ. ಹಾಗೂ ಸಾಕಷ್ಟು ಹಣವನ್ನು ಒದಗಿಸಬೇಕು. ಗೃಹ ನಿರ್ಮಾಣದ ಮಹಾ-ಮಂಡಲ ಎಲ್ಲಾ ವಿಷಯಕ್ಕೂ ಎಲ್. ಐ. ಸಿ. ನಿಂದ ಸಾಲವನ್ನು ತೆಗೆದುಕೊಂಡು ಬಂದು ಸಾಲ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಆದರೂ ಕೂಡಾ ಇವೊತ್ತು ೮೦ ಪರ್ಸೆಂಟ್ ವಸೂಲಾತಿ ಆಗುತ್ತಿದೆ. ಇದು ಒಂದು ಶುಭದಾಯಕವಾದ ಸೂಚನೆ. ಷೆಡ್ಯೂಲ್ಡ್ ಕ್ಯಾಸ್ಟ್ ಹೌಸಿಂಗ್ ಕಾರ್ಪೋರೇಷನ್ ಇದೆ. ಅದು ತೀರಾ ನಿಷ್ಕ್ರಿಯವಾಗಿತ್ತು. ಒಂದು ಸಂತೋಷದ ವಿಷಯ ಎಂದರೆ ಇಂಟರೆಸ್ಟ್ ಫ್ರೀ ಲೋನ್ ಕೊಡಬೇಕೆಂದು ಹೊಸ ಒಂದು ಕ್ಲಾಸ್ ಹಾಕಿದ್ದಾರೆ. ಈಗ ಅದನ್ನು ಪುನಶ್ಚೇತನಗೊಳ್ಳುವ ಹಾಗೆ ಮಾಡಬೇಕು. ಇತ್ತೀಚೆಗೆ ಮಾರಾಟ ತೆರಿಗೆ ಹಾಕುವ ವಿಧಾನದಿಂದಾಗಿ ಹೌಸಿಂಗ್ ಫ್ಯಾಕ್ಟರ್‌ಗೆ ಬಹಳ ಹೊಡೆತ ಬಿದ್ದಿದೆ. ಮನೆ ಕಟ್ಟುವುದಕ್ಕೆ ಸೇಲ್ಸ್ ಟ್ಯಾಕ್ಸ್ ಕಿಟಕಿ ಬಾಗಿಲು ಜೋಡಿಸುವುದಕ್ಕೆ ಸೇಲ್ಸ್ ಟ್ಯಾಕ್ಸ್ ರೂಫಿಂಗ್ ಟೈಲ್ಸ್‌ಗೆ, ಮಾಳಿಗೆಗೆ ಹಾಕುವ ಟೈಲ್ಸ್‌ಗೆ, ಮನೆಗೆ ಬೇಕಾಗುವ ವಿದ್ಯುತ್ ಉಪಕರಣಗಳಿಗೆ, ಬಣ್ಣಕ್ಕೆ, ಪಂಬ್ಲಿಂಗ್ ಮೆಟೀರಿಯಲ್ಸ್‌ಗೆ ಸೇಲ್ಸ್ ಟ್ಯಾಕ್ಸ್ ಕೊಡಬೇಕು. ಇವೆಲ್ಲಕ್ಕೂ ಪ್ರತ್ಯೇಕ ಮಾರಾಟ ತೆರಿಗೆ ಹಾಕುವುದರಿಂದ ಮನೆ ಕಟ್ಟುವ ವಿಧಾನವೇ ಬಹಳಕಷ್ಟವಾಗಿದೆ. ಇದರಲ್ಲಿ ಕೋ-ಆಪರೇಟಿವ್ ಸೆಕ್ಟಾರ್‌ಗಾದರೂ ವಿನಾಯಿತಿಯನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ಇನ್ನು ರಿಜಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ ೮ ಸಾವಿರ ರೂಪಾಯಿಗಳವರೆಗೆ ವಿನಾಯಿತಿ ಹಾಗೂ ಅನಂತರ ೫೦ ಪರ್ಸೆಂಟ್ ವಿನಾಯಿತಿ ಸ್ಟಾಂಪ್ ಡ್ಯೂಟಿನಲ್ಲಿ ಹಿಂದೆ ಇತ್ತು. ರಾಜ್ಯ ಹೌಸಿಂಗ್ ಕಾನ್‌ಫರೆನ್ಸ್‌ನಲ್ಲಿ ಈ ಬಗ್ಗೆ ಚರ್ಚೆಯಾಗಿದ್ದು ಇವಕ್ಕೆ ಮಾನ್ಯತೆ ಕೊಡಲಾಗಿದೆ, ಶೀಘ್ರವಾಗಿ ಮಂಜೂರಾತಿ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದರು, ವರ್ಷ ಎರಡು ಆದರೂ ಇದಕ್ಕೆ ಮಂಜೂರಾತಿ ಬರಲಿಲ್ಲ. ಈ ವಿನಾಯಿತಿ ಹೌಸಿಂಗ್ ಸೆಕ್ಟಾರ್‌ಗೆ ಅಷ್ಟೇ ಅಲ್ಲ ಪಿ.ಎ.ಸಿ.ಎಸ್. ಹಾಗೂ ಪಿ.ಎಲ್.ಡಿ.ಬಿ.ಗಳಿಗೂ ಕೂಡಾ ಅಗತ್ಯ ಎನ್ನುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇನ್ನು ಮೀನುಗಾರಿಕಾ ಸಹಕಾರ ಸಂಘಗಳದ್ದು ಇನ್ನೊಂದು ಅವಸ್ಥೆ ಇದೆ. ಸಹಕಾರಿ ರಂಗದ ಸಮಗ್ರವಾದ ಒಂದು ಪರಿಚಯವನ್ನು ಮಾಡುತ್ತಾ ಇರುವುದರಿಂದ ನನಗೆ ಕೆಲವು ನಿಮಿಷಗಳ ಅವಧಿ ಹೆಚ್ಚು ಬೇಕಾಗುತ್ತದೆ. ತಾವು ದಯಮಾಡಿ ಆ ಅವಕಾಶವನ್ನು ಒದಗಿಸುತ್ತೀರಿ ಎಂದು ತಿಳಿದಿದ್ದೇನೆ.

ಉಪಾಧ್ಯಕ್ಷರು.—ದಯವಿಟ್ಟು ೫ ಗಂಟೆಯೊಳಗೆ ಮುಗಿಸಿ.

ಶ್ರೀ ಜಿ. ಎಸ್. ಆಚಾರ್ಯ.—ಇನ್ನು ೧೦-೧೫ ನಿಮಿಷಗಳಲ್ಲಿ ನಾನು ಮುಗಿಸುತ್ತೇನೆ. ಅನೇಕ ವರ್ಷಗಳ ನಮ್ಮಲ್ಲಿ ಹಿಂದೆ ಮೀನಿನ ಕ್ಷಾಮ ಬಂದಾಗ ಡಿಸ್ಟ್ರೆಸ್ ರಿಲೀಫ್ ಲೋನ್ ಎಂದು ಸರ್ಕಾರದಿಂದ ಕೊಡಲಾಗಿತ್ತು. ಇದು ದುರ್ಬಲರಿಗೆ ಕೊಟ್ಟ ಸಾಲ. ಕೆಲವೇ ಲಕ್ಷ ಸಾಲ ಇತ್ತು. ಇದನ್ನು ವಿನಾಯಿತಿ

ಮಾಡುತ್ತೇವೆ ಎಂದು ಸರ್ಕಾರ ಘೋಷಣೆ ಮಾಡಿತ್ತು, ಈಗ ಮೀನುಗಾರರಿಗೆ ಏನು ಆಗಿದೆ ಎಂದರೆ, ಅವರಿಗೆ ಹೊಸ ಸಾಲ ಸಿಗುತ್ತಾ ಇಲ್ಲ. ಅವರು ಮಿಡಲ್ ಮೇನ್‌ನಿಂದ ಹೆಚ್ಚಿಗೆ ಹಣವನ್ನು ಸಾಲ ಪಡೆದುಕೊಂಡು, ಯಾವು ಯಾವುದೋ ಅವಿಃಷಕ್ಕೆ ಒಳಗಾಗಿ ಕಡಿಮೆ ದರಕ್ಕೆ ಮೀನನ್ನು ಮಾರುವ ತೊಡಕಿಗೆ ಅವರು ಬಿದ್ದಿದ್ದಾರೆ.

೫-೦೦ ಪಿ. ಎಂ.

ಈ ಸಾಲವನ್ನು ವಿನಾಯಿತಿಗೊಳಿಸಬೇಕು. ಇದೇ ರೀತಿ ಕೃಷಿ ಸಾಲವನ್ನೂ ಕೂಡ ವಿನಾಯಿತಿಗೊಳಿಸಬೇಕು. ಅಷ್ಟೇ ಅಲ್ಲ ಕೃಷಿಸಾಲವನ್ನು ಅವರಿಗೆ ಕೊಡುವಂತೆ ಈ ಸಾಲವನೂ ಕೂಡ ಇನ್ನು ಮುಂದೆಯೂ ಕೊಡುವಂತೆ ವ್ಯವಸ್ಥೆ ಮಾಡಬೇಕು. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ೨ ಮೀನುಗಾರಿಕಾ ಮಾರ್ಕೆಟಿಂಗ್ ಫೆಡರೇಷನ್ ಇವೆ. ಅನೇಕ ವರ್ಷಗಳ ಹಿಂದೆ ಯಾವ ಖಾಸಗೀ ಬ್ಯಾಂಕುಗಳೂ ಮುಂಗಡ ಹಣ ಕೊಡುವುದಕ್ಕೆ ಮುಂದೆಬಾರದ ಸಂದರ್ಭದಲ್ಲಿ ಯಾಂತ್ರೀಕೃತ ದೋಣಿಗಳನ್ನು ಹಾಕಲಿಕ್ಕೆ ಈ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಸಾಲವನ್ನು ಕೊಟ್ಟವು ಈಗ ಇವು ಹಳೆಯ ಎಂಜಿನ್‌ಗಳೆಂಬ ಕಾರಣದಿಂದಾಗಿ ಹೆಚ್ಚಿಗೆ ಇಳುವರಿ ಬರುತ್ತಿಲ್ಲ. ಆ ಯಾಂತ್ರಿಕ ದೋಣಿಗಳೆಲ್ಲಾ ಕಡಿಮೆ ಹಣಕ್ಕೆ ಮಾರಾಟವಾಗಿ ಹೋದುವು. ಇದರ ಪರಿಣಾಮವಾಗಿ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಬ್ಯಾಂಕ್‌ಗೆ ೭೨ ಲಕ್ಷ ರೂಪಾಯಿಗಳ ಅಸಲು ಮತ್ತು ೬೫ ಲಕ್ಷ ರೂಪಾಯಿಗಳ ಬಡ್ಡಿ ವಾಪಸು ಬಾರದೆ ಈಗ ಈ ಬ್ಯಾಂಕ್ ನಷ್ಟವನ್ನು ಅನುಭವಿಸತಕ್ಕ ಪರಿಸ್ಥಿತಿ ಬಂದಿದೆ, ಇತ್ತೀಚೆಗೆ ಮಾನ್ಯ ಸಹಕಾರಿ ಸಚಿವರು ಈ ಬಗ್ಗೆ ಒಂದು ಸಭೆಯನ್ನು ಕರೆದಿದ್ದರೆಂಬ ವಿಚಾರವನ್ನು ನಾನು ಕೇಳಿದ್ದೇನೆ ಆ ಸಭೆಯಲ್ಲಿ ಇದನ್ನು ರೀಫೇಸ್ ಮಾಡಿ ಎನ್ನತಕ್ಕ ಸೂಚನೆ ಬಂತು ಎಂತಲೂ ಕೇಳಿದ್ದೇನೆ. ಈ ರೀತಿಯ ರೀಫೇಸ್‌ನಿಂದಾಗಿ ಏನೂ ಗುಣವಾಗುವುದಿಲ್ಲ. ಆದ್ದರಿಂದ ಗ್ಯಾರಂಟಿ ನಿಂತಿರತಕ್ಕ ಸರ್ಕಾರವೇ ಇವುಗಳಿಗೆ ಷಾರ್ಟ್ ಟರ್ಮ್ ಲೋನ್‌ನ್ನು ಕೊಡಬೇಕು. ಇದೇ ರೀತಿಯಲ್ಲಿ ಡಿ.ಸಿ.ಸಿ. ಬ್ಯಾಂಕ್‌ಗಳಂತೆ ಅರ್ಬನ್ ಬ್ಯಾಂಕ್‌ಗಳನ್ನು ಮುಳುಗುವಂತೆ ಮಾಡಬಾರದೆಂಬ ಅರಿಕೆಯನ್ನು ಮಾಡುತ್ತಿದ್ದೇನೆ. ಬಹುಶಃ ಮಹಾರಾಷ್ಟ್ರ ಗುಜರಾತನ್ನು ಬಿಟ್ಟರೆ ಅತಿ ಹೆಚ್ಚಿಗೆ ಅರ್ಬನ್ ಬ್ಯಾಂಕ್‌ಗಳು ನಮ್ಮ ಕರ್ನಾಟಕ ರಾಜ್ಯದಲ್ಲಿವೆ. ೪.೭೫ ಕೋಟಿ ರೂಪಾಯಿಗಳ ಲಾಭವನ್ನು ಇವು ಗಳಿಸಿವೆ. ಆದರೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಈಗ ರೂ. ೫೦ ಸಾವಿರದವರೆಗೂ ಭದ್ರತೆಗೆ ಇನ್‌ಕಂಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಬೇಡ. ಅದರ ಮೇಲೆ ಇರಬೇಕೆಂದು ನಿಯಮ ಇದೆಯೆಂದು ಒಬ್ಬರು ಅರ್ಬನ್ ಬ್ಯಾಂಕ್‌ನ ಮಿತ್ರರು ಹೇಳಿದರು. ಆ ರೀತಿ ಏನಾದರೂ ಇದ್ದರೆ ಅದನ್ನು ವಿನಾಯಿತಿಗೊಳಿಸಬೇಕು. ಭದ್ರತೆಯ ಮೇಲೆ ತೆಗೆದುಕೊಳ್ಳತಕ್ಕ ಸಾಲ ಇದಾಗಿರುವುದರಿಂದ ಇದರ ಮೇಲೆ ಇನ್‌ಕಂಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ನಿಯಮ ಹಾಕಬೇಕಾಗಿಲ್ಲ. ಅರ್ಬನ್ ಬ್ಯಾಂಕುಗಳಿಗೆ ಸಬ್ಸಿಡಿ under special component scheme ಎನ್ನುವಂಥ ಸ್ಕೀಂನ್ನು ತಾವು ಜಾರಿಗೆ ತರುತ್ತಿದ್ದೀರಿ. ಇದು ಬಹಳ ಶ್ಲಾಘನೀಯ. ನಾನು ಹೇಳುತ್ತಿದ್ದೇನೆ ಇದನ್ನು ತಾವು ಗ್ರಾಮೀಣ ಸಹಕಾರ ಬ್ಯಾಂಕ್‌ಗಳ ಮಟ್ಟದಲ್ಲಿ ಸಹ ಜಾರಿಗೆ ತನ್ನಿ. ಈ ಅನುಕೂಲ ಗ್ರಾಮೀಣ ಮಟ್ಟದಲ್ಲಿರತಕ್ಕ ಜನರಿಗೂ ಸಿಕ್ಕಲಿ ಎನ್ನತಕ್ಕ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ೩೧-೩-೮೫ ಕ್ಕೆ ೧೯,೬೦೦ ಅರ್ಬಿಟ್ರೇಷನ್ ಕೇಸುಗಳು ಪೆಂಡಿಂಗ್ ಇವೆ. ಈ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ದಯವಿಟ್ಟು ಕೋರ್ಟುಗಳನ್ನು ಸ್ಥಾಪನೆ ಮಾಡಿ ತೀವ್ರವಾಗಿ ಈ ಕೇಸುಗಳು ಇತ್ಯರ್ಥವಾಗುವಂತೆ ಮಾಡಿ, ೩,೨೯,೪೬೬ ಕೇಸುಗಳು ೫೬ ಕೋಟಿ ರೂಪಾಯಿಗೆ ಎಕ್ಸಿಕ್ಯೂಷನ್‌ಗೆ ಬಾಕಿ ಇವೆ. ಇದು ತೀವ್ರವಾಗಿ ಆಗಬೇಕು. ರೀ ಹ್ಯಾಬಿಲಿಟೇಷನ್ ಆಫ್ ಸೊಸೈಟೀಸ್ ನಮ್ಮಲ್ಲಿ ಆಗಬೇಕು, ಎಷ್ಟೋ ವರ್ಷಗಳಿಂದ ಈ ಸಾಲ ಬಾಕಿ ಇದೆ. ಸೊಸೈಟಿಗಳಿಂದ ಡಿ.ಸಿ.ಸಿ. ಬ್ಯಾಂಕ್‌ಗೆ ಕೊಡುವುದಕ್ಕಾಗುವುದಿಲ್ಲ, ಅಥವಾ ರೈತರು ಸೊಸೈಟಿಗೆ ಕೊಡುವುದಕ್ಕಾಗುತ್ತಿಲ್ಲ. ಇದರಿಂದಾಗಿ ಅಕೌಂಟ್ ಬುಕ್‌ನಲ್ಲಿ ಬಡ್ಡಿ ಬೆಳೆಯುತ್ತಾ ಹೋಗುತ್ತಿದೆ. ಆದರೆ ವಸೂಲಿ ಮಾತ್ರ ಆಗುತ್ತಿಲ್ಲ. ಇದು ವಸೂಲಿಯಾಗತಕ್ಕ ವ್ಯವಸ್ಥೆಯಾಗಬೇಕು. Blocking of over dues at a particular stage. ಇದರ ಬಗ್ಗೆ ನಮ್ಮ ಮಾನ್ಯ ಸಹಕಾರಿ ಸಚಿವರು ಪ್ರಾಕ್ಟಿಕಲ್ ಆಗಿ ಯೋಚನೆ ಮಾಡಬೇಕೆಂದು ಹೇಳುತ್ತಿದ್ದೇನೆ. ಮಿಸ್ ಅಪ್ರೋಪ್ರಿಯೇಷನ್ ಆದಂಥ ಸಂದರ್ಭದಲ್ಲಿ ಕ್ರಿಮಿನಲ್ ಇನ್‌ವೆಸ್ಟಿಗೇಷನ್ ಆಗುವುದು ತುಂಬಾ ವಿಳಂಬವಾಗುತ್ತಿದೆ. ಕೋರ್ಟ್ ಪ್ರೊಸೀಡಿಂಗ್ಸ್ ಕೂಡ ತುಂಬಾ ವಿಳಂಬವಾಗುತ್ತಿದೆ. ಇದನ್ನು ಆದಷ್ಟು ತೀವ್ರವಾಗಿ ಇತ್ಯರ್ಥವಾಗುವಂತೆ ಮಾಡಬೇಕು. ಮತ್ತು ಮುಂದೆ ಮಿಸ್ ಅಪ್ರೋಪ್ರಿಯೇಷನ್ ಆಗದಿರುವ ರೀತಿಯಲ್ಲಿ ಕ್ರಮ ಕೈಗೊಳ್ಳಲು

ತಾವು ಚಿಂತನೆ ಮಾಡಬೇಕೆಂದು ಹೇಳುತ್ತಿದ್ದೇನೆ. ವಿಶ್ವ ಬ್ಯಾಂಕ್‌ನ ಯೋಜನೆಯ ಪ್ರಕಾರ ೧.೮೦ ಲಕ್ಷ ಮೆಟ್ರಿಕ್ ಟನ್ ಸಾಮರ್ಥ್ಯದ ೮೮೦ ಗೋಡೌನ್‌ಗಳು ನಮ್ಮ ಪ್ರೈಮರಿ ಅಗ್ರಿಕಲ್ಚರಲ್ ಸೊಸೈಟಿಗಳಿಗೂ ೧೧೬ ಗೋಡೌನ್‌ಗಳು ಮಾರ್ಕೆಟಿಂಗ್ ಸೊಸೈಟಿಗಳಿಗೂ ಸ್ಥಾಪನೆಯಾಗುತ್ತಿವೆ. ಇದು ಕೂಡ ಶ್ಲಾಘನೀಯ. ಆದರೆ ನಾನು ಒಂದು ಸೂಚನೆಯನ್ನು ಕೊಡುತ್ತಿದ್ದೇನೆ. ಪ್ರೈಮರಿ ಸೊಸೈಟಿಗಳ ಮಟ್ಟದಲ್ಲಿ ಒಂದು ಗ್ರಾಹಕರ ವಿಭಾಗ, ಆಫೀಸ್ ಇತ್ಯಾದಿ ಮಾಡುವುದಕ್ಕೆ ಅವಕಾಶ ಇದೆ. ಇದರ ಜೊತೆಗೆ ಬ್ಯಾಂಕಿಂಗ್ ಕೌಂಟರ್ ಸೇಫ್ ರೂಂನ್ನು ತಾವು ದಯವಿಟ್ಟು ಒದಗಿಸುವ ವ್ಯವಸ್ಥೆ ಮಾಡಿ. ಅಪೆಕ್ಸ್ ಬ್ಯಾಂಕ್‌ನಲ್ಲಿ ವಿಶೇಷ ಸಹಾಯ ನಿಧಿ ಇದೆ. ಇದರ ಜೊತೆಗೆ ಸರ್ಕಾರದವರೂ ಕೂಡ ಸ್ವಲ್ಪ ಹಣವನ್ನು ಸೇರಿಸಿ ಈ ಒಂದು ವ್ಯವಸ್ಥೆಯನ್ನು ಸಹಕಾರಿ ರಂಗಗಳಲ್ಲಿ ಮಾಡಬೇಕು ಎಂದು ಕೇಳಿ ಕೊಳ್ಳುತ್ತಿದ್ದೇನೆ,

ಇನ್ನು ಮಾರ್ಕೆಟಿಂಗ್ ಇಲಾಖೆಯ ವಿಚಾರದಲ್ಲಿ ಸಂಕ್ಷಿಪ್ತವಾಗಿ ಒಂದೆರಡು ಮಾತನ್ನು ಹೇಳಲಿಕ್ಕೆ ಅಪೇಕ್ಷಿಪಡುತ್ತೇನೆ. ವ್ಯಾಪಾರದಲ್ಲಿ ಆಗತಕ್ಕ ದುರ್ವ್ಯವಹಾರ ನಿರ್ನಾಮವಾಗಬೇಕು. ಕೊಳ್ಳುವವರ ಮತ್ತು ಮಾರುವವರ ಅನುಕೂಲಕ್ಕಾಗಿ ಎ.ಪಿ.ಎಂ.ಸಿ ಗಳನ್ನು ರಚಿಸಲಾಗಿದೆ. ಆದರೆ ನಿರ್ವಹಣಾ ಮುಂಗಡ ಪತ್ರದಲ್ಲಿ ೫.೮೧,೨೮೦ ರೂಪಾಯಿಗಳ ಯೋಜನೆಯಲ್ಲಿ ೫.೧೬ ಲಕ್ಷ ರೂಪಾಯಿಗಳು ಕೇವಲ ಸಿಬ್ಬಂದಿಗೋಸ್ಕರ ವ್ಯಯವಾಗುತ್ತಿದೆ. ಆದ್ದರಿಂದ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳತಕ್ಕದ್ದು ಎಂದರೆ ಮಾರ್ಕೆಟ್ ವ್ಯಾಪಾರದಲ್ಲಿ ಆಗತಕ್ಕ ದುರ್ವ್ಯವಹಾರ ಕಡಿಮೆ ಆಗಬೇಕಾದುದರ ಜೊತೆಗೆ ಸಿಬ್ಬಂದಿವರ್ಗದ ದುರ್ವ್ಯವಹಾರ ಏನಾದರೂ ಇದ್ದಲ್ಲಿ ಅದೂ ಕೂಡ ಹೋಗಬೇಕೆಂದು ಹೇಳಬಯಸುತ್ತೇನೆ. ತೂಕ ಸರಿಯಾಗಿ ಇರುವಂತೆ ನೋಡಿಕೊಳ್ಳಬೇಕು. ಮಾರಾಟವಾದ ತಕ್ಷಣ ರೈತರಿಗೆ ಹಣ ಪಾವತಿ ಆಗಬೇಕು. ಉದಾಹರಣೆಗೆ ಹೇಳುವುದಾದರೆ, ಮಂಗಳೂರು ಮಾರ್ಕೆಟ್ ನಲ್ಲಿ ಒಂದು ರಗಳೆ ಇದೆ. ಅದು ಏನೆಂದರೆ, ಅಡಿಕೆ ಮಾರಾಟವಾದ ನಂತರ ೧೫-೨೦ ದಿವಸ ಬಿಟ್ಟು ನಾಟ್ ಸೇಲ್ ಎಂದು ಮಾಡಿ ಅನಂತರ ಅದನ್ನು ರೀ ಸೇಲ್‌ಗೆ ಇಟ್ಟು ಅಲ್ಲಿ ಕಡಿಮೆ ದರದಲ್ಲಿ ಮಾರಾಟ ಮಾಡತಕ್ಕದ್ದು ನಡೆಯುತ್ತಿದೆ. ಮೊದಲು ಇದು ರೈತರಿಗೆ ಗೊತ್ತಾಗುವುದಿಲ್ಲ. ಇದು ರೀ ಸೇಲ್‌ಗೆ ಆದಾಗ ಮಾತ್ರ ಅವರಿಗೆ ಗೊತ್ತಾಗುತ್ತದೆ, ಇದರಿಂದಾಗಿ ರೈತರು ನಷ್ಟಕ್ಕೆ ಒಳಗಾಗುತ್ತಾರೆ. ಕಮಿಷನ್ ಏಜೆಂಟ್‌ಗಳು ಮತ್ತು ಟ್ರೇಡರ್ಸ್ ಒಟ್ಟಿಗೇ ಸೇರಿ ರೈತರಿಗೆ ಅನ್ಯಾಯ ಮಾಡುವುದಕ್ಕೆ ಇಲ್ಲಿ ಸಾಧ್ಯತೆ ಇದೆ. ಇದು ಆಗದ ಹಾಗೆ ತಾವು ನೋಡಿಕೊಳ್ಳಬೇಕು

ಇನ್ನು ಮಾರ್ಕೆಟ್ ಪ್ರಾಂಗಣದಲ್ಲಿ ಹೆಚ್ಚಿಗೆ ಸೆಸ್‌ನ್ನು ವಸೂಲ್ಮಾಡುವುದರ ಮೂಲಕ ರೈತರಿಗೆ ಅನ್ಯಾಯವಾಗುತ್ತಿದೆ. ತಮ್ಮ ಮೂಲಕ ನಾನು ಸರ್ಕಾರದಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಆದಷ್ಟು ಬೇಗ ಈ ಮಾರ್ಕೆಟ್ ಪ್ರಾಂಗಣಗಳಲ್ಲಿ ಸರಿಯಾಗಿ ರಸೀತಿಯನ್ನು ಕೊಡತಕ್ಕ ವ್ಯವಸ್ಥೆಯಾಗಬೇಕು. ವಿಶ್ವ ಬ್ಯಾಂಕ್ ಯೋಜನೆಯ ಪ್ರಕಾರ ಕೆಲವು ಪ್ರಾಂಗಣಗಳು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಚಿತವಾಗಿವೆ. ಬೇರೆ ಬೇರೆ ಕಡೆಗಳಲ್ಲಿ ಒಂದೊಂದು ತಾಲ್ಲೂಕಿಗೆ ಒಂದೊಂದು ಎ. ಪಿ. ಎಂ ಸಿ. ಇದ್ದರೆ, ನಮ್ಮಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಎ. ಪಿ. ಎಂ. ಸಿ. ಇದೆ. ಇದು ಬೈಫರ್ಕೇಟ್ ಆಗಬೇಕೆಂಬ ಸೂಚನೆ ಇತ್ತು. ಅದು ಇನ್ನೋ ಒಂದು ಕಾರಣದಿಂದ ನಿಂತುಹೋಯಿತು. ಕುಂದಾಪುರದಲ್ಲಿ ಒಂದು ಉಪ ಮಾರುಕಟ್ಟೆ ಸ್ಥಾಪನೆಯಾಗಿದೆ. ಕಳೆದ ವರ್ಷ ಅಥವಾ ಅದರ ಹಿಂದಿನ ವರ್ಷ ಯಾರೋ ಒಬ್ಬರು ಸಚಿವರು ಆ ಮಾರುಕಟ್ಟೆಯ ಉದ್ಘಾಟನೆಯನ್ನು ಮಾಡಿದರು. ಆದರೆ ವ್ಯಾಪಾರವನ್ನು ಅಲ್ಲಿಗೆ ಬದಲಾಯಿಸಿಲ್ಲ. ಹಿಂದಿನ ಮಾರುಕಟ್ಟೆ ಪ್ರಾಂಗಣದಲ್ಲೇ ವ್ಯಾಪಾರ ನಡೆಯುತ್ತಿದೆ. ಹೊಸ ಮಾರುಕಟ್ಟೆಗೆ ವ್ಯಾಪಾರಿಗಳು ಬರುತ್ತಿಲ್ಲ. ಹಳೇ ಮಾರುಕಟ್ಟೆಯಲ್ಲಿ ರಶೀತಿಗಳನ್ನು ಕೊಡುತ್ತಿಲ್ಲ. ಇದರಿಂದ ಏನಾಗಿದೆ ಎಂದರೆ ಈ ಎರಡೂ ಮಾರ್ಕೆಟ್‌ಗಳಲ್ಲಿ ಸೆಸ್‌ನ್ನು ಕಲೆಕ್ಟ್ ಮಾಡುತ್ತಿಲ್ಲ. ಆ ಮಾರುಕಟ್ಟೆ ಸಮಿತಿಗೆ ನಷ್ಟವಾಗುತ್ತಿದೆ. ಇದರಲ್ಲಿ ಸಮಿತಿಯ ಒಂದು ಒಳ ರಾಜಕೀಯ ಇದೆ. ಅದನ್ನು ತೀರ್ಮಾನ ಮಾಡಬೇಕು. ಉಡುಪಿ ಪುತ್ತೂರಿನಲ್ಲಿ ಲಕ್ಷಗಟ್ಟಲೇ ಹಣವನ್ನು ಮಾರ್ಕೆಟ್ ಕಟ್ಟಡಕ್ಕಾಗಿ ಖರ್ಚು ಮಾಡಿದ್ದರೂ ಅದು ಪೂರ್ತಿಯಾಗದೆ ಅರ್ಧಕ್ಕೆ ನಿಂತಿದೆ. ಮಂಗಳೂರು ಬೈಕಂಪಾಡಿಯಲ್ಲಿ ಬಹಳಷ್ಟು ಜಾಗವನ್ನು ಸ್ವಾಧೀನ ಮಾಡಿಕೊಂಡು ಅಲ್ಲಿ ಒಂದು ದೊಡ್ಡ ಮಾರುಕಟ್ಟೆಯನ್ನು ರಚಿಸಬೇಕೆಂದು ಯೋಚನೆ ಮಾಡಿದರು, ಆದರೆ ಆ ಸ್ವಾಧೀನಪಡಿಸಿಕೊಂಡ ಜಾಗವನ್ನು ಬೇರೆಯವರು ಆಕ್ರಮಣ ಮಾಡಿಕೊಂಡಿದ್ದಾರೆ. ಈಗ ತಾವು ಅದನ್ನು ತೆರವು ಮಾಡಿಸಬೇಕು. ಚುನಾಯಿತ ಮಂಡಲಿಯ ಜೊತೆಗೆ ತಾವು ಸಾಮಂಕರಣ ಮಾಡಿ ಒಂದು ಆಡಳಿತ ಮಂಡಳಿ ಅಯ್ಕೆಯಾಗುವಂತೆ

ಮಾಡಿದ್ದೀರಿ. ಆ ಮಂಡಲಿಯನ್ನು ಮಾಡಿದ ಪರಿಣಾಮ ಈ ರೀತಿಯಾದರೆ. ಹೀಗೆ ನಿಷ್ಕ್ರಿಯವಾದರೆ ಉಪ ಮಾರುಕಟ್ಟೆ ಸರಿಯಾಗಿ ಕೆಲಸ ಮಾಡದಿದ್ದರೆ ಭೂ ಸ್ವಾಧೀನಪಡಿಸಿಕೊಂಡ ಜಾಗವನ್ನು ತಮ್ಮ ವಶಕ್ಕೆ ವಾಪಸು ತೆಗೆದುಕೊಳ್ಳದೇ ಹೋದರೆ ಏನಾಗಬಹುದೆಂಬುದನ್ನು ತಾವು ಯೋಚನೆ ಮಾಡಬೇಕು. ಇದರ ಬಗ್ಗೆ ತಾವು ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಆಡಳಿತಾಧಿಕಾರಿಗಳು ಇದ್ದ ಸಂದರ್ಭದಲ್ಲಿ ಎಸ್ಟಿಮೇಟ್ ಇಲ್ಲದೆ, ಮಂಜೂರಾತಿ ಇಲ್ಲದೆ, ಮಾರುಕಟ್ಟೆಯ ಕೆಲಸಗಳಾಗಿವೆ. ಇದರ ಬಗ್ಗೆ ಅಮೂಲಾಗ್ರವಾದ ತನಿಖೆಯನ್ನು ಮಾಡಿಸಬೇಕು.

ಇನ್ನು ತೂಕ ಮತ್ತು ಅಳತೆ ಇಲಾಖೆಯಲ್ಲಿ ಸಾಕಷ್ಟು ನಿಯಮಗಳ ಉಲ್ಲಂಘನೆ ಆಗಿವೆ. ಹೀಗಾಗದಂತೆ ನೋಡಬೇಕು. ಮಾರುಕಟ್ಟೆ ಸಮಿತಿಗೆ ಚುನಾವಣೆಯಾಗಿರುವುದು ಶ್ಲಾಘನೀಯ. ಇದೇ ರೀತಿ ಸಹಕಾರಿ ವ್ಯವಸ್ಥೆಗೂ ಚುನಾವಣೆಯಾಗಿರುವುದು ಶ್ಲಾಘನೀಯ. ಈ ಸರ್ಕಾರ ಚುನಾವಣೆಗಳನ್ನು ಮುಂದೂಡುವುದರಲ್ಲೇ ಒಂದು ರೀತಿಯ ಪ್ರಗತಿಯನ್ನು ಸಾಧಿಸಿದೆ. ಹಿಂದಿನ ಸರ್ಕಾರಕ್ಕೂ ಇಂದಿನ ಸರ್ಕಾರಕ್ಕೂ ಹೋಲಿಕೆ ಮಾಡಿ ನೋಡಿದರೆ, ಹಿಂದಿನ ಸರ್ಕಾರ ೮೧–೮೨ ರವರೆಗೆ ೩ ಸಾರಿ ಚುನಾವಣೆಗಳನ್ನು ಮುಂದೂಡಿತ್ತು. ಆದರೆ ಈ ಸರ್ಕಾರ ೮೩–೮೫ ರವರೆಗೆ ೬–೭ ಸಾರಿ ಚುನಾವಣೆಗಳನ್ನು ಮುಂದೂಡಿ ಪ್ರಗತಿಯನ್ನು ಸಾಧಿಸಿದೆ. ಈಗಲಾದರೂ ಚುನಾವಣೆಯನ್ನು ಮಾಡಿರುವುದಕ್ಕೆ ಸಂತೋಷ ವ್ಯಕ್ತಪಡಿಸಬೇಕಾಗಿದೆ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗೂ ಚುನಾವಣೆಯನ್ನು ಬೇಗ ಮಾಡಬೇಕು. ಸಹಕಾರಿ ಕ್ಷೇತ್ರವು ಎಲ್ಲಿ ಜನರಿಗೆ ಬೇಕಾಗುತ್ತದೆ ಅಲ್ಲಿ ಗಟ್ಟಿಯಾಗಿ ನಿಲ್ಲುತ್ತದೆ. ಚೆನ್ನಾಗಿ ಬೆಳೆಯುತ್ತದೆ. ಉದಾಹರಣೆಗೆ ಹೇಳುವುದಾದರೆ ಮಂಗಳೂರು ಕ್ಯಾಂಕೋ. ರೈತರು ಸಂಕಷ್ಟಕ್ಕೆ ಒಳಗಾದಾಗ ಈ ಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ಈಗ ಇದು ಬಹಳ ವಿಸ್ತಾರವಾಗಿ ಬೆಳೆಯುತ್ತಿದೆ. ಇದು ಜನರ ಚಳುವಳಿಯಾಗಬೇಕು. ಜನರ ಆರ್ಥಿಕ ಸಾಮಾಜಿಕ ಚಳುವಳಿಯಾಗಿ ಬೆಳೆದು ಬರಬೇಕು. ಮಾನ್ಯ ಅಧ್ಯಕ್ಷರೇ, ಸಹಕಾರ ಕ್ಷೇತ್ರವನ್ನು ಕುರಿತು ಮಾತನಾಡುವುದು ಬಹಳಷ್ಟು ವಿಷಯ ಇದೆ. ಆದರೆ ದುರ್ದೈವದಿಂದ ನಾವು ಹೇಳುವುದನ್ನು ಕೇಳುವವರೇ ಸಾಕಷ್ಟು ಇಲ್ಲ...

ಉಪಾಧ್ಯಕ್ಷರು.— ಈ ಇಲಾಖೆಯ ಸಂಬಂಧಪಟ್ಟ ಮಂತ್ರಿಗಳು ಕೇಳುತ್ತಿದ್ದಾರೆ, ತಾವು ಹೇಳಿ.

ಶ್ರೀ ಜಿ. ಎಸ್. ಆಚಾರ್.— ಮಾನ್ಯ ಸಚಿವರು ಇದ್ದಾರೆ. ಬಹಳ ಸಂತೋಷ ನಮ್ಮ ಸಹಕಾರಿ ರಂಗಕ್ಕೆ ಸಂಬಂಧಪಟ್ಟ ಮಂತ್ರಿಗಳು ಬಹಳ ಅನುಭವ ಇರತಕ್ಕವರಾಗಿರುವುದರಿಂದ ನಾನು ಹೇಳುತ್ತಿರುವುದನ್ನು ಅವರು ಚೆನ್ನಾಗಿ ಕೇಳುತ್ತಿದ್ದಾರೆ.

ಆದರೆ ಕೆಲವು ಸಲ ಅಡೆತಡೆಗಳು ಉಂಟಾಗುತ್ತದೆ. ಅದಕ್ಕೋಸ್ಕರವಾಗಿ ಹೇಳುತ್ತಿದ್ದೇನೆ. ಇದು ಜನರ ಚಳುವಳಿಯಾಗಬೇಕು ಜನರ ಆರ್ಥಿಕ ಸಾಮಾಜಿಕ ಚಳುವಳಿಯಾಗಿ ಬೆಳೆಯಬೇಕು. ಸಹಕಾರಿ ರಂಗವು ಅಧಿಕಾರಿಗಳ ಚಳುವಳಿ ರಾಜಕಾರಣಿಗಳ ಚಳುವಳಿಯಾಗಬಾರದು. ಅಧಿಕಾರಿಗಳ, ರಾಜಕಾರಣಿಗಳ ಚಳುವಳಿಯಾದರೆ ಅದು ಕೇವಲ ಕಾರ್ಪೊರೇಷನ್ ಆಗಿ ಬದಲಾವಣೆಯಾಗುತ್ತದೆ. ಅದು ಎಂದಿಗೂ ಆಗಬಾರದು. ಕೋಆಪರೇಷನ್ ಆಗಿಯೇ ಉಳಿಯಬೇಕು. ಈ ಸಹಕಾರಿ ರಂಗವು ಬೆಳೆಯಲು ಅಧಿಕಾರಿಗಳು, ರಾಜಕಾರಣಿಗಳು ಬಿಟ್ಟಿಲ್ಲವೆಂದು ಆರೋಪ ಇದೆ. ಈ ಆರೋಪವನ್ನು ಸಹಕಾರಿ ಕ್ಷೇತ್ರದಿಂದ ತೆಗೆಯಬೇಕು. ಕರ್ನಾಟಕ ರಾಜ್ಯದಲ್ಲಿ ಸಹಕಾರಿ ರಂಗ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವ ಭಾವನೆ ಜನತೆಯಲ್ಲಿ ಒಡಂಬಡಿಸಬೇಕಾದ್ದು ಇಂದಿನ ಸಂದರ್ಭದಲ್ಲಿ ಬಹಳ ಅತ್ಯಗತ್ಯವಾಗಿದೆ. ಆದ್ದರಿಂದ ಇವೊತ್ತು ಸರ್ಕಾರದವರು ಅಧಿಕಾರಿಗಳನ್ನು ನೇಮಕ ಮಾಡುವಾಗ ನಿಷ್ಣಾತರಾಗಿರುವವರನ್ನು ಅರ್ಹತೆಯುಳ್ಳವರನ್ನು ಹಾಕಬೇಕು, ಲೆಂಡಿಂಗ್‌ನಲ್ಲಿ ಮಾರ್ಕೆಟಿಂಗ್‌ನಲ್ಲಿ ಮತ್ತು ಪ್ರೊಸೆಸಿಂಗ್‌ನಲ್ಲಿ ಅನುಭವ ಇರತಕ್ಕಂಥವರನ್ನೇ ಆಯಾ ಕ್ಷೇತ್ರಕ್ಕೆ ಹಾಕಬೇಕು. ಯಾವುದೇ ಅನುಭವ ಇಲ್ಲದವರನ್ನು ಅಲ್ಲಿ ಹಾಕಿದರೆ ದಕ್ಷ ಸಂಸ್ಥೆಗಳೂ ಕೂಡ ಹಾಳಾಗಿಹೋಗುತ್ತವೆ, ಕೆಳಮಟ್ಟದಿಂದ ಅನುಭವ ಪಡೆದಂಥವರು ಅಸಿಸ್ಟೆಂಟ್ ಸೆಕ್ರೆಟರಿ, ಸೆಕ್ರೆಟರಿಯಾಗಿದ್ದಂಥವರನ್ನು ಎಂ ಡಿ. ಯಾಗಿ ನೇಮಿಸಬೇಕು. ಸಹಕಾರಿ ರಂಗದಲ್ಲಿಯೇ ಅನುಭವ ಪಡೆದಂಥ ಅಧಿಕಾರಿಗಳನ್ನು ನೇಮಿಸಬೇಕು. ಕೆಲವು ಸಂದರ್ಭಗಳಲ್ಲಿ ತರಬೇತಿ ಪಡೆದಂಥವರು ಬೇರೆ ಬೇರೆ ಕಡೆ ಹೋಗತಕ್ಕಂಥ ನಿದರ್ಶನ ಇರುತ್ತದೆ. ನನ್ನ ನೆನಪಿನಲ್ಲಿ ಹೇಳುವುದಾದರೆ ರಿಜಿಸ್ಟ್ರಾರ್‌ರವರನ್ನು ವಿದೇಶಗಳಿಗೆ ಕಳುಹಿಸಲ್ಪಟ್ಟು ಸಹಕಾರಿ ರಂಗದಲ್ಲಿ ವಿಶೇಷ ಅಧ್ಯಯನ ಪಡೆದುಕೊಂಡು ಬಂದನಂತರ ಯಾವುದೋ ಒಂದು ಲ್ಯಾಂಡ್ ನಿಗಮ, ಸರ್ಕಾರಿ

ಫ್ಯಾಕ್ಟರಿಗಳಿಗೆ ನೇಮಿಸುವುದರಿಂದ ಸಹಕಾರಿ ರಂಗಕ್ಕೆ ಯಾವುದೇ ಪ್ರಯೋಜನ ಅವರಿಂದ ದೊರೆತಂತಾಗುವುದಿಲ್ಲ. ಸಹಕಾರಿ ರಂಗಕ್ಕೆ ವಿದೇಶದಿಂದ ಅವರು ಪಡೆದುಕೊಂಡುಬಂದ ಅನುಭವದ ಲಾಭವಿಲ್ಲದಂತಾಗಬಾರದು. ಅವರನ್ನು ಸಹಕಾರಿ ರಂಗದಲ್ಲಿಯೇ ಇರಿಸಿಕೊಂಡು ಅವರಿಂದ ಹೊಸ ಚೈತನ್ಯ ಹೊಸರೂಪ ಹೊಸ ಉಸಿರು ತುಂಬುವಂತಾಗಬೇಕು. ಮಾನ್ಯ ಚಾಲಪ್ಪನವರು ಸತ್ವಶಾಲಿ ಸಹಕಾರಿ ಸಚಿವರಾಗಿ ಬಡವರ ಬದುಕಿನಲ್ಲಿ ಭರವಸೆಯ ಹೊಂಗನಸನ್ನು ಸಹಕಾರಿ ರಂಗದಲ್ಲಿ ಕೊಡುವ ಕೆಲಸ ಮಾಡಬೇಕು, ಹೊಸನೀತಿಯನ್ನು ರೂಪಿಸಬೇಕು, ದೋಷಗಳನ್ನು ದೂರವಾಗಿಸಬೇಕು. ಸಹಕಾರಿ ತತ್ವದಲ್ಲಿ ಹೊಸನಾಡನ್ನು ಕಟ್ಟಬೇಕು. ಇರುವುದನ್ನೆಲ್ಲಾ ಎಲ್ಲಾ ಜನತೆಗೆ ತೆರವಾಗಿಸುವ, ಸಮಬಗೆಯ ಸಮಸುಖದ ಸಮದುಃಖದ ಸಾಮರಸ್ಯದ ಸಾಮಗಾನ ಲಹರಿಯ ಮೇಲೆ ಸಹಕಾರಿ ಚಳುವಳಿ ತೇಲಿ ಬರುವಂತಾಗಬೇಕೆಂದು ಹೇಳಿ ಸಹಕಾರಿ ಚಳುವಳಿಗೆ ಶ್ರದ್ಧೆಯಿಂದ ನಮಸ್ಕಾರ ಮಾಡಿ ಅಧ್ಯಕ್ಷರಿಗೆ ವಂದಿಸಿ ಮಾತಂಗಳನ್ನು ಮಂಗಿಸುತ್ತೇನೆ.

† ಶ್ರೀ ಕೆಂಪೀರೇಗೌಡ (ಚಾಮರಾಜ).—ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸಹಕಾರಿ ಸಚಿವರು ಸದನದ ಮುಂದೆ ಅವರ ಇಲಾಖೆಗೆ ಸಂಬಂಧಪಟ್ಟ ಹಾಗೆ ಲೇಖಾನುದಾನ ಏನು ಮಂಡಿಸಿರುತ್ತಾರೆ ಅದನ್ನು ಸ್ವಾಗತಿಸಿ ನಾಲ್ಕಾರು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಸಹಕಾರಿ ಇಲಾಖೆಯಲ್ಲಿ ಆಡಳಿತ ಎಷ್ಟು ಉತ್ತಮವಾಗಿ ಕಾರ್ಯನಿರ್ವಹಿಸಬೇಕಾಗಿತ್ತೋ ಅಷ್ಟರಮಟ್ಟಿಗೆ ಕಾರ್ಯಗಳು ಆಗುತ್ತಿಲ್ಲ ಎನ್ನುವುದು ನಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಷಯವಾಗಿದೆ. ಇವೊತ್ತು ಸಹಕಾರಿ ಸಂಸ್ಥೆಗಳು ಬಹಳವಾಗಿ ಬೆಳೆದಿವೆ. ಆದರೆ ಸಹಕಾರಿ ಇಲಾಖೆಯಲ್ಲಿ ಈ ಸಂಸ್ಥೆಗಳನ್ನು ನೋಡಿಕೊಳ್ಳುವ ಒಂದು ಸಲಹೆ ಸಹಕಾರಗಳನ್ನು ಕೊಡುವಂಥ ಅಧಿಕಾರಿಗಳನ್ನು ದೂರಬೇಕಾಗಿದೆ. ಇವೊತ್ತು ಸಹಕಾರಿ ಸಂಘಗಳಿಂದ ಯಾವುದೇ ಕಾರ್ಯವಾಗಬೇಕಾಗಿದ್ದರೂ ರಿಜಿಸ್ಟ್ರಾರ್ ಮಟ್ಟದಲ್ಲಿ ಬರಬೇಕಾಗಿದೆ. ಆದ್ದರಿಂದ ಈ ಇಲಾಖೆಯನ್ನು ಡಿಸೆಂಟರೈಸ್ ಮಾಡಿ ಕೆಳಮಟ್ಟದಿಂದ ಮೇಲ್ಮಟ್ಟದವರೆಗೆ ಅಧಿಕಾರಿಗಳಿಗೆ ಒಂದು ಅಧಿಕಾರವನ್ನು ಕೊಡಬೇಕು. ಇದನ್ನು ಮಾಡದಿದ್ದರೆ ಕೆಲಸಗಳು ಬಹಳ ಸುಗಮವಾಗಿ ಸಹಕಾರಿ ಕ್ಷೇತ್ರದಲ್ಲಿ ನಡೆಯುವುದಿಲ್ಲವೆಂದು ತಮಗೆಲ್ಲಾ ಗೊತ್ತಿರುವ ವಿಚಾರ. ತಮಗೆಲ್ಲ ಗೊತ್ತಿರುವಂತೆ ಪ್ರತಿಯೊಬ್ಬ ಪ್ರಜೆಯ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವಂಥ ಸಂಸ್ಥೆಗಳು, ಈ ಸಹಕಾರಿ ಸಂಘಗಳು ಎಲ್ಲಾ ಕ್ಷೇತ್ರದಲ್ಲೂ ಇರುವಂಥ ವ್ಯಕ್ತಿಗಳು ಸಂಸ್ಥೆಗಳಲ್ಲಿ ಹೂಡಿದ ಹಣ ೨,೨೦೦ ಕೋಟಿ ವರ್ಕಿಂಗ್ ಕ್ಯಾಪಿಟಲ್ ಇದೆ. ಎಷ್ಟು ಬೃಹತ್ ಆಗಿ ಇದು ಬೆಳೆದಿದೆ ಎನ್ನುವುದು ಗೊತ್ತಾಗುತ್ತದೆ. ಇಂಥ ಸಂಸ್ಥೆಗಳನ್ನು ಎಲ್ಲಾ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಅವರ ಮೇಲ್ವಿಚಾರಣೆಯನ್ನು ಮಾಡುವಂಥ ಅಧಿಕಾರಿಗಳಿಗೆ ಸಾಕಷ್ಟು ಅಧಿಕಾರ ಇಲ್ಲದಿದ್ದರೆ ಕಾರ್ಯನಿರ್ವಹಣೆ ಮಾಡುವುದಕ್ಕೆ ಕಷ್ಟವಾಗುತ್ತದೆ. ಸಹಕಾರಿ ಸಂಘಗಳಿಗೆ ಸಲಹೆ ಸಹಕಾರಗಳನ್ನು ಕೊಡುವುದು ಕಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ತಮ್ಮಲ್ಲಿಯೇ ಪ್ರಶ್ನೆ ಮಾಡಿಕೊಳ್ಳಬೇಕು. ಈ ಸಹಕಾರಿ ಕ್ಷೇತ್ರದಲ್ಲಿ ಅಧಿಕಾರ ಕೇಂದ್ರೀಕೃತವಾಗಿದೆ. ಈ ರೀತಿಯಾಗದೆ ಇದು ಕೆಳಮಟ್ಟದ ಅಧಿಕಾರಿಗಳವರೆಗೂ ಹೋಗುವಂಥ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು. ಇವೊತ್ತು ಜಿಲ್ಲಾಮಟ್ಟದಲ್ಲಿ ೫ ಜನ ನಾನ್ ಗೆಜೆಟೆಡ್ ಅಧಿಕಾರಿಗಳಿಗೆ, ಒಬ್ಬ ಗೆಜೆಟೆಡ್ ಅಸಿಸ್ಟೆಂಟ್ ರಿಜಿಸ್ಟ್ರಾರ್ ಇದ್ದರೆ ಮೂರು ಅಸಿಸ್ಟೆಂಟ್ ರಿಜಿಸ್ಟ್ರಾರ್ ರವರು ಒಬ್ಬ ಡೆಪ್ಯುಟಿ ರಿಜಿಸ್ಟ್ರಾರ್ ಇರುತ್ತಾರೆ. ಈ ರೀತಿಯಾಗಿ ಅಧಿಕಾರಿಗಳ ಸಾಕಷ್ಟು ಇದ್ದರೂ ಅವರಿಗೆ ಯಾವ ಯಾವ ಮಟ್ಟದಲ್ಲಿ ಅಧಿಕಾರಗಳನ್ನು ಕೊಟ್ಟು ಕಾರ್ಯವನ್ನು ಮಾಡಿಸಬೇಕು, ಎನ್ನುವ ಒಂದು ವ್ಯವಸ್ಥೆ ಸರಿಯಾಗಿ ಆಗದೆ ಇರುವುದರಿಂದ ಅವರು ತಮ್ಮ ಕರ್ತವ್ಯವನ್ನು ಪೂರ್ಣವಾಗಿ ನಿರ್ವಹಿಸಲಿಕ್ಕೆ ಆಗುತ್ತಿಲ್ಲ. ಆದ್ದರಿಂದ ಅವರಿಗೆ ಸಾಕಷ್ಟು ಅಧಿಕಾರಗಳನ್ನು ಕೊಟ್ಟು ಕಾರ್ಯನಿರ್ವಹಣೆ ಮಾಡುವ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ವಿಷಯದಲ್ಲಿ ಸಹಕಾರಿ ಸಚಿವರು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಬೇಕು. ಪ್ರಾರ್ಥಮಿಕ ಸಹಕಾರಿ ಸಂಘಗಳು ಕೃಷಿ ಸಾಲವನ್ನು ರೈತರಿಗೆ ಸರಿಯಾದ ರೀತಿಯಲ್ಲಿ ಕೊಡುತ್ತಿದ್ದಾರೆಯೇ, ಸರಿಯಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆಯೇ ಎನ್ನುವುದನ್ನು ನೋಡಬೇಕು ರೈತರಿಗೆ ಜನತಾ ಸರ್ಕಾರ ಬಂದ ಮೇಲೆ ಬಹಳಷ್ಟು ಸಬ್‌ಸಿಡಿಯನ್ನು ಕೊಟ್ಟಿದ್ದಾರೆ. ಇದರಿಂದ ರೈತರಿಗೆ ಹೆಚ್ಚಿನ ಸಹಕಾರ ಸಿಕ್ಕಿದಂತಾಗಿರುತ್ತದೆ ಹೆಚ್ಚು ಹೆಚ್ಚು ಜನರು ಸಹಕಾರಿ ಸಂಘಗಳ ಮೂಲಕ ಸಾಲವನ್ನು ಪಡೆಯುತ್ತಿರುತ್ತಾರೆ. ತಮಗೆ ಗೊತ್ತಿದೆ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗದವರಿಗೆ ಸಹಕಾರಿ ಸಂಘಗಳ ಮೂಲಕ, ಷೆಡ್ಯೂಲ್ ಬ್ಯಾಂಕ್‌ಗಳ ಮೂಲಕ ಸಾಲವನ್ನು ಕೊಡತಕ್ಕಂಥ

ವ್ಯವಸ್ಥೆ ಇದ್ದರೂ ಕೂಡ ಅದಕ್ಕೆ ಹೆಚ್ಚಿನ ಒಂದು ಪ್ರೋತ್ಸಾಹ ದೊರೆಯುತ್ತಿಲ್ಲ. ಅದಕ್ಕೆ ಹೆಚ್ಚಿನ ಒಂದು ಪ್ರೋತ್ಸಾಹ ದೊರೆಯುವಂಥ ರೀತಿಯಲ್ಲಿ ತಾವು ಕೆಲಸವನ್ನು ಮಾಡಬೇಕು. ನಮ್ಮ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳನ್ನು ಯಾವ ರೀತಿ ನೋಡಿಕೊಳ್ಳಬೇಕು ಎಂದರೆ ಸರ್ಕಾರದಲ್ಲಿ ಕಾರ್ಯನಿರ್ವಹಿಸತಕ್ಕಂಥ ಅಧಿಕಾರಿಗಳನ್ನು ಯಾವ ರೀತಿ ನೋಡಿಕೊಳ್ಳುತ್ತೇವೆಯೋ ಅದೇರೀತಿಯಲ್ಲಿ ಇವರನ್ನು ನೋಡಿಕೊಳ್ಳಬೇಕು, ಇವೊತ್ತು ಸರ್ಕಾರಿ ನೌಕರರಿಗೆ ಯಾವರೀತಿ ಸಂಬಳವನ್ನು ಜಾಸ್ತಿ ಮಾಡಿರುತ್ತಾರೋ ಅದೇರೀತಿಯಲ್ಲಿ ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡತಕ್ಕಂಥವರಿಗಾಗಲಿ, ಜಿಲ್ಲಾ ಬ್ಯಾಂಕ್‌ಗಳಲ್ಲಿ ಕೆಲಸ ಮಾಡತಕ್ಕಂಥವರಿಗಾಗಲಿ ಸಂಬಳವನ್ನು ಕೊಡಬೇಕು. ಸರ್ಕಾರಿ ಅಧಿಕಾರಿಗಳಿಗೆ ಯಾವ ರೀತಿ ಟ್ಯಾಕ್ಸ್‌ಗಳನ್ನು ಹಾಕಿ ವಸೂಲು ಮಾಡಿ ಸಂಬಳಗಳನ್ನು ಕೊಡುತ್ತಾರೆಯೋ ಅದೇರೀತಿಯಲ್ಲಿ ಇವರಿಗೂ ಸಂಬಳಗಳನ್ನು ಕೊಡಬೇಕೆಂದು ಹೇಳುವ ವಾದ ಸರಿಯಾಗಿದ್ದರೂ ಅಷ್ಟೇ ನಿಖರವಾಗಿ ಬಡ್ಜೆಟ್ ತೆಗೆದುಕೊಂಡು ಜಿಲ್ಲಾ ಬ್ಯಾಂಕ್‌ಗಳಿಗೆ ಒಂದು ಹೆಚ್ಚಿನ ಹೊರೆಯನ್ನು ಹೊತ್ತುಕೊಂಡು ಜಿಲ್ಲಾಬ್ಯಾಂಕ್‌ಗಳು ಕಾರ್ಯವನ್ನು ನಿರ್ವಹಿಸಬೇಕೆನ್ನುವುದನ್ನು ಮಾನ್ಯ ಸಚಿವರು ದಯವಿಟ್ಟು ತಿಳಿದುಕೊಳ್ಳಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದಕ್ಕಾಗಿ ಸಬ್‌ಸಿಡಿ ರೂಪದಲ್ಲಿ ಕೊಟ್ಟು ಜಿಲ್ಲಾಬ್ಯಾಂಕ್‌ಗಳಿಗೆ ಸಹಕಾರ ನೀಡಬೇಕೆಂದು ಹೇಳುತ್ತೇನೆ.

ಮತ್ತೆ ಪ್ರಾಥಮಿಕ ಸಹಕಾರಿ ಸಂಘಗಳನ್ನು ಪುನರ್‌ವಿಂಗಡಣೆ ಮಾಡಿರುವುದನ್ನು ಮತ್ತೆ ಪುನರ್‌ವಿಂಗಡಣೆ ಮಾಡಬೇಕೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಇದನ್ನು ಮಾಡಿದರೆ ಮತ್ತೆ ಗೊಂದಲಕ್ಕೆ ಅವಕಾಶವಾಗುತ್ತದೆ. ಹಿಂದೆ ವಿಂಗಡಣೆಯಾದಾಗ ಯಾವುದೇ ಒಂದು ರಿಸರ್ವ್‌ಬ್ಯಾಂಕ್‌ನವರು ಪೂರ್ವ ಯೋಚನೆ ಮಾಡಿ ಈ ಪ್ರಾಥಮಿಕ ಸಹಕಾರಿ ಸಂಘಗಳು ಉತ್ತಮವಾಗಿ ಕಾರ್ಯ ಮಾಡಬೇಕಾದರೆ ಯಾವರೀತಿ ಜಮೀನು ವಿಸ್ತರಣೆ ಇರಬೇಕು, ಜನಸಂಖ್ಯೆ ಎಷ್ಟು ಇರಬೇಕು ಎನ್ನುವ ಬಗ್ಗೆ ತಿಳಿದು ಸಲಹೆಯನ್ನು ಕೊಟ್ಟಿದ್ದಾರೆ ಅದರಂತೆ ಪುನರ ವಿಂಗಡಣೆಯಾಗಿದೆ ಆದರೆ ಪುನರ್‌ವಿಂಗಡಣೆ ಸರಿಯಾಗದೆ ಇಂಥ ಒಂದು ಅವ್ಯವಸ್ಥೆಯಾಗಿದೆ ಮತ್ತೆ ಇದನ್ನು ಪುನರ್ ಪರಿಶೀಲನೆ, ಪುನರ್ ವಿಂಗಡಣೆ ಮಾಡುವುದಕ್ಕೆ ಹೋದರೆ ಮತ್ತಷ್ಟು ದಿವಸಗಳು ಹಿಡಿಯುತ್ತದೆ. ಈಗಾಗಲೇ ಪುನರ್ ವಿಂಗಡಣೆಯಾದ ಮೇಲೆ ೨-೩ ವರ್ಷಗಳಿಂದ ಸಹಕಾರಿ ಸಂಘಗಳು ಸಾಕಷ್ಟು ಕಿರುಕುಳಕ್ಕೆ ಒಳಗಾಗಿದೆ.

ಕೆಲವು ಸಹಕಾರ ಸಂಘಗಳು ಪುನರ್ ಸಂಘಟನೆಯಲ್ಲಿ ಅಮಾಲ್ಗಮೇಟ್ ಆಗದೆ ಇಂಡಿಪೆಂಡೆಂಟ್ ಆಗಿ ಉಳಿದುಕೊಂಡಿವೆ. ಇವುಗಳು ಸ್ವಂತವಾಗಿ ಕೆಲಸ ಮಾಡುವ ಹಾಗಿದ್ದರೆ ಅವುಗಳನ್ನು ಬಿಡಬಹುದು. ಈ ಪುನರ್ ಸಂಘಟನೆ ಬಿಟ್ಟು ಒಳ್ಳೆಯದಾಗುವುದಿಲ್ಲ. ಒಳ್ಳೆಯ ಪರಿಣಾಮವೂ ಆಗುವುದಿಲ್ಲವೆಂದು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಪ್ರಾಥಮಿಕ ಸಹಕಾರ ಸಂಘಗಳಲ್ಲಿ ರೈತರ ಎಲ್ಲಾ ಬೇಡಿಕೆಗಳನ್ನು ನೆರವೇರಿಸುವುದಕ್ಕೆ ಆಗುತ್ತಿಲ್ಲ. ಇದು ಎಲ್ಲರಿಗೂ ತಿಳಿದಿರತಕ್ಕಂಥ ವಿಚಾರ. ಸಹಕಾರ ಸಂಘಗಳ ಚಳುವಳಿಯ ಮೂಲಕವಾಗಿ ರೈತರಿಗೆ ೨೮ ಪರ್ಸೆಂಟ್ ಸಾಲ ಕೊಟ್ಟರೂ ಕೂಡ ಸಹಕಾರ ಬ್ಯಾಂಕುಗಳು ಉತ್ತಮ ರೀತಿಯಲ್ಲಿ ಕಾರ್ಯ ಮಾಡುವುದಕ್ಕೆ ಪ್ರಯತ್ನ ನಡೆಸಿಯೇ ಇಲ್ಲ. ಹೆಚ್ಚು ಜನರಿಗೆ ಸಾಲ ಕೊಡುವ ವ್ಯವಸ್ಥೆ ಆಗಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತಾ ಇದ್ದೇನೆ. ಈ ಕಾರ್ಯ ಆಗಬೇಕಾದರೆ, ಇವತ್ತು ಕಾರ್ಯದರ್ಶಿಗಳು ಕೆಳಮಟ್ಟದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಇದ್ದಾರೆ. ಸಿ.ಸಿ.ಎಯನ್ನು ಈಗ ತೆಗೆದುಹಾಕಿಬಿಟ್ಟಿದ್ದಾರೆ. ಜಿಲ್ಲಾ ಬ್ಯಾಂಕ್ ನೌಕರರ ವ್ಯವಸ್ಥೆಯಲ್ಲೇ ಅವರು ಬರುವುದರಿಂದ ಅವರ ಹತೋಟಿಯಲ್ಲಿ ಜಿಲ್ಲಾ ಕೇಂದ್ರಬ್ಯಾಂಕ್ ಇಟ್ಟುಕೊಂಡು ಉತ್ತಮ ರೀತಿಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಸೂಪರ್‌ವೈಸರ್ಸ್, ಕಾರ್ಯದರ್ಶಿ ಏನು ಇದ್ದಾರೆ. ಅವರನ್ನು ಒಬ್ಬರನ್ನೊಬ್ಬರಿಗೆ ಬದಲಾವಣೆ ಮಾಡಿ ಉತ್ತಮ ರೀತಿಯಿಂದ ಕೆಲಸ ಮಾಡುವುದಕ್ಕೆ ಪ್ರಯತ್ನ ಪಡಬಹುದು ಆದ್ದರಿಂದ ಸಿ.ಸಿ.ಎ. ಬೇರೆ ವ್ಯವಸ್ಥೆಯನ್ನು ಮಾಡಿದ್ದೀರಿ. ಅದಕ್ಕೆ ಬದಲಾಗಿ ಎಲ್ಲಾ ಕಾರ್ಯದರ್ಶಿಗಳನ್ನು ಬಿಟ್ಟು ಉಳಿಕೆ ನೌಕರರನ್ನು ಇದೇ ಸಹಕಾರ ಸಂಘದ ನೌಕರರೆಂದು ಪರಿಗಣಿಸಿ ಕಾರ್ಯದರ್ಶಿಯನ್ನು ಮಾತ್ರ ಕೇಂದ್ರ ಬ್ಯಾಂಕಿನಿಂದ ಹಾಕುವ ರೀತಿಯಿಂದ ಮಾಡಬೇಕು. ಈ ರೀತಿ ವ್ಯವಸ್ಥೆ ಮಾಡಿದರೆ ಉತ್ತಮ ರೀತಿಯಿಂದ ಅಲ್ಲಿ ಕಾರ್ಯ ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ. ಇವೊತ್ತು ಸಾಲವನ್ನು ತೆಗೆದುಕೊಂಡವನು ವಾಪಸ್ಸು ಕೊಡುವಾಗ ಲಿಂಕಿಂಗ್ ಕ್ರೆಡಿಟ್ ವಿತ್ ಮಾರ್ಕೆಟಿಂಗ್ – ಸಾಲ ವಸೂಲಿಯನ್ನು ಮಾರುಕಟ್ಟೆಗೆ ಜೋಡಣೆ ಮಾಡುವ ಯೋಜನೆ ಇದೆ, ಈ ಯೋಜನೆ ಈ ರಾಜ್ಯದಲ್ಲಿ ಏನೇನೂ ಕಾರ್ಯಗತವಾಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಅದಕ್ಕೆ ಏನಾದರೂ ಒಂದು ಸರಿಯಾದಂಥ ತತ್ವವನ್ನು ರೂಪು ಮಾಡಿ ಆ ಮೂಲಕ ಸಾಲ

ವಸೂಲು ಮಾಡುವುದಕ್ಕೆ ಪ್ರಯತ್ನ ಪಡಬಹುದು. ಇವತ್ತು ರೈತರು ಬೇಕಾದಷ್ಟು ಸಾಲ ಪಡೆಯುತ್ತಿರಬಹುದು. ಆದರೆ ಬೆಳೆದಿದ್ದುದರಲ್ಲಿ ಒಂದು ಭಾಗವನ್ನು ಮಾರ್ಕೆಟಿಂಗ್ ಸೊಸೈಟಿಗಳಿಗೆ ಕೊಟ್ಟು ಸಾಲ ತೀರಿಸುವ ವ್ಯವಸ್ಥೆ ಮಾಡದೆ ಹೋದರೆ ಆತ ಬೆಳೆದ ಬೆಳೆಗೆ ಒಳ್ಳೆ ಬೆಲೆ ಖಂಡಿತ ಸಿಗುವುದಿಲ್ಲ ಮತ್ತು ಸಾಲವನ್ನು ಸಕಾಲದಲ್ಲಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಮಾರುಕಟ್ಟೆ ಸಹಕಾರ ಸಂಘಗಳು ಈ ಕಾರ್ಯ ಮಾಡುವ ಸ್ಥಿತಿಯಲ್ಲಿಯೇ ಇಲ್ಲ. ಅವುಗಳು ಶಕ್ತಿಯುತವಾಗಿ ಮಾಡುವುದಕ್ಕೆ ಕಾರ್ಯಕ್ರಮ ರೂಪಿಸಿ ತಾವು ಬೆಂಬಲ ಕೊಡಬೇಕು. ಈ ರೀತಿ ಒಂದು ಸಾಲವನ್ನು ತೆಗೆದುಕೊಳ್ಳುವವನು ಧಾನ್ಯ ರೂಪದ ಮೂಲಕವೇ ಸ್ವಲ್ಪ ಭಾಗವನ್ನು ಮಾರಾಟ ಸಹಕಾರ ಸಂಘಗಳಿಗೆ ಕಡ್ಡಾಯವಾಗಿ ಕೊಡುವಂತೆ ಮಾಡಬೇಕು. ಈ ಮಾರಾಟ ಸಹಕಾರ ಸಂಘಗಳಿಗೆ ಕೊಳ್ಳುವ ಶಕ್ತಿಯನ್ನು ಮುಂಗಡ ಹಣವನ್ನು ಕೊಡುವ ಶಕ್ತಿಯನ್ನು ಮಾಡಿಸಬೇಕಾದುದು ಅವಶ್ಯಕತೆ ಇದೆ. ಕೇವಲ ಮಂಡ್ಯ ಜಿಲ್ಲೆಯಲ್ಲಿ ೨ ಟೈರ್ ಸಿಸ್ಟಂ ೩ ಟೈರ್ ಸಿಸ್ಟಮ್ ಇರಬಹುದು ಬೇರೆ ಕಡೆಗಳಲ್ಲಿ ಗೊಬ್ಬರ ಮಾರಾಟ ಮಾಡುವಂಥ ೨ ಟೈರ್ ಸಿಸ್ಟಂನಲ್ಲಿ, ಸರ್ಕಾರದ ಕಂಟ್ರೋಲ್ ದರದಲ್ಲಿ ಕೊಡುವ ಪದಾರ್ಥಗಳನ್ನು ಮಾತ್ರ ಕೊಂಡು ಮಾರುವ ವ್ಯವಸ್ಥೆಯನ್ನು ಒಳಗೊಂಡಿದೆ. ಈ ಗೊಬ್ಬರವನ್ನು ಹಂಚಿಕೆ ಮಾಡುವ ವಿಷಯದಲ್ಲಿ ತಾಲ್ಲೂಕು ಮಾರಾಟ ಸಹಕಾರ ಸಂಘಗಳ ಪಾತ್ರವೂ ಇರುವ ಹಾಗೆ ವ್ಯವಸ್ಥೆ ಮಾಡಿದರೆ, ತಾಲ್ಲೂಕು ಮಾರಾಟ ಸಂಘಗಳಿಗೆ ಶಕ್ತಿ ತುಂಬಿದ ಹಾಗೆ ಆಗುತ್ತದೆ.

ಈ ಇಲಾಖೆಯಲ್ಲಿ ಒಂದು ದೋಷ ಎಂದರೆ, ಮಾರಾಟ ಸಹಕಾರ ಸಂಘಗಳಾಗಲೀ, ಬ್ಯಾಂಕುಗಳಾಗಲೀ ತರಬೇತಿಯಾದ ನೌಕರರನ್ನು ಹಾಕುವುದಿಲ್ಲ. ವ್ಯಾಪಾರದ ಗಂಧವೇ ಇಲ್ಲದವರನ್ನು ತಾಲ್ಲೂಕು ಮಾರಾಟ ಸಂಘದ ಕಾರ್ಯದರ್ಶಿಯಾಗಿ ಹಾಕುತ್ತಾರೆ. ಬ್ಯಾಂಕಿಂಗ್‌ನಲ್ಲಿ ತಿಳುವಳಿಕೆ ಇಲ್ಲದೇ ಇರತಕ್ಕಂಥ ಅಧಿಕಾರಿಗಳನ್ನು ಬ್ಯಾಂಕುಗಳಿಗೆ ಕಾರ್ಯದರ್ಶಿಯಾಗಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಹಾಕುತ್ತಾರೆ. ಈ ಇಲಾಖೆಯಲ್ಲಿ ಪೂರ್ಣಮಟ್ಟದಲ್ಲಿ ಪರಿಣತಿ ಪಡೆದ ನೌಕರರನ್ನು ತಯಾರು ಮಾಡತಕ್ಕಂಥದ್ದು ಅತ್ಯವಶ್ಯಕವಾಗಿದೆ. ಇದು ಆಗದೇ ಹೋದರೆ ಬ್ಯಾಂಕುಗಳಾಗಲೀ, ಮಾರಾಟ ಸಹಕಾರ ಸಂಘಗಳಾಗಲೀ ಉತ್ತಮ ರೀತಿಯಿಂದ ಕಾರ್ಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ನೆಹರೂರವರು ಈ ದೇಶದಲ್ಲಿ ಆರ್ಥಿಕವಾಗಿ ಹಳ್ಳಿಗಾಡಿನಲ್ಲಿ ಕ್ರಾಂತಿ ಮಾಡಬಹುದು, ಉತ್ಪಾದನೆ ಜಾಸ್ತಿ ಮಾಡಬಹುದು, ಒಬ್ಬರಿಗೊಬ್ಬರು ಕೂಡಿ ದುಡಿಯುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬಹುದು ಎಂದು ತಿಳಿದು ಜಾಯಿಂಟ್ ಫಾರ್ಮಿಂಗ್ ಕೋಆಪರೇಟಿವ್‌ಸೊಸೈಟಿಗಳನ್ನು ಮಾಡಿದ್ದರು. ಇವೊತ್ತು ಅದರ ಸಫಲತೆ ಬಗ್ಗೆ ಯೋಚನೆ ಮಾಡಿದರೆ ಕೆಲವನ್ನು ಬಿಟ್ಟರೆ ಬೇರೆ ಎಲ್ಲಾ ಸಹಕಾರ ಸಂಘಗಳು ಲಿಕ್ವಿಡೇಟ್ ಆಗುವಂಥ ಸ್ಥಿತಿಯಲ್ಲಿವೆ. ಇವೊತ್ತು ಕಾಲ ಬದಲಾಗಿದೆ. ೨೦ ವರ್ಷಗಳಷ್ಟು ಹಿಂದೆ ಇದ್ದಂಥ ಪರಿಸ್ಥಿತಿಗಿಂತ ಇವೊತ್ತು ಕೂಡಿ ಒಟ್ಟಿಗೆ ವ್ಯವಸಾಯ ಮಾಡುವುದರಿಂದ, ಆಧುನಿಕ ಯಂತ್ರಗಳನ್ನು ಉಪಯೋಗಿಸಿಕೊಂಡು ಉತ್ತಮವಾದ ರೀತಿಯಲ್ಲಿ ವ್ಯವಸಾಯ ಮಾಡಿ ಹೆಚ್ಚಿಗೆ ಫಸಲನ್ನು ಬೆಳೆಯಬಹುದು ಎನ್ನುವ ನಂಬಿಕೆ ರೈತರಲ್ಲಿ ಜಾಸ್ತಿಯಾಗಿರುವ ಕಾಲದಲ್ಲಿ ಹೆಚ್ಚಿನ ಗಮನವನ್ನು ಇದಕ್ಕೆ ಕೊಟ್ಟು ಏನು ಸಹಕಾರ ಸಂಘಗಳು ಇವೆ, ಅವುಗಳನ್ನು ಪುನರುಜ್ಜೀವನಗೊಳಿಸುವುದಕ್ಕೆ, ಹೆಚ್ಚು ಸಹಕಾರ ಸಂಘಗಳು ಜಾಯಿಂಟ್ ಫಾರ್ಮಿಂಗ್ ಸೊಸೈಟೀಸ್ ಆಗುವ ರೀತಿಯಲ್ಲಿ ಕಾರ್ಯಕ್ರಮ ರೂಪಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಗ್ರಾಹಕರ ಸಹಕಾರ ಸಂಘಗಳು ಯಾವ ಸ್ಥಿತಿಯಲ್ಲಿವೆ ಎಂದು ಹೇಳಿದರೆ, ಎಲ್ಲಾ ಕಡೆಗೂ ಅಲ್ಲದಿದ್ದರೂ ನನಗೆ ತಿಳಿದಂತೆ ನನ್ನ ಕ್ಷೇತ್ರದಲ್ಲಿ ಕೆಲವು ಗ್ರಾಹಕರ ಸಹಕಾರ ಸಂಘಗಳು ಒಂದೊಂದು ಸಂಸಾರಗಳ, ಕೆಲವು ವ್ಯಕ್ತಿಗಳ ಸಹಕಾರ ಸಂಘಗಳಾಗಿ ಎಲ್ಲರಿಗೂ ಸದಸ್ಯತ್ವ ಸಿಗುತ್ತಿಲ್ಲ. ನಾಲ್ಕಾರು ಜನ ಸೇರಿ ಗ್ರಾಹಕರ ಸಹಕಾರ ಸಂಘ ಎಂದು ಮಾಡಿಕೊಂಡು ಸ್ವಂತ ಪ್ರಾಪರ್ಟಿಯಾಗಿಟ್ಟುಕೊಳ್ಳುವ ವ್ಯವಸ್ಥೆ ಮಾಡಿದ್ದಾರೆ. ಅಲ್ಲಿ ಒಂದು ಜನರಲ್ ಬಾಡಿ ಮೀಟಿಂಗ್ ಆಗಲಿ, ಯಾವುದೂ ಕಾಣುವುದಿಲ್ಲ. ಇದನ್ನು ಏನಾದರೂ ಮಾಡಿ ಪ್ರತಿಯೊಂದು ಗ್ರಾಹಕರ ಸಂಘಗಳ ಮೂಲಕ ಕಾರ್ಡ್ ಕೊಟ್ಟು ಪ್ರತಿಯೊಬ್ಬರಿಗೂ ಈ ಸಂಘಗಳಲ್ಲಿ ಸದಸ್ಯತ್ವ ಕೊಡಬೇಕೆಂಬ ನಿರ್ಬಂಧವನ್ನು ಹಾಕಿದರೆ ಬಹುಶಃ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಸಹಕಾರಸಂಘಗಳು ಬೆಳೆಯಬಹುದು. ಇನ್ನು ಆಹಾರ ಇಲಾಖೆಯಿಂದ ಕೆಲವು ಸಹಕಾರ ಸಂಘಗಳು ಉತ್ತಮವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಮಾರಾಟ ಸಹಕಾರ ಸಂಘಗಳು ಬೆಲೆಯಲ್ಲಿ ವ್ಯತ್ಯಾಸ ಆಗುವಂಥ ಹಣವನ್ನು ತುಂಬಿಸಿ ಕೊಡಬೇಕಾಗುತ್ತದೆ. ಈ ಹಣ ಸರ್ಕಾರದಿಂದ ವರ್ಷಾನುಗಟ್ಟಲೆ ಮಾರಾಟ ಸಹಕಾರ ಸಂಘಗಳಿಗೆ ಬರವುದಿಲ್ಲ. ಲಕ್ಷಾಂತರ ರೂಪಾಯಿಗಳು ಪಿ. ಡಿ. ಅಕೌಂಟ್‌ನಲ್ಲಿ ಉಳಿದುಕೊಂಡು ಆಹಾರ ಧಾನ್ಯಗಳನ್ನು ಕೊಂಡು ಮಾರುವುದರಲ್ಲಿ

ತೊಂದರೆಯಾಗುತ್ತದೆ. ಒಂದು ತಿಂಗಳ ಒಳಗಾಗಿ ಆಹಾರ ಇಲಾಖೆಯಿಂದ ಈ ಹಣ ಡಿಫರೆನ್ಷಿಯಲ್ ಅಮೌಂಟ್ ಮಾರುಕಟ್ಟೆ ಸಹಕಾರ ಸಂಘಗಳಿಗೆ ಬರುವ ವ್ಯವಸ್ಥೆ ಆಗಬೇಕು, ಈಗ ಗ್ರಾಹಕರ ಸಹಕಾರ ಸಂಘಗಳಿಗೆ ಆಹಾರ ಇಲಾಖೆಯಿಂದ ಧಾನ್ಯಗಳನ್ನು ಒದಗಿಸಲಾಗುತ್ತಿದೆ. ಕನ್‌ಸ್ಯೂಮರ್ಸ್ ಫೆಡರೇಷನ್ ನಿಂದ ಹೋಲ್‌ಸೇಲ್ ಸ್ಟೋರ್ಸ್‌ನಿಂದ ಇವುಗಳಿಗೆ ಧಾನ್ಯಗಳನ್ನು ಕೊಂಡುಕೊಳ್ಳುವ ವ್ಯವಸ್ಥೆ ಮಾಡಬೇಕು. ಏನಾಗಿದೆ ಎಂದರೆ ಉತ್ತಮವಾದ ಆಹಾರ ಧಾನ್ಯ ಪ್ರವೇಟ್ ಫೇರ್ ಪ್ರೈಸ್ ಶಾಪ್‌ಗಳಿಗೆ ಹೋಗುತ್ತದೆ. ಗ್ರಾಹಕರ ಸಹಕಾರ ಸಂಘಗಳಿಗೆ ಉತ್ತಮ ಆಹಾರ ಧಾನ್ಯಗಳು ಬರುವುದಿಲ್ಲ.

೫-೩೦ ಪಿ. ಎಂ.

ಇದರಿಂದ ಜನಕ್ಕೆ ಸಹಕಾರ ಸಂಘಗಳಲ್ಲಿ ನಂಬಿಕೆ ಹೋಗಿ ಅವರು ಉತ್ತಮ ಪದಾರ್ಥಗಳನ್ನು ಕೊಡುವುದಿಲ್ಲವೆಂಬ ಅಪನಂಬಿಕೆ ಇರುತ್ತದೆ. ಇದನ್ನು ಹೋಗಲಾಡಿಸಬೇಕಾದರೆ ಸಹಕಾರ ಮಂತ್ರಿಗಳು ಆಹಾರ ಇಲಾಖೆಯ ಮಂತ್ರಿಗಳ ಜೊತೆ ಮಾತನಾಡಿ ಬಂದಂಥದನ್ನು ಗ್ರಾಹಕರ ಸೊಸೈಟಿಗಳ ಮೂಲಕ ತಾವೇ ಕೊಡುವಂತೆ ವ್ಯವಸ್ಥೆ ಮಾಡಬೇಕು. ಮತ್ತು ಉತ್ತಮ ಧಾನ್ಯ ಎಲ್ಲಾ ಕಾಲದಲ್ಲೂ ಬರುವಂತೆ ಸಂಪೂರ್ಣವಾಗಿ ಸಹಕಾರ ಸಂಘಗಳಿಗೆ ಹಂಚುವಂತೆ ವ್ಯವಸ್ಥೆಯಾಗಬೇಕು. ನಾನು ಕಳೆದ ೨೦ ವರ್ಷಗಳಿಂದ ಈ ಮಾತನ್ನು ಹೇಳುತ್ತಿದ್ದೇನೆ. ಸಾಕಷ್ಟು ಸಹಕಾರ ಸಂಘಗಳು ಪಟ್ಟಣಗಳಲ್ಲಿ ಬೆಳೆದಿವೆ. ಸಹಕಾರ ಸಂಘಗಳಿಗೆ ಕಾರ್ಡುಗಳನ್ನು ಕಡಿಮೆ ಕೊಡುತ್ತಿದ್ದಾರೆ. ಇದರಿಂದಾಗಿ ಗ್ರಾಹಕರ ಸಹಕಾರ ಸಂಘಗಳು ವೆಚ್ಚವನ್ನು ಜಾಸ್ತಿ ಮಾಡುವಂತಾಗಿದೆ. ಇದಕ್ಕೆ ಹೆಚ್ಚು ನಿಗಾ ಕೊಟ್ಟು ಚೆನ್ನಾಗಿ ಗ್ರಾಹಕರ ಸಂಘಗಳು ಕಾರ್ಯ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಸಹಕಾರ ಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಇವೊತ್ತು ಈ ಇಲಾಖೆಯಲ್ಲಿ ಆಡಿಟ್ ಇಲಾಖೆ ಸಾಕಷ್ಟು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ. ಎಲ್ಲಾ ಸಹಕಾರ ಸಂಘಗಳ ಆಡಿಟ್ ವರ್ಷಕ್ಕೆ ಸರಿಯಾಗಿ ಸೆಪ್ಟೆಂಬರ್‌ನಲ್ಲಿ ಆಗಿಬಿಟ್ಟರೆ ಈ ಮಿಸ್‌ಅಪ್ರೋಪ್ರಿಯೇಷನ್ ಹಣ ಪೋಲಾಗುವಂಥದನ್ನು ತಡೆಗಟ್ಟಬಹುದು. ವರ್ಷಾನುಗಟ್ಟಲೆ ಆಡಿಟ್ ಆಗದಂಥ ವ್ಯವಸ್ಥೆ ಇದೆ. ನೌಕರರ ಅವಶ್ಯಕತೆ ಇದ್ದರೆ ಹೆಚ್ಚಿನ ನೌಕರರನ್ನು ಆಡಿಟ್ ಇಲಾಖೆಗೆ ಪಡೆದು ಸೆಪ್ಟೆಂಬರ್ ಒಳಗೆ ಎಲ್ಲಾ ಸಹಕಾರ ಸಂಘವಾಗಲೀ ಜಿಲ್ಲಾ ಅಥವಾ ತಾಲ್ಲೂಕು ಮಟ್ಟದ ಸಹಕಾರ ಸಂಘಗಳಾಗಲೀ ಆಡಿಟ್ ಆಗುವಂಥ ವ್ಯವಸ್ಥೆ ಮಾಡಿದರೆ ಹಣ ದುರುಪಯೋಗ ಆಗುವುದನ್ನು ತಡೆಗಟ್ಟಬಹುದು. ದುರುಪಯೋಗ ಆಗಿರುವಂಥದ್ದರಲ್ಲಿ ಪೋಲೀಸ್ ಕೇಸ್‌ಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಕೇಸುಗಳನ್ನೇನೋ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಆದರೆ ವರ್ಷಗಳು ಕಳೆದರೂ ಇನ್‌ವೆಸ್ಟಿಗೇಷನ್ ಆಗುವುದಿಲ್ಲ. ಕೋರ್ಟಿಗೆ ಎಫ್. ಐ. ಆರ್. ಹಾಕಿದರೂ ವರ್ಷಾನುಗಟ್ಟಲೆ ಕೋರ್ಟಿನಲ್ಲಿ ಉಳಿದುಕೊಂಡು ಯಾರಿಗೂ ಪರಿಣಾಮವಾಗದಂಥ ವ್ಯವಸ್ಥೆ ಇದೆ. ಇವೊತ್ತು ಮಿಸ್‌ಅಪ್ರೋಪ್ರಿಯೇಷನ್ ಕೇಸ್‌ಗಳನ್ನು ತೀರ್ಮಾನ ಮಾಡಿ ಶಿಕ್ಷೆ ವಿಧಿಸದಿದ್ದರೆ ಬೇರೆಯವರಿಗೆ ಪ್ರೋತ್ಸಾಹ ಕೊಟ್ಟಂತಾಗಿದೆ. ಆದ್ದರಿಂದ ಬೇರೆ ಏನಾದರೂ ವ್ಯವಸ್ಥೆ ಮಾಡಬೇಕು. ಈ ಹರಿಜನ ಗಿರಿಜನರ ಮೇಲೆ ಏನಾದರೂ ಕ್ರೈಮ್ಸ್ ಆದರೆ ಕೂಡಲೇ ಸಂಬಂಧಪಟ್ಟ ಇಲಾಖೆಯವರು ವಿಚಾರಣೆ ನಡೆಸಿ ಎಫ್. ಐ. ಆರ್. ಮೂಲಕ ಚಾರ್ಜ್‌ಶೀಟ್ ಹಾಕುವ ವ್ಯವಸ್ಥೆ ಪೋಲೀಸ್ ವಿಂಗ್ ತರಹ ಇಲ್ಲೂ ಮಾಡಿದರೆ ಈ ಮಿಸ್‌ಅಪ್ರೋಪ್ರಿಯೇಷನ್ ತಪ್ಪಿಸಲು ಆಗುತ್ತದೆಂದು ತಿಳಿದುಕೊಂಡಿದ್ದೇನೆ. ಇವೊತ್ತು ಬಹಳ ಜನರು ಸಹಕಾರ ಸಂಘಗಳ ಮೇಲೆ ಅಪವಾದ ಮಾಡುತ್ತಾರೆ. ನಮ್ಮ ಮುಂದಿರುವ ಮಾಹಿತಿ ಪ್ರಕಾರ ೨,೭೦೦ ಕೋಟಿ ರೂಪಾಯಿ ವರ್ಕಿಂಗ್ ಕ್ಯಾಪಿಟಲ್ ಇರುವಂಥ ಸಂಸ್ಥೆಗಳಲ್ಲಿ ೫ ಅಥವಾ ೬ ಕೋಟಿ ಮಾತ್ರ, ಮಿಸ್‌ಅಪ್ರೋಪ್ರಿಯೇಷನ್ ಆಗಿದೆ. ಸಹಕಾರ ಸಂಸ್ಥೆಗಳಿಂದಲೇ ಹಣ ದುರುಪಯೋಗವಾಗಿದೆ, ಎಂದು ಕೈತೋರಿ ಹೇಳುವಂಥ ಅವಶ್ಯಕತೆ ಇಲ್ಲ. ಸಾರ್ವಜನಿಕರಲ್ಲಿ ಮೊರ್‍ಯಾಲಿಟಿ ಕಡಿಮೆಯಾಗಿರುವುದು ಎಲ್ಲಾ ಕಡೆ ಇರುವಂತೆ ಇಲ್ಲಿಯೂ ಹಾಗಾಗಿದೆ. ಇದಕ್ಕೆ ಎಲ್ಲಿಯೂ ಪ್ರೋತ್ಸಾಹವಾಗಲೀ ಉದಾಸೀನವನ್ನಾಗಲೀ ತೋರಿಸಬಾರದು. ಇದನ್ನು ತಡೆಗಟ್ಟುವ ಅವಶ್ಯಕತೆ ಜಾಸ್ತಿಯಾಗಿದೆ. ಇದನ್ನು ಕೊನೆಯನ್ನಾಗಿಸಲು ಏನಾದರೂ ಪ್ರಯತ್ನವನ್ನು ಮಾಡಬೇಕೆಂದು ಸಹಕಾರ ಮಂತ್ರಿಗಳಲ್ಲಿ ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ಕಾನೂನಿನಲ್ಲಿ, ಜಾಲಪ್ಪನವರು ಸಹಕಾರ ಮಂತ್ರಿಗಳು ಆದಮೇಲೆ ಕೆಲವು ಬದಲಾವಣೆಗಳನ್ನು ತಂದಿದ್ದಾರೆ. ಅವು ಅತ್ಯಂತ ಅವಶ್ಯಕವಾದವು. ಇನ್ನೂ ಕೆಲವು ಬದಲಾವಣೆಗಳು ಈ ಕಾನೂನಿನಲ್ಲಿ

ಆಗಬೇಕು. ಇವೊತ್ತಿನ ಸಮಾಜಕ್ಕನುಗುಣವಾಗಿ ಕಾನೂನಿನಲ್ಲಿ ತಿದ್ದುಪಡಿಗಳಾಗಿ ತಾವು ಸಮಗ್ರವಾಗಿ ಕಾರ್ಯನಿರ್ವಹಿಸುವಂತೆ ಮಾಡುವ ಅವಶ್ಯಕತೆ ಇದೆ. ಶ್ರೀ ಕೆ. ಹೆಚ್. ಪಾಟೀಲರ ರಿಪೋರ್ಟ್ ಏನಿದೆ ಅದನ್ನು ಪರಿಶೀಲನೆ ಮಾಡಿ ಯಾವ ಯಾವುದನ್ನು ಜಾರಿಗೆ ಕೊಡಲಿಕ್ಕೆ ಸಾಧ್ಯವೋ ಅದನ್ನು ಪರಿಶೀಲನೆ ಮಾಡಬೇಕು. ಅವರ ವರದಿ ಚೆನ್ನಾಗಿದೆ, ಇದಕ್ಕೆ ಸಾಧ್ಯವಾದಂತಹ ತಿದ್ದುಪಡಿ ತಂದು ಸಹಕಾರ ಸಂಘಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡುವತ್ತ ತಾವು ಮುಂದುವರಿಯಬೇಕು.

೬ ವರ್ಷಕ್ಕೆ ಅಧ್ಯಕ್ಷರಾಗಿರಬಹುದೆಂಬ ನಿರ್ಬಂಧವಾಗಲೀ ಮತ್ತು ಪ್ರತಿವರ್ಷವೂ ಅಧ್ಯಕ್ಷಗಿರಿಗೆ ಚುನಾವಣೆ ಆಗಬೇಕು ಎನ್ನುವುದು ತಪ್ಪಲ್ಲ. ಪ್ರತಿ ವರ್ಷ ಅಧ್ಯಕ್ಷರ ಚುನಾವಣೆ ಆಗಲೇಬೇಕು. ಡೈರೆಕ್ಟರ್ ಚುನಾವಣೆಯನ್ನು ಮೂರು ವರ್ಷಕ್ಕೆ ಮಾಡಿರುವುದು ಸೂಕ್ತವಾಗಿದೆ. ಈ ವಿಷಯದಲ್ಲಿ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯ, ಮಹಿಳೆಯರಿಗೆ ಪ್ರಾತಿನಿಧ್ಯ ದೊರಕಿಸಿ ಕೊಟ್ಟಿದ್ದಾರೆ ಇವೊತ್ತು ಮಹಿಳೆಯರು ಇದರಲ್ಲಿ ಹೆಚ್ಚಾಗಿ ಪಾತ್ರ ವಹಿಸುತ್ತಿರುವುದರಿಂದ. ಮಹಿಳೆಯರು ಆಡಳಿತ ಮಂಡಳಿಗಳಲ್ಲಿದ್ದರೆ ಆಡಳಿತ ಮಂಡಲಿ ವ್ಯವಸ್ಥೆ ಉತ್ತಮಗೊಳ್ಳಬಹುದೆಂದು ಹೆಚ್ಚಿನ ಪಾತ್ರ ಅವರಿಗೆ ಕೊಡಬೇಕೆಂದು ತಿದ್ದುಪಡಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ನಾನು ಸಹಕಾರ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸಹಕಾರ ಇಲಾಖೆಯ ವಿಚಾರದಲ್ಲಿ ಎಲ್ಲಿ ಮಾರಾಟ ಇಲಾಖೆ ಏನಿದೆ ಅದರಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಾರಾಟಕರ ವಸೂಲಿ ಏನಿದೆ ಅದು ಉತ್ತಮವಾಗಿದೆ. ಒಂದು ಬಿಗಿಯಾದಂಥ ಆಡಳಿತ ಮಾರುಕಟ್ಟೆ ಇಲಾಖೆಯಲ್ಲಿ ಬಂದಿದ್ದರಿಂದ ಮಾರಾಟ ಸೆಸ್ಸು ಜಾಸ್ತಿಯಾಗಿ ಹಣ ವಸೂಲಾಗಿದೆ. ಆದರೆ ರೈತರಿಗೆ ಇದರಿಂದ ಎಷ್ಟು ಪ್ರಯೋಜನವಾಗಬೇಕಾಗಿತ್ತೋ ಅಷ್ಟು ಪ್ರಯೋಜನ ಮಾರಾಟ ಮಹಾ ಮಂಡಲದಿಂದ ಆಗುತ್ತಿಲ್ಲ ರೈತರ ಸಮಸ್ಯೆಗಳನ್ನು ಎ. ಪಿ. ಎಂ. ಸಿ ಯವರು ಅರ್ಥ ಮಾಡಿಕೊಳ್ಳುತ್ತಿಲ್ಲ ಮತ್ತು ಪರಿಹಾರದಲ್ಲಿ ಸಹಕರಿಸುತ್ತಿಲ್ಲ. ಇದಕ್ಕೆ ಮೂಲ ಕಾರಣ ದಲ್ಲಾಳಿಗಳು ಏನಿದ್ದಾರೆ ಅವರಿಗೆ ಮಾರ್ಕೆಟಿಂಗ್ ಆಕ್ಟ್‌ನಲ್ಲಿ ಅವಕಾಶ ಮಾಡಿಕೊಟ್ಟಿರುವುದು. ಎಲ್ಲಿಯವರೆಗೆ ಈ ದಲ್ಲಾಳಿಗಳಿಗೆ ನೀವು ಮಾರುಕಟ್ಟೆ ಸಮಿತಿಯಲ್ಲಿ ಲೈಸೆನ್ಸ್ ತೆಗೆದುಕೊಂಡು ಕಾರ್ಯ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿರೋ ಅಲ್ಲಿನವರೆಗೆ ರೈತನ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗುವುದಿಲ್ಲ; ಆದ್ದರಿಂದ ಇದು ತಪ್ಪಬೇಕಾದರೆ ಮೊದಲು ಈ ದಲ್ಲಾಳಿಗಳು ಹೋಗಬೇಕು. ಮಾರಾಟಕ್ಕೆ ವ್ಯವಸ್ಥೆಯನ್ನು ಮಾರಾಟ ಸಮಿತಿಯ ಮೂಲಕ ತಮ್ಮ ಇಲಾಖೆಯಲ್ಲಿರುವಂತೆ ಮಾರಲು ವ್ಯವಸ್ಥೆ ಮಾಡಬೇಕು. ಸಹಕಾರ ಸಂಘಗಳು ಇದರಲ್ಲಿ ಹೆಚ್ಚಿನ ಪಾತ್ರ ವಹಿಸಬೇಕು. ಮಾರ್ಕೆಟ್ ಸಮಿತಿಗಳಲ್ಲಿನ ನೌಕರರ ಬಗ್ಗೆ ಇವೊತ್ತು ಏನೇನೂ ಕಂಟ್ರೋಲ್ ಇಲ್ಲ. ಏಕೆಂದರೆ ಎಲ್ಲಾ ನೌಕರರೂ ಇಲಾಖೆಯ ನೌಕರರಾಗಿದ್ದಾರೆ. ಆದ್ದರಿಂದ ಅವರ ಮೇಲೆ ಅಧ್ಯಕ್ಷರಾಗಲೀ, ಸಮಿತಿಯವರಾಗಲೀ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮಾರಾಟ ಸಮಿತಿಯವರು ಕೆಲಸಗಾರರನ್ನು ಹಿಡಿತದಲ್ಲಿಟ್ಟುಕೊಂಡು ಕೆಲಸ ಮಾಡಿಸಲು ಆಗುತ್ತಿಲ್ಲ. ಬೇಕಾದರೆ ಕಾರ್ಯದರ್ಶಿಯವರೊಬ್ಬರನ್ನು ಬಿಟ್ಟು ಉಳಿದವರೆಲ್ಲರ ಬದಲಿಗೆ ಮಾರಾಟ ಸಮಿತಿಯ ನೌಕರರನ್ನೇ ಇಟ್ಟುಕೊಳ್ಳಲು ಸಾಧ್ಯವೇ ಇಲ್ಲವೇ ಎಂಬುದನ್ನು ಅವರು ಪರಿಶೀಲನೆ ಮಾಡಬೇಕು.

ಇಷ್ಟು ಹೇಳಿ ನನಗೆ ಈ ವಿಷಯಗಳನ್ನೆಲ್ಲ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ ಹೆಚ್. ಪಾಟೀಲ್ (ಗದಗ್).—ಮಾನ್ಯ ಸಭಾಧ್ಯಕ್ಷರೇ, ಸಹಕಾರಿಗಳಾದ ತಾವು ಸ್ಪೀಕರ್ ಆಗಿರುವಾಗ, ಸಹಕಾರಿಗಳಲ್ಲೊಬ್ಬರು ಸಹಕಾರ ಇಲಾಖೆಯ ಸಚಿವರಾಗಿರುವಾಗ, ಸಹಕಾರ ಇಲಾಖೆಯ ಬಗ್ಗೆ ಮಾತನಾಡಲು ನನಗೆ ಬಹಳ ಅಭಿಮಾನವಾಗುತ್ತದೆ.

ಅಧ್ಯಕ್ಷರು.– ತಾವುಗಳೂ ಸಹ ಸಹಕಾರಿಗಳಲ್ಲವೆ?

ಶ್ರೀ ಕೆ. ಹೆಚ್. ಪಾಟೀಲ್ —ಕರ್ನಾಟಕದ ಈ ಸಹಕಾರ ಚಳುವಳಿ ಭಾರತ ದೇಶಕ್ಕೆ ನಂದಾದೀಪದಂತಿದೆ. ಮೊಟ್ಟ ಮೊದಲಿಗೆ ಸಹಕಾರ ಚಳುವಳಿ ಪ್ರಾರಂಭವಾಗಿದ್ದುದು ಅಂದಿನ ಬೊಂಬಾಯಿ ಕರ್ನಾಟಕದಲ್ಲಿದ್ದರೂ ಕೂಡ ಆ ಪ್ರದೇಶ ಇಂದು ಕರ್ನಾಟಕದಲ್ಲಿದೆ. ಮೊದಲನೇ ಈ ಅರ್ಬನ್ ಬ್ಯಾಂಕ್, ಇಟಲಿ ಮೊದಲಾದ ದೇಶಗಳ ಅನುಭವವನ್ನು ಪಡೆದು ಆರಂಭಗೊಂಡಿದ್ದುದು ಬೇಟಗೇರಿಯಲ್ಲಿ ಅನಂತರ

ಮಲ್ಲೇಶ್ವರಂನಲ್ಲಿ ಒಂದು ಅರ್ಬನ್ ಸೊಸೈಟಿಯನ್ನು ಪ್ರಾರಂಭ ಮಾಡಲಾಯಿತು. ಈ ಇತಿಹಾಸವನ್ನು ಪಡೆದಂತಹ ಕರ್ನಾಟಕ ರಾಜ್ಯ ಭಾರತ ದೇಶಕ್ಕೆ ಒಂದು ಮೇಲ್ಪಂಕ್ತಿಯನ್ನು ತೋರಿಸತಕ್ಕಂತಹ ಒಂದು ಸಹಕಾರಿ ಚಳುವಳಿಯನ್ನು ಮಾಡಬೇಕು. ನಮ್ಮ ಸಹಕಾರಿ ಪದ್ಧತಿಯಲ್ಲಿ ಅನೇಕ ಲೋಪ ದೋಷಗಳು ಇದ್ದರೂ ಆ ಲೋಪದೋಷಗಳನ್ನು ತಿದ್ದುವುದಕ್ಕೆ ಯಾವ ರೀತಿಯ ಪ್ರಯತ್ನ ಮಾಡಬೇಕು ಎಂಬುದರ ಬಗ್ಗೆ ನಾವು ಗಮನವನ್ನು ಹರಿಸಬೇಕು. ಇವೊತ್ತು ಈ ಚರ್ಚೆಗಾಗಿ ಸಾಧಾರಣವಾಗಿ ಎರಡು ದಿನವಾದರೂ ಸಮಯವನ್ನು ಕೊಡಬೇಕಾಗಿತ್ತೆಂದು ನನ್ನ ಅಪೇಕ್ಷೆ. ಎಲ್ಲಾ ಸದಸ್ಯರಲ್ಲೂ ಈ ಚಳುವಳಿ ಬಗ್ಗೆ ಸಾಂಪ್ರದಾಯಕವಾದಂತಹ ಟೀಕೆಟಿಪ್ಪಣಿಗಳು ಬಂದರೆ ಮಾನ್ಯ ಸಹಕಾರ ಸಚಿವರಿಗೆ ಕೈ ಬಲಪಡಿಸಿದಂತಾಗುತ್ತಿತ್ತು. ಮಾನ್ಯ ಸಹಕಾರ ಸಚಿವರು ಸಚಿವರಾಗುವುದಕ್ಕಿಂತ ಮುಂಚಿತವಾಗಿಯೇ ಸಹಕಾರಿಗಳಾಗಿ ಅನೇಕ ಅನುಭವಗಳನ್ನು ಪಡೆದಿದ್ದಾರೆ. ಮಾರ್ಕೆಟಿಂಗ್ ಸೊಸೈಟಿಯಲ್ಲಿ ಅನುಭವವನ್ನು ಪಡೆದಿದ್ದಾರೆ, ಲ್ಯಾಂಡ್ ಬ್ಯಾಂಕ್‌ನಲ್ಲಿ ಇದ್ದರು, ಸೆಂಟ್ರಲ್ ಬ್ಯಾಂಕಿನ ಛೇರ್ಮನ್ನರಾಗಿದ್ದರು, ಅದೂ ಅಲ್ಲದೆ ಅಪೆಕ್ಸ್ ಬ್ಯಾಂಕಿನಲ್ಲಿ ಡೈರಕ್ಟರೂ ಆಗಿದ್ದರು. ಈ ರೀತಿಯಿಂದ ಅವರು ಅನೇಕ ಅನುಭವಗಳನ್ನು ಪಡೆದಿದ್ದಾರೆ. ಅಂತಹವರಿಗೆ ಸಲಹೆಗಳನ್ನು ನಾನು ಕೊಡಬಯಸಿದರೆ, ಸಲಹೆಗಳು ನಿಜವಾಗಿ ತಾತ್ವಿಕವಾಗಿರಬೇಕು ಮತ್ತು ಅವುಗಳು ಜನತೆಯ ಸಹಕಾರಿ ಚಳುವಳಿಯ ಕಲ್ಯಾಣ ದೃಷ್ಟಿಯಿಂದ ಇರಬೇಕು ಎಂದು ನಾನು ಹೇಳುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೇ, ನಾನು ಒಬ್ಬ ಸಹಕಾರಿಯಾಗಿ ಈ ಡಿಮ್ಯಾಂಡ್‌ನ್ನು ವಿರೋಧಿಸಬೇಕಾದರೆ ಬಹಳ ವ್ಯಸನವೆನಿಸುತ್ತಿದೆ. ಇದನ್ನು ವಿರೋಧಿಸಬಾರದೆಂದು ನನಗೆ ಗೊತ್ತಿದೆ. ನಾವು ವಿರೋಧಪಕ್ಷದವರಾದರೂ ಈ ಸಹಕಾರಿ ಡಿಮ್ಯಾಂಡ್‌ನ್ನು ಸ್ವಾಗತಮಾಡಬೇಕಾಗಿತ್ತು. ಆದರೆ ಇದರಲ್ಲಿ ಅನೇಕ ಲೋಪದೋಷಗಳು ಇವೆ. ಮಾನ್ಯ ಸಹಕಾರ ಸಚಿವರಿಗೆ ಬೇಕಾದಂತಹ ಶಕ್ತಿಯನ್ನು ಇಂದಿನ ಫೈನಾನ್ಸ್ ಡಿಪಾರ್ಟ್‌ಮೆಂಟಾಗಲೀ, ಮುಖ್ಯ ಮಂತ್ರಿಯವರಾಗಲೀ ಕೊಡುವುದಿಲ್ಲ. ಸಹಕಾರಿ ಚಳುವಳಿ ಎಷ್ಟು ಪ್ರಬಲವಾಗಿ ಬೆಳೆಯಬೇಕಾಗಿತ್ತೋ ಅಷ್ಟು ಪ್ರಬಲವಾಗಿ ಬೆಳೆಯುವುದಕ್ಕೆ ಇದರಲ್ಲಿ ದೊಡ್ಡ ಅಡ್ಡಿಯಾಗಿದೆ. ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾದ ಅಜ್ಜಿಬಾಳ ಹೆಗಡೆಯವರು ಮತ್ತು ರಾಮಕೃಷ್ಣ ಹೆಗಡೆಯವರು ಸ್ನೇಹಿತರಾಗಿರುವುದರಿಂದ ಅಜ್ಜಿಬಾಳ ಹೆಗಡೆಯವರು ಈ ಸಹಕಾರಿ ಇಲಾಖೆಗೆ ಹೆಚ್ಚು ಹಣವನ್ನು ಕೊಡಿಸುವುದಕ್ಕೆ ಮುಖ್ಯ ಮಂತ್ರಿಗಳ ಕಿವಿಗೆ ಊದಿ ಹಣವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ತಿಳಿದಿದ್ದೆ. ಆದರೆ ಆ ದಿಸೆಯಲ್ಲಿ ಅವರು ಮಾಡಲಿಲ್ಲವೆಂದು ಕಾಣುತ್ತದೆ. ಸಹಕಾರ ಚಳುವಳಿಯ ಬಗ್ಗೆ ಪಂಡಿತ್ ಜವಹರ್‌ಲಾಲ್ ನೆಹರೂರವರು ಸಹ ಬಹಳ ಆಸಕ್ತಿಯನ್ನು ವಹಿಸಿ ಅನೇಕ ಸಲ ಹೇಳುತ್ತಿದ್ದರು, ಈ ಸಹಕಾರ ಇಲಾಖೆಯನ್ನು ಭದ್ರಪಡಿಸಬೇಕೆಂದು ಸ್ವರಾಜ್ಯ ಆಗಬೇಕಾದರೆ ಒಂದೊಂದು ಹಳ್ಳಿಗೂ ಒಂದು ಸಹಕಾರ ಸಂಘ, ಒಂದು ಪ್ರಾಥಮಿಕ ಶಾಲೆ, ಒಂದು ಪಂಚಾಯಿತಿ ಆಗಬೇಕು ಆಗ ಮಾತ್ರ ಹಿಂದೂಸ್ಥಾನದ ರಾಜ್ಯಗಳನ್ನು ಈ ಸಂಸ್ಥೆಗಳನ್ನು ಸರಿಯಾಗಿ ನಡೆಸಿಕೊಂಡು ಹೋಗಬಹುದೆಂದು ಹೇಳಿದ್ದರು. ಕೇವಲ ಬಿಲ್ಡಿಂಗ್‌ಗಳು ಆದರೆ ಅಥವಾ ಸಹಕಾರಿ ಇಲಾಖೆಗೆ ಒಬ್ಬೊಬ್ಬ ಕಾರಕೂನನನ್ನು ಹಾಕಿದರೆ ಸಾಲದು ತಾತ್ವಿಕವಾಗಿ ಸಹಕಾರ ಸಂಘಗಳು ಆಗಬೇಕು. ತಾತ್ವಿಕವಾಗಿ ಶಿಕ್ಷಣ ದೊರೆಯಬೇಕು ಎಂದು ಅವರು ಅಪೇಕ್ಷೆಪಟ್ಟಿದ್ದರು. ಆದರೆ ಇವೊತ್ತಿಗೂ ಸಹ ಅದು ಆಗದೇ ಹಾಗೆಯೇ ಉಳಿದಿದೆ ಎಂದರೆ ಸಹಕಾರ ಚಳುವಳಿ ಸರಿಯಾಗಿ ಆಗಿಲ್ಲವೆಂದು ನಮಗೆ ತಿಳಿದು ಬರುತ್ತದೆ. ನಿಜ, ನಾವು ಏನೂ ಸಾಧನೆಯನ್ನು ಈ ಸಹಕಾರ ಇಲಾಖೆಯಲ್ಲಿ ಸಾಧಿಸಿಲ್ಲ. ಸ್ವಾತಂತ್ರ್ಯವನ್ನು ಪಡೆದನಂತರ ಅನೇಕ ವಿಧವಾದ ಪ್ರಗತಿಯನ್ನು ಸಾಧಿಸಿದ್ದೇವೆ. ಆದರೆ ನೈಜವಾದ ಪ್ರಗತಿ ಆಗಬೇಕಾದುದು ಸಹಕಾರ ಚಳುವಳಿಯ ಮುಖಾಂತರ ಮಾತ್ರ. ನಾನು ಹೋದ ಸಲಕ್ಕೂ ಮತ್ತು ಈ ಸಲಕ್ಕೂ ವಿಚಾರ ಮಾಡಿ ನೋಡಿದಾಗ ಬಹಳ ಮತಿವಂತ ಜನ ಇವೊತ್ತಿನ ದಿವಸ ಅಸೆಂಬ್ಲಿಯೊಳಗೆ ಕುಳಿತಿದ್ದಾರೆ. ನಾನು ಆ ಕಡೆ ಕುಳಿತೂ ನೋಡಿದ್ದೇನೆ, ಈಗ ಈ ಕಡೆಯೂ ಕುಳಿತು ನೋಡುತ್ತಿದ್ದೇನೆ ಯಾವಾಗಲೂ ಸಹಕಾರ ಚಳುವಳಿ ಎಂದರೆ ಹಣ ತಿನ್ನುವವರು ಕೂಡಿ ಮಾಡತಕ್ಕ ಕೆಲಸ ಎಂದು ಜನರು ತಿಳಿದುಕೊಂಡಿದ್ದರು. ಸಹಕಾರ ಚಳುವಳಿಯಲ್ಲಿ ದುಷ್ಟರು ಒಂದು ಸಂಘಟನೆ ಇರುತ್ತದೆ ಎಂದು ಜನರು ತಿಳಿದುಕೊಂಡಿದ್ದ ಕಾಲ ಒಂದು ಇತ್ತು. ಸಹಕಾರಿ ಸೊಸೈಟಿಗಳನ್ನು ಮಾಡಿದರೆ ಅಲ್ಲಿ ಹಣವನ್ನು ಹೊಡೆಯುತ್ತಿದ್ದಾರೆಂದು ಪರಂಪರಾನುಗತವಾಗಿ ಜನರು ತಿಳಿದುಕೊಂಡು ಬಂದಿದ್ದರು. ಇವೊತ್ತಿನ ದಿವಸಗಳಲ್ಲಿ ಅದು ಕಡಿಮೆಯಾಗಿದೆ. ಸಹಕಾರ ಚಳುವಳಿಯನ್ನು ಕೂಲಂಕುಷವಾಗಿ ಚರ್ಚೆ ಮಾಡಿ ನೋಡಿದರೆ ಯಾವ ದೃಷ್ಟಿಯಿಂದಲೂ ಇದಕ್ಕೆ ಹೆಚ್ಚಿನ ಸಹಕಾರ ಸಿಕ್ಕಿಲ್ಲ. ಟಾಟ ಕಂಪನಿ ಮತ್ತು ಬಿರ್ಲಾ ಕಂಪನಿಗಳಿಗೆ ಸರಕಾರದವರು ಕೊಡುವ ಹಣಕ್ಕೆ ಹೋಲಿಸಿದರೆ ಈ ಸಹಕಾರ ಸಂಘಗಳಿಗೆ

ಕೊಡುವ ಹಣ ಏನೇನೂ ಸಾಲದು. ನಮ್ಮಲ್ಲಿರುವ ಅಂಕಿ ಸಂಖ್ಯೆಗಳ ಪ್ರಕಾರ ೨೭,೦೨೮ ಹಳ್ಳಿಗಳು ನಮ್ಮ ರಾಜ್ಯದಲ್ಲಿ ಇವೆ. ವಿಲೇಜ್ ಪಂಚಾಯಿತಿಗಳು ೮.೨೪೭ ಇವೆ. ಪ್ರೈಮರಿ ಸ್ಕೂಲುಗಳು ೨೩,೫೪೪ ಇವೆ. ಹೈಯರ್ ಪ್ರೈಮರಿ ಸ್ಕೂಲುಗಳು ೧೩,೨೭೦ ಇವೆ, ನಮ್ಮ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿಗಳು ಎಷ್ಟು ಇವೆ ಎಂದರೆ ೪೮೭೫ ಮಾತ್ರ. ಮಾನ್ಯ ಜಾಲಪ್ಪನವರನ್ನು ಟೀಕೆ ಮಾಡುತ್ತೇನೆಂದು ತಿಳಿಯಬಾರದು. ಈ ಸಹಕಾರ ಚಳುವಳಿ ಉಗಮವಾಗಿದ್ದುದು ೧೯೦೫ನೇ ಇಸವಿಯಲ್ಲಿ, ಬ್ರಿಟಿಷರ ಕಾಲದ ಆದಿಯಿಂದಲೂ ಈ ಸಹಕಾರ ಚಳುವಳಿ ನಡೆದುಕೊಂಡು ಬರುತ್ತಿದೆ. ಆಮೇಲೆ ಕಾಂಗ್ರೆಸ್ ಸರ್ಕಾರ ಬಂತು ಈ ಕಾಂಗ್ರೆಸ್‌ಗೆ ವಿರುದ್ಧವಾದ ಸರ್ಕಾರ ಈಗ ಬಂದಿದೆ. ಆದರೂ ಸಹಕಾರ ಕ್ಷೇತ್ರದಲ್ಲಿ ಏನೂ ಅಭಿವೃದ್ಧಿಯಾಗಿಲ್ಲ. ಪ್ರತಿಯೊಂದು ಹಳ್ಳಿಗೂ ಸಹಾ ಒಂದೊಂದು ಶಾಲೆ ಒಂದೊಂದು ಸಹಕಾರ ಸಂಘ, ಒಂದೊಂದು ಗ್ರಾಮ ಪಂಚಾಯಿತಿ ಆಗಬೇಕು ಆಗ ಮಾತ್ರ ಸಹಕಾರ ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡಿದಂತಾಗುತ್ತದೆ. ಹಿಂದಿನ ಸರಕಾರದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಸಹಕಾರ ಮಂತ್ರಿಗಳಾಗಿದ್ದರು, ಈಗ ಅವರು ಮುಖ್ಯ ಮಂತ್ರಿಗಳಾಗಿದ್ದಾರೆ. ಅಷ್ಟೇ ಅಲ್ಲ ತಮ್ಮ ಒಲವಿನ ಸಹಕಾರಿ ಖಾತೆಗೆ ಸಹಕಾರಿ ಕ್ಷೇತ್ರದಲ್ಲಿ ಅನುಭವವಿರುವ ಮಂತ್ರಿಗಳನ್ನೇ ಕೊಟ್ಟಿದ್ದಾರೆ. ಶ್ರೀಮಾನ್ ಅಜ್ಜಿಬಾಳ ಹೆಗಡೆಯವರನ್ನು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರನ್ನಾಗಿಯೂ ಸಹ ಮಾಡಿದ್ದಾರೆ. ಇಂತಹ ಅನುಭವಿಗಳೆಲ್ಲಾ ಸಹಕಾರ ಕ್ಷೇತ್ರದಲ್ಲಿ ಇದ್ದಾಗ್ಯೂ ಸಹ ನಾವು ಸಹಕಾರಿ ಚಳುವಳಿಯನ್ನು ಪುನರುಜ್ಜೀವನ ಮಾಡದಿದ್ದರೆ ಇನ್ನು ಯಾವಾಗ ಮಾಡುವುದು? ನಮ್ಮ ರಾಜ್ಯದಲ್ಲಿ ಕೋ-ಆಪರೇಟಿವ್ ಸಹಕಾರ ಸಂಘಗಳು ಒಟ್ಟು ೨೩ ಸಾವಿರದ ೧೭೦ ಇವೆ. ಈ ಸಂಘಗಳಿಂದ ರಾಜ್ಯದಲ್ಲಿ ನೂರಕ್ಕೆ ನೂರರಷ್ಟು ಪ್ರಗತಿಯನ್ನು ಸಾಧಿಸುವುದಕ್ಕಾಗುವುದಿಲ್ಲ. ೧೯೦೫ನೇ ಇಸವಿಯಿಂದ ಸಹಕಾರಿ ಚಳುವಳಿಯನ್ನು ಬೆಂಬಲಿಸುತ್ತಾ ಬಂದಂತಹ ಹಳ್ಳಿ ನಮ್ಮದು. ಆದರೂ ನಮ್ಮ ಹಳ್ಳಿಯಲ್ಲೂ ಸಹ ನೂರಕ್ಕೆ ನೂರರಷ್ಟು ಈ ಚಳುವಳಿ ಕವರ್ ಆಗಿಲ್ಲ. ಇವೊತ್ತು ಅಪೆಕ್ಸ್‌ಬ್ಯಾಂಕ್ ತೆಗೆದುಕೊಳ್ಳಿ, ಈ ಬ್ಯಾಂಕಿನಲ್ಲಿ ಹಣ ಪ್ರಬಲವಾಗಿ ಬೆಳೆದಿದೆ, ಈ ಬ್ಯಾಂಕಿನವರಿಗೆ ನಬಾರ್ಡ್‌ನವರು ಹಣವನ್ನು ಅರ್ಧ ಪರ್‌ಸೆಂಟ್ ಬಡ್ಡಿ ಮೇಲೆ ಬಿಡುಗಡೆ ಮಾಡುತ್ತಾರೆ, ಇವರು ಡಿ.ಸಿ.ಸಿ. ಬ್ಯಾಂಕುಗಳಿಗೆ ೩ ಪರ್‌ಸೆಂಟ್ ಬಡ್ಡಿಯ ಮೇಲೆ ಹಣವನ್ನು ಬಿಡುಗಡೆ ಮಾಡುತ್ತಾರೆ. ಅರ್ಧ ಪರ್‌ಸೆಂಟ್ ತೆಗೆದುಕೊಳ್ಳುವ ಬದಲಾಗಿ ಕಾಲು ಪರ್‌ಸೆಂಟ್ ಬಡ್ಡಿ ಮಾತ್ರ ಏಕೆ ತೆಗೆದುಕೊಳ್ಳಬಾರದು? ಸೆಂಟ್ರಲ್ ಬ್ಯಾಂಕ್‌ನವರು ೨ ಪರ್‌ಸೆಂಟ್ ಬಡ್ಡಿಯನ್ನು ತೆಗೆದುಕೊಳ್ಳುತ್ತಾರೆ. ಸೆಂಟ್ರಲ್ ಬ್ಯಾಂಕ್‌ನವರು ೨ ಪರ್‌ಸೆಂಟ್ ಬಡ್ಡಿಯನ್ನು ಏಕೆ ತೆಗೆದುಕೊಳ್ಳಬೇಕು?

ಮಾನ್ಯ ಅಧ್ಯಕ್ಷರೇ, ತಾವೂ ಕೂಡಾ ಸಹಕಾರ ಸಂಘದ ಚೇರ್‌ಮನ್ ಆಗಿದ್ದವರು. ಹಣ ಬೇಕಾದಾಗ ಕೊಡುವಂತಹ ಸದ್ಬುದ್ಧಿ ಇಲ್ಲದಿರುವಂತಹ ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕ್‌ಗಳಿಗೆ ಹಣ ಕೊಟ್ಟು ತಮ್ಮದಾದುದು ಏನೂ ಸಾಧನೆ ಇಲ್ಲದಿದ್ದರೂ ಸಹ ಪ್ರೈಮರಿ ಸೊಸೈಟಿಗೆ ಕೊಡುವ ಹಣದಲ್ಲಿ ಹೇರಳವಾದ ಇಂಟ್ರೆಸ್ಟ್ ಹಾಕುವುದು ಇದು ಸಾಧುವೇ, ಇದು ಸಹಕಾರ ಚಳುವಳಿಯೇ? ಅಧ್ಯಕ್ಷರೇ, ಸಹಕಾರ ಚಳುವಳಿ ಎಂದರೆ ಒಬ್ಬರಿಗಾಗಿ ಎಲ್ಲರೂ, ಎಲ್ಲರಿಗಾಗಿ ಒಬ್ಬರು ಎನ್ನುವಂತಹ ತತ್ವವನ್ನು ಆಚರಣೆಗೆ ಕೊಡಲಿಕ್ಕೆಂದು ನಿಮ್ಮ ಯೂನಿಯನ್‌ಗೆ ೧೮ ಲಕ್ಷ ರೂಪಾಯಿಗಳನ್ನು ಕೊಡುತ್ತಾ ಇದ್ದಾರೆ. ಇದು ಆ ತತ್ವದ ಸಲುವಾಗಿ. ಆದರೆ ಇವೊತ್ತು ಏನಾಗಿದೆ ಎಂದರೆ, ಇದನ್ನು ಈ ಸಭಾನಾಯಕರು ಗಮನಿಸಬೇಕು, ಇವೊತ್ತು ಸಹಕಾರ ಚಳುವಳಿ ಎನ್ನುವುದು ಬದಲಾವಣೆಯಾಗಿ ಸರಕಾರಿ ಚಳುವಳಿಯಾಗಿದೆ. ಅಂದೊಮ್ಮೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ನಾಮಿನೇಷನ್ ಮಾಡುವುದಕ್ಕೆ ಕಟುವಾಗಿ ವಿರೋಧ ಇದ್ದರು. ಒಂದೊಂದು ಸಂಸ್ಥೆಗೆ ಮೂರು ಜನರನ್ನು ನಾಮಿನೇಶನ್ ಮಾಡಬೇಕೆಂದು ಹೇಳುವಾಗ ಅವರು ಹೇಳಿದರು ಪಾಟೀಲ್‌ರವರೇ ಕಾಯಿದೆಯೊಳಗೆ ಮೂರು ಜನರನ್ನು ಹಾಕಿದ್ದೇವೆ. ಆದರೆ ಒಬ್ಬರಿಗಿಂತ ಹೆಚ್ಚು ಮಂದಿಯನ್ನು ನಾಮಿನೇಶನ್ ಮಾಡುವುದಿಲ್ಲ. ಅದನ್ನೂ ಸಹಿತ ಮಾಡುತ್ತೇನೆ ಎನ್ನುವ ನಿಯಮ ಇಲ್ಲ ಎಂದು ಹೇಳಿದರು. ಆದರೆ ಈಗ ಇರುವುದು ಇರಲಿ ಅದು ತಮ್ಮ ಸ್ಥಾನಮಾನಕ್ಕನುಗುಣವಾಗಿ ಏತಕ್ಕೆ ಬದಲಾವಣೆ ಆಗುತ್ತದೆಯೋ ನನಗೆ ಗೊತ್ತಿಲ್ಲ. ಆದರೆ ಒಂದು ಮಾತು ನಿಜ, ಅವೊತ್ತಿನ ದಿವಸ ಹೆಗಡೆಯವರು ಜನತಾ ಪಕ್ಷದ ಮುಖಂಡರೂ ಆಗಿರಲಿಲ್ಲ, ಅಂದು ಮುಖ್ಯಮಂತ್ರಿಗಳೂ ಆಗಿರಲಿಲ್ಲ. ಅಂದು ಅವರು ಸಹಕಾರಿಗಳು ಆಗಿದ್ದರು. ಸಹಕಾರಿ ಮಂತ್ರಿಯಾಗಿದ್ದರು. ಸಹಕಾರಿ ಚಳುವಳಿಯನ್ನು ಪ್ರಬಲವಾಗಿ ಬೆಳೆಸಬೇಕೆನ್ನುವ ಒಂದು ಹವ್ಯಾಸದಲ್ಲಿದ್ದರು. ಆದರೆ ಇವೊತ್ತಿನ ದಿವಸ ಏನಾಗಿದೆ ? ಕಾನೂನಿನಲ್ಲಿ ಮೂರು ಮಂದಿ ಇದರೂ ಸಹಿತ ೬-೭ ಮಂದಿ

ಯನ್ನು ನಾಮಿನೇಟ್ ಮಾಡಿರುವುದು ಮಾನ್ಯರ ಗಮನಕ್ಕೆ ಬಂದಿರಬಹುದು ಎಂದು ನಾನು ತಿಳಿದು ಕೊಂಡಿದ್ದೇನೆ. ಇದರ ಅನುಭವ ಆಗಬೇಕು. ನಾನು ಈ ವಿಷಯದಲ್ಲಿ ಹೆಚ್ಚು ಹೇಳುವುದಕ್ಕೆ, ಈ ದಿಸೆಯಲ್ಲಿ ಹೆಚ್ಚು ಮುಂದುವರಿಯಲಿಕ್ಕೆ ಹೋಗುವುದಿಲ್ಲ. ಏಕೆಂದರೆ ಅಧಿಕಾರ, ಇವೊತ್ತು ಇರಬಹುದು, ನಾಳೆ ಹೋಗಬಹುದು. ಆದರೆ ಸಹಕಾರಿ ಜೀವನ ಸದಾಕಾಲವೂ ಇರುತ್ತದೆ. ನನ್ನನ್ನು ಸಹಕಾರ ಕಾನೂನು ನಿರ್ಮಾಣ ಮಾಡುವಂತಹ ಸಮಿತಿಗೆ ಚೇರ್‌ಮನ್ ಮಾಡುವಾಗ ಅಂದು ಇದ್ದಂತಹ ಮುಖ್ಯ ಮಂತ್ರಿಗಳಿಗೆ ನಾನು ಹೇಳಿದ್ದೇನೆ. ನನ್ನನ್ನು ಕರೆಯಿಸಿ ಕೇಳಿದರು, ಎಲ್ಲರೂ ನಿಮ್ಮನ್ನು ಅಧ್ಯಕ್ಷರಾಗಿ ಮಾಡಬೇಕೆಂದು ಹೇಳುತ್ತಿದ್ದಾರೆ. ನೀವು ಸಮಿತಿಯ ಅಧ್ಯಕ್ಷರಾಗಬೇಕು ಎಂದು ಕೇಳಿಕೊಂಡಾಗ ನಾನು ಒಲ್ಲೆ ಎಂದು ಹೇಳಿದ್ದೇನೆ. ಏತಕ್ಕೆಂದರೆ, ನಾನು ಮಾಡುವ ಕಾನೂನನ್ನು ಸಹಕಾರಿಯಾಗಿ ಮಾಡಬಲ್ಲೆ. ನಾನು ಮಾಡುವ ಕಾನೂನು ನಿಮ್ಮ ಮುಖ್ಯಮಂತ್ರಿ ಪದವಿಯನ್ನು ಖಾಯಂ ಆಗಿ ಇರಲಿಕ್ಕೆ ಆಗುತದೆಂದು ಹೇಳಲಿಕ್ಕಾಗುವುದಿಲ್ಲ. ಅದಕ್ಕೆ ನೀವು ಒಪ್ಪಿದರೆ ಆಗುತ್ತದೆ ಇಲ್ಲದಿದ್ದರೆ ಇಲ್ಲ ಎಂದು ಹೇಳಿದೆ. ಆದರೂ ಕೂಡಾ ಅದನ್ನು ನಾನು ಮಾಡಿದೆ. ಆ ಸಹಕಾರಿ ಕಾನೂನಿನ ವಿಷಯದಲ್ಲಿ ಅನೇಕಸಲ ಸಹಕಾರ ಸಚಿವರು, ಅನೇಕ ಜನ ಆ ಪಕ್ಷದ, ಈ ಪಕ್ಷದ ಸಹಕಾರಿಗಳು, ಮುಖ್ಯ ಮಂತ್ರಿಗಳೂ ಸಹ ಆ ಕಾನೂನು ಸರಿಯಾಗಿದೆ. ಮುಖ್ಯವಾಗಿದೆ, ಅದಕ್ಕಾಗಿ ತೀವ್ರವಾದ ಪುರಸ್ಕಾರವನ್ನು ಕೊಡಬೇಕೆಂದು ಹೇಳುತ್ತಾ ಇದ್ದಾರೆ. ಒಂದೊಮ್ಮೆ ಭಾಷಣಗಲ್ಲಿಯೂ ಮಾನ್ಯ ಕೆ.ಹೆಚ್. ಪಾಟೀಲ್‌ರವರ ಸಮಿತಿಯ ಕೆಲವು ಸಲಹೆ ಗಳನ್ನು, ಕೆಲವು ಕಲಮುಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಯಾವುದನ್ನು ತೆಗೆದು ಕೊಂಡಿದ್ದಾರೆ ? ಯಾವ್ಯಾವುದು ಒಪ್ಪು ಆಗುತ್ತದೆಯೋ ಅದನ್ನು ಸ್ವೀಕಾರ ಮಾಡಿದ್ದಾರೆ, ಯಾವ್ಯಾವುದು ತಪ್ಪು ಆಗುತ್ತದೋ ಅದನ್ನು ಬಿಟ್ಟಿದ್ದಾರೆ. ನಾನು ಹೇಳುವುದು ರೈತರಿಗೆ ಕೊಡತಕ್ಕಂತಹ ಸಬ್ಸಿಡಿಯ ಅವಶ್ಯಕತೆ ಇಲ್ಲ. ಕಾನೂನು ಅನುಕೂಲವಾಗಿರುವಂಥಾದ್ದನ್ನು ಮಾಡಿದರೆ ರೈತರ ಹಣ ವೇಳೆಗೆ ಸರಿಯಾಗಿ ಬರುತ್ತದೆ. ಸೆಂಟ್ರಲ್ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕಿನ ಏನು ಹಣ ತೆಗೆದು ಕೊಳ್ಳುತ್ತಾರೆ. ಆ ಹಣವನ್ನು ನೀವು ನೇರವಾಗಿ ಸಬ್ಸಿಡಿ ಎಂದು ಸರಕಾರದವರು ಕೊಟ್ಟುಬಿಡಿ. ರೈತರು ಯಾರು ಸಮಯಕ್ಕೆ ಸರಿಯಾಗಿ ಸಾಲ ತೆಗೆದುಕೊಂಡದ್ದನ್ನು ಕೊಡುತ್ತಾರೆ, ಅವನ ನಡುವೆ ದಲ್ಲಾಲಿಗಳು ಹೊಡೆಯುತಕ್ಕಂತಹ ೫ ಪರ್ಸೆಂಟ್ ಹಣ ಏನಿದೆ ಅದನ್ನು ನಾವು ಸರಕಾರಕ್ಕೆ ಸಬ್ಸಿಡಿ ಎಂದು ಕೊಡುತ್ತೇವೆ. If he returns money in time, his interest is only six percent, ನೀವು ಹಾಗೆ ಮಾಡಲಿಲ್ಲ. ಕೊಟ್ಟವರಿಗೆ ಸಬ್ಸಿಡಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. ನೀವು ಎಲ್ಲರಿಗೂ ಇದನ್ನು ಮಾಡಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ —ಅದು ಬೇರೆ, ಇದು ಬೇರೆ. ಓವರ್‌ಡ್ಯೂಸ್ ಯಾರಿದ್ದಾರೆ ಅವರು ಅಂಥಾದ್ದನ್ನು ಸಕಾಲದಲ್ಲಿ ಕೊಟ್ಟುಬಿಟ್ಟರೆ ಬಡ್ಡಿ, ಸುಸ್ತಿಬಡ್ಡಿ ಎಲ್ಲಾ ಬಿಡುತ್ತೇವೆಂದು ಹೇಳಿದ್ದೆವು. ಅದು ಬೇರೆ. ಈಗ ಯಾರು ಸಾಲ ಪಡೆದು ಸಕಾಲದಲ್ಲಿ ಹಿಂದಿರುಗಿಸುತ್ತಿಲ್ಲ, ಅವರಿಗೆ, ವೀ ಆರ್ ಚಾರ್ಜಿಂಗ್ ಓನ್ಲಿ, ನಾಬಾರ್ಡ್ ರೇಟ್ ಆಫ್ ಇಂಟ್ರೆಸ್ಟ್ ಎಂದು ಮಾಡಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ಇದನ್ನು ನೀವು ರೂಲ್ಸ್‌ನಲ್ಲಿ ಹಾಕಿದರೆ ಜನರು ಬೇಗ ಕೊಡುತ್ತಾರೆ. ವೇಳೆಗೆ ಸರಿಯಾಗಿ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಈಗ ನಿಮಗೆ ಬುದ್ಧಿ ಬಂದರೆ ನನಗೆ ಬಹಳ ಸಂತೋಷ ಅನಿಸುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ನಾವು ಅಧಿಕಾರಕ್ಕೆ ಬಂದ ತತ್‌ಕ್ಷಣ ಮಾಡಿದ್ದೇವೆ.

ಶ್ರೀ ಕೆ ಎಚ್. ಪಾಟೀಲ್.—ಯಾವ ರೈತರು ಯಾರು ಸಮಯಕ್ಕೆ ಸರಿಯಾಗಿ ಕೊಡುತ್ತಾರೆ ಅವರಿಗೆ ಈ ರೇಟ್‌ನಲ್ಲಿ ಕೊಡಬೇಕೆನ್ನುವ ನಿಯಮವನ್ನು ಮಾಡಿಕೊಂಡರೆ ಅದು ನಿಜವಾಗಿಯೂ ಉತ್ತಮವಾದಂತಹ ನಿಯಮವಾಗುತ್ತದೆ. ಇವೊತ್ತಿನ ದಿವಸ ನಬಾರ್ಡ್‌ನವರು ಬ್ಯಾಂಕುಗಳಿಗಿಂತ ಮೂರು ಪರ್ಸೆಂಟ್ ಕಡಿಮೆ ಮಾಡಿ ರೇಟ್‌ನ ಬಡ್ಡಿಯಲ್ಲಿ ಸಾಲವನ್ನು ಕೊಡುತ್ತಿದ್ದಾರೆ. ಏತಕ್ಕಾಗಿ ಕೊಡುತ್ತಿದ್ದಾರೆ ? ರೈತರಿಗೆ ಹೆಚ್ಚು ಸಹಾಯಕವಾಗಲಿ ಎಂದು; ರಿಸರ್ವ್ ಬ್ಯಾಂಕ್‌ನವರು, ಷೆಡ್ಯೂಲ್ ಬ್ಯಾಂಕ್‌ನವರು ಕೊಡುವ ರೇಟಿಗಿಂತ ಮೂರು ಪರ್ಸೆಂಟ್ ಇಂಟ್ರೆಸ್ಟ್ ರೇಟಿಗಿಂತ ಕಡಿಮೆ ಮಾಡಿ ನಮ್ಮ ಸಹಕಾರ ಸಂಘಗಳಿಗೆ ಕೊಡುತ್ತಾರೆ. ಇದು ನಿಜವಾಗಿಯೂ ಸಂತೋಷದ ಸಂಗತಿ. ಇದರ ಸದುಪಯೋಗವನ್ನು ಸಂಪೂರ್ಣವಾಗಿ ಮಾಡಿ ರೈತರಿಗೆ ಸಾಲವನ್ನು ಕೊಡಬೇಕು. ಅಧ್ಯಕ್ಷರೇ ರೈತರಿಗೆ ಕೊಡುವ ಸಾಲ ಸಮಂಜಸವಾದ ಸಾಲವೇ ? ಈ ಮಾತನ್ನು ನಾವು ಪರಿಶೀಲಿಸಿ ನೋಡ

ಬೇಕಾಗುತ್ತದೆ. ತಾವೂ ಆ ರಂಗದಲ್ಲಿದ್ದವರು. ತಮಗೂ ಅನುಭವವಿದೆ. ಇವೊತ್ತು ರೈತರಿಗೆ ಎಷ್ಟು ಹಣ ಬೇಕು. ಏತಕ್ಕಾಗಿ ಕೊಡುತ್ತಿದ್ದೀರಿ ಎಂದರೆ ವ್ಯವಸಾಯಕ್ಕಾಗಿ ಎಂದು ಹೇಳುತ್ತೀರಿ. ವ್ಯವಸಾಯಕ್ಕೆ ಕೊಡುವ ಸಾಲ ಎಂದು ಹೇಳುತ್ತೀರಿ. ೧೯೦೫ ರಿಂದ ಇಲ್ಲಿಯವರೆಗೆ ೮೦ ವರ್ಷಗಳ ಕಾಲ ನಮ್ಮ ಸಹಕಾರ ಚಳುವಳಿ ಬಂದಿದ್ದರೂ ಸಹಿತ ಎಷ್ಟು ಜನ ರೈತರು ತಮ್ಮ ಠೇವಣಿ ಇಡಲಿಕ್ಕೆ ಕಲಿತಿದ್ದಾರೆ ? ಈ ನೀರಾವರಿಯಿಂದ, ಕಬ್ಬಿನಿಂದ ಬೆಳೆಯುತಕ್ಕಂತಹ ಮಾತುಗಳನ್ನು ಬಿಡಿ. ಹಳ್ಳಿಯ ರೈತ ? ತಮಗೂ ನೇರವಾಗಿ ಕೇಳುತ್ತಿದ್ದೇನೆ, ತಾವು ಎಂದಾದರೂ ಠೇವಣಿ ಇಡುವಂತಹ ಸ್ಥಿತಿಗೆ ಬಂದಿದ್ದೀರಾ ? ನಾನಂತೂ ಬರಲಿಲ್ಲ. ಸಾಲವನ್ನು ಬಿಟ್ಟು. ಈ ರೀತಿಯಾಗಿ ಏಕೆ ಆಗುತ್ತಿದೆ ಎಂದರೆ ಸಹಕಾರಿಗಳಿಗೆ ನೀವು ಕೊಡುವ ಸಾಲ ಪೂರ್ಣ ಅಲ್ಲ. ಆ ಸಾಲದಲ್ಲಿ ಕೇವಲ ಅವನ ಹುಟ್ಟುವಳಿಗೆ ಮಾತ್ರ ಹಣವನ್ನು ಸಾಲವಾಗಿ ಕೊಟ್ಟು ಬಿಡುತ್ತೀರಿ. ಅವನು ಗೃಹೋಪಕಾರಿಗೆ ಬೇಕಾದಂತಹ ಹಣವನ್ನು ಬೇರೆ ಕಡೆಗಳಿಂದ ಕೈಗಡವಾಗಿ ತರುತ್ತಾನೆ. ಹೀಗೆ ಬೇರೆ ಕಡೆಗಳಿಂದ ತೆಗೆದುಕೊಂಡು ಬಂದಂತಹ ಸಾಲವನ್ನು ಮೊದಲು ಮರಳಿಸಿ, ಅನಂತರ ಸಹಕಾರ ಸಂಘಗಳ ಸಾಲವನ್ನು ಮರಳಿಸುತ್ತಾ ಇದ್ದಾನೆ. ಇದರಿಂದಾಗಿ ಅವನಿಂದ ಬರತಕ್ಕಂತಹ ಲಾಭವೆಲ್ಲಾ ಸಹಕಾರಿ ಸಂಘಗಳಿಗೆ ಬಾರದೇ ವ್ಯಾಪಾರಸ್ಥರ ಕೈಗೆ ಹೋಗುತ್ತಿದೆ. ತಾವು ಹೇಳಬಹುದು, ಅನೇಕ ಜನ ದುಡ್ಡು ತೆಗೆದುಕೊಂಡು ಬಿದೀಮರಾಗಿರುವವರು ಇದ್ದಾರೆ ಎಂದು.—ನಾನೇನು ಅಂತಹವರು ಇಲ್ಲವೆನ್ನುವುದಿಲ್ಲ, ಎಲ್ಲಾ ತರಹದ ಜನರೂ ಸಹ ಸೋಸೈಟಿಯಲ್ಲಿ ಇರುತ್ತಾರೆ. ಕೆಟ್ಟದ್ದು ಮತ್ತು ಚಲೋ ಎರಡೂ ಇರುತ್ತದೆ. ಸೂರ್ಯ ಇದ್ದಲ್ಲಿ ಕತ್ತಲೂ ಇರುತ್ತದೆ. ಒಬ್ಬ ಮಿಸ್ ಅಪ್ರೋಪ್ರಿಯೇಷನ್ ಮಾಡಿದರೆ ಸಹಸ್ರಾರು ಜನ ಮಿಸ್ ಅಪ್ರೋಪ್ರಿಯೇಷನ್ ಮಾಡುವುದಿಲ್ಲ. ಇವೊತ್ತು ಸಹಕಾರಿ ಸಂಘಗಳಲ್ಲಿ ಮಿಸ್ ಅಪ್ರೋಪ್ರಿ ಯೇಷನ್ ಆಗಿದೆಯೆಂದು ನೀವು ಒಂದು ಮುಟ್ಟ ಹಾಕಬಹುದು. ಹಾಗಾದರೆ ಒಬ್ಬ ವ್ಯಕ್ತಿ ಕಂಪನಿ ಮಾಡಿ ಅದರಲ್ಲಿ ಮಿಸ್ ಅಪ್ರೋಪ್ರಿಯೇಷನ್ ಮಾಡಿದರೆ ನಿಮಗೆ ಏನು ಮಾಡಲಿಕ್ಕೆ ಸಾಧ್ಯವಾಗುತ್ತದೆ ? ವ್ಯಕ್ತಿ ಮಾಡಿದರೆ ನಿಮಗೆ ಏನು ಮಾಡಲಿಕ್ಕೆ ಸಾಧ್ಯವಿದೆಯೇ ? ನರಗುಂದದಲ್ಲಿ ಟೆಕ್ಸ್‌ಟೈಲ್ ಮಿಲ್ಲಿದೆ. ಆ ಮಿಲ್ಲಿನಲ್ಲಿ ೪೯ ಲಕ್ಷ ರೂಪಾಯಿಗಳನ್ನು, ಬ್ಯಾಂಕಿನ ಹಣವನ್ನು ಸುಳ್ಳು ಹುಂಡಿಯನ್ನು ಕೊಟ್ಟು ಹಣವನ್ನು ದೋಚಿದ್ದಾರೆ. ಅವರೇ ಇವೊತ್ತು ನಮ್ಮ ಮಂತ್ರಿಗಳ ಹಿಂದೆ ಅಡ್ಡಾಡುತ್ತಿದ್ದಾರೆ. ಅಂತಹವರಿಗೆ ಏನು ಮಾಡುವುದಕ್ಕಾಗುತ್ತದೆ ? ಅದೇ ಸಹಕಾರಿಯಾಗಿದ್ದರೆ ೧೦ ರೂಪಾಯಿಗಳನ್ನು ಮಾಡಿದ್ದರೂ ಸಹ ಉಗ್ರವಾಗಿ ಶಿಕ್ಷೆಯನ್ನು ಮಾಡುತ್ತಿದ್ದಿರಿ. ಇದರಿಂದ ಏನಾಗಿದೆ ಎಂದರೆ ಸಹಕಾರಿ ಚಳುವಳಿಯ ಬಗ್ಗೆ ಜನ ಹೆದರಿದ್ದಾರೆ. ಅಲ್ಲಿ ಹೋದ ಕೂಡಲೇ ಏನಾಗುತ್ತದೆಯೋ ಏನೋ, ಅಲ್ಲಿ ನಮ್ಮ ಹಣವನ್ನು ಇಟ್ಟರೆ ಏನಾಗುತ್ತದೆಯೋ ಏನೋ ಎಂದು ಹೆದರುತ್ತಾರೆ. ಇವೊತ್ತು ಅನೇಕ ಜನ ಸಹಕಾರಿಗಳು, ದೊಡ್ಡದೊಡ್ಡ ಸಹಕಾರಿಗಳು ನಮ್ಮ ಸಹಕಾರ ಸಂಘಗಳ ಮುಖಾಂತರ ವ್ಯಾಪಾರ ಮಾಡಿ ಬಂದ ಹಣವನ್ನು ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್‌ಗಳಲ್ಲಿ ಹಾಕಿದ್ದಾರೆ. ಜನರು ಇವರ ಮೇಲೆ ಹೊಂದಿರುವ ಅವಿಶ್ವಾಸವನ್ನು ಹೋಗಲಾಡಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಇವೊತ್ತು ಕೋ–ಆಪರೇಟಿವ್ ಬ್ಯಾಂಕ್ಸ್ ನಮ್ಮಲ್ಲಿ ಕಡಿಮೆ ಇಲ್ಲ ಬ್ಯಾಂಕ್ ಒಂದೆರಡು ಇರಬಹುದು, ಇಪ್ಪತ್ತೂ ಇರಬಹುದು. ಆದರೆ ಅವುಗಳ ಬ್ರ್ಯಾಂಚ್‌ಗಳು ಎನಿವೆ, ಅವುಗಳು ಏತಕ್ಕಾಗಿ ಇವೆ ? ಒಂದೊಂದು ಬ್ರಾಂಚ್‌ನ್ನು ಸಹ ಒಂದೊಂದು ಬ್ಯಾಂಕ್ ಎಂದು ಗಣನೆಗೆ ತೆಗೆದುಕೊಂಡಾಗ ನಮ್ಮ ರಾಜ್ಯದಲ್ಲಿ ಇವೊತ್ತು ೧೧೫೨ ಬ್ರಾಂಚ್‌ಗಳು ಇವೆ. ಇದೇ ರೀತಿ ಉಳಿದ ಬ್ಯಾಂಕ್‌ಗಳು ಎಷ್ಟು ಇವೆ ಎಂದರೆ ೩,೩೦೦ ಇದ್ದಾವೆ. ಎಲ್ಲಾ ಬ್ಯಾಂಕ್‌ಗಳು ಎಂದರೆ ಷೇಡ್ಯೂಲ್ಡು ಮತ್ತು ನಾನ್ ಷೇಡ್ಯೂಲ್ಡು ಬ್ಯಾಂಕ್‌ಗಳು ಕೂಡಿ ೩,೩೪೮ ಇದ್ದರೆ ನಮ್ಮ ಸಹಕಾರಿ ಬ್ಯಾಂಕ್‌ಗಳು ೧೧೫೨ ಗಳು ಇವೆ. ಆದರೆ ಒಂದಕ್ಕೊಂದು ತಾಳ ಇಲ್ಲ. ಒಂದು ಬ್ಯಾಂಕ್‌ನವರು ಕೊಡಲಿಲ್ಲ ಎಂದರೆ. ಇನ್ನೊಂದು ಬ್ಯಾಂಕ್‌ನವರು ಕೊಡುತ್ತೇವೆ ಎಂದರೆ ನೀವು ಏಕೆ ಕೊಡುತ್ತೀರಿ ಎಂದು ಇವರು ಕೇಳುತ್ತಾರೆ. ಅವರಿಗೆ ನಾವು ಸಾಲ ಕೊಡಲಿಕ್ಕೆ ಬರುವುದಿಲ್ಲ. ಎಂದು ಹೇಳುತ್ತಾರೆ. ಎರಡನೆಯ ಕಡೆಯಿಂದ ಎಲ್ಲಿಯಾದರೂ ಹೋಗಿ ತಂದರೆ ಅಡ್ಡಿ ಇಲ್ಲ. ಆದರೆ ಅವರು ಕೊಡುವಂತಿಲ್ಲ. ಮಾನ್ಯ ಜಾಲಪ್ಪನವರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಈ ಸಮಸ್ಯೆಯನ್ನು ಬಿಡಿಸಬೇಕಾಗಿದೆ.

೬–೦೦ ಪಿ. ಎಂ.

ಮಾನ್ಯ ಮಂತ್ರಿಗಳಾದ ಜಾಲಪ್ಪನವರ ಅನುಭವದ ಹಿನ್ನೆಲೆಯಲ್ಲಿ ಈ ಸಹಕಾರ ಕ್ಷೇತ್ರವನ್ನು ಬೆಳೆಸಬೇಕು, ನಿಮಗೆ ಒಳ್ಳೆಯ ಪರಿಸ್ಥಿತಿ ಇದೆ. ಒಳ್ಳೆಯ ಅವಕಾಶಗಳು ಕೂಡ ಇವೆ. ನನಗೆ

ಗೊತ್ತಿರುವ ಮಟ್ಟಿಗೆ ನಿಮ್ಮ ಮೇಲಿನವರು ಕೂಡ ಒಳ್ಳೆಯ ಸಹಕಾರಿಗಳೆ. ಈ ಎಲ್ಲಾ ದೋಷಗಳನ್ನು ನಿವಾರಣೆ ಮಾಡುವ ಶಕ್ತಿ ಅವರಲ್ಲಿ ಇದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಬಹಳ ಪ್ರಮುಖವಾದುದು ನಮ್ಮ ಸಹಕಾರಿ ಚಳುವಳಿಯು ಯಾವ ಕಂಬಗಳ ಮೇಲೆ ನಿಂತಿದೆ ಎಂದರೆ ಮಾರ್ಕೆಟಿಂಗ್. ಕನ್ಸೂಮರ್ಸ್ ಸೊಸೈಟಿ ಟೆಕ್ಸ್‌ಟೈಲ್ ಮಿಲ್ಸ್ ವೀವರ್ಸ್ ಕೋ ಆಪರೇಟಿವ್ ಸೊಸೈಟಿ ಕೋ ಆಪರೇಟಿವ್ ಫೆಡರೇಷನ್ಸ್, ಅಪೆಕ್ಸ್ ಬ್ಯಾಂಕ್, ಡಿಸಿಸಿ ಬ್ಯಾಂಕ್ ಇವುಗಳ ಮೇಲೆ ನಿಂತಿದೆ. ಇವುಗಳೆಲ್ಲವುಗಳಿಗೂ ಕೂಡ ಸಮಗ್ರವಾದಂಥ ಯೂನಿಯನ್‌ಗಳು ಇವೆ ಈ ಅಪೆಕ್ಸ್ ಬ್ಯಾಂಕ್‌ಗೆ ಐ. ಎ ಎಸ್. ಅಧಿಕಾರಿಗಳನ್ನು ಹಾಕುವುದು ಬಿಟ್ಟರೆ ಬೇರೆ ಯಾರೂ ಸಹಕಾರಿ ಕ್ಷೇತ್ರದಲ್ಲಿ ಅನುಭವ ಪಡೆದಿರುವವರು ಇಲ್ಲವೆ ? ಈ ಅಪೆಕ್ಸ್ ಬ್ಯಾಂಕಿನಲ್ಲಿ ನಡೆದಂತಹ ಒಂದು ಘಟನೆಯನ್ನು ನಾನು ನನ್ನ ಅನುಭವದ ಹಿನ್ನೆಲೆಯನ್ನು ಇಲ್ಲಿ ವಿವರಿಸಲು ಇಷ್ಟಪಡುತ್ತೇನೆ. ನಾನು ಇಲ್ಲಿ ಮಾನ್ಯ ಅಜ್ಜಿಬಾಳಹೆಗಡೆಯವರ ಮತ್ತು ಮಾನ್ಯ ಮಂತ್ರಿಗಳಾದ ಜಾಲಪ್ಪನವರ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ. ಈ ಅಪೆಕ್ಸ್ ಬ್ಯಾಂಕಿನ ವಾಸ್ತವಿಕ ಪರಿಸ್ಥಿತಿ ತಮಗೆ ಗೊತ್ತಿಲ್ಲ. ಸಹಕಾರಿ ಕ್ಷೇತ್ರದಲ್ಲಿ ವ್ಯವಹಾರಿಕವಾಗಿ ಅನುಭವ ಇಲ್ಲದೆ ಇರುವವರನ್ನು ಅಲ್ಲಿಗೆ ಹಾಕಿದರೆ ಈ ರೀತಿಯಾಗುತ್ತದೆ. ಅದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುವುದಾದರೆ ನಮ್ಮ ಟೆಕ್ಸ್‌ಟೈಲ್ ಮಿಲ್‌ನಲ್ಲಿ ಒಬ್ಬ ಪ್ರಾಮಾಣಿಕ ಮ್ಯಾನೇಜಿಂಗ್ ಡೈರೆಕ್ಟರ್ ಇದ್ದಾರೆ. ನಮ್ಮ ಟೆಕ್ಸ್‌ಟೈಲ್ ಮಿಲ್‌ನ ವಿಚಾರವಾಗಿ ಸುಮಾರು ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳ ಒಂದು ಜಾಮಿ ನನ್ನು ಕೆ ಇ. ಬಿ. ಇಲಾಖೆಗೆ ಕೊಡಬೇಕಾಗಿತ್ತು. ಕೆನರಾ ಬ್ಯಾಂಕಿನವರು ಇತರೆ ಬ್ಯಾಂಕಿನವರು ನಮ್ಮನ್ನು ಕೇಳಿದರು, ಸ್ವಾಮಿ ನೀವು ಅರ್ಜಿ ಕೊಡಿ ಸಾಕು ನಾವು ಜಾಮೀನು ಇರುತ್ತೇವೆಂದು. ನಾನು ಸಹಕಾರಿ ಕ್ಷೇತ್ರದಲ್ಲಿ ಇದ್ದು ನಮ್ಮದೆ ಆದ ಸಹಕಾರಿ ಅಪೆಕ್ಸ್ ಬ್ಯಾಂಕ್ ಇರುವಾಗ ನಾನು ಏತಕ್ಕೆ ಕೆನರಾ ಬ್ಯಾಂಕ್‌ಗೆ ಹೋಗಬೇಕೆಂದು ತಿಳಿದು ಈ ಅಪೆಕ್ಸ್ ಬ್ಯಾಂಕಿಗೆ ಬಂದೆ ನಾನು ಮೊದಲು ನಮ್ಮವರೆ ಆದ ಒಬ್ಬ ಸರ್ಕಾರಿ ನೌಕರರನ್ನು ಕಳುಹಿಸಿದೆ, ಅವರು ಹೋದಾಗ ಕೆಲಸ ನಡೆಯಲಿಲ್ಲ. ಆಮೇಲೆ ನಾನೇ ಹೋದೆ. ನಾನು ಹೋಗಿ ಅವರನ್ನು ಕೇಳಿದಾಗ ಆ ಅಪೆಕ್ಸ್ ಬ್ಯಾಂಕಿನವರು ನನಗೆ ಹೇಳಿದರು ನೀವು ನಮ್ಮಲ್ಲಿ ಒಂದೂವರೆ ಲಕ್ಷ ರೂಪಾಯಿಗಳು ಡಿಪಾಜಿಟ್ ಇಟ್ಟರೆ ನಾವು ಜಾಮೀನು ಕೊಡುತ್ತೇವೆಂದು. ಆಮೇಲೆ ಅದನ್ನು ಒಂದು ಲಕ್ಷ ರೂಪಾಯಿಗಳಿಗೆ ಇಳಿಸಿ ಡಿಪಾಜಿಟ್ ಮಾಡಿ ಕೆ.ಇ.ಬಿ.ಯವರಿಗೆ ಜಾಮೀನು ಕೊಡಿಸಬೇಕಾಯಿತು. ಈ ರೀತಿಯಲ್ಲಿ ಸಹಕಾರಿ ಕ್ಷೇತ್ರಗಳು ನಡೆಯುತ್ತಿದೆ. ಸಹಕಾರಿಗಳ ಮೇಲೆ ಸಹಕಾರಿ ಸಂಸ್ಥೆಗಳೇ ವಿಶ್ವಾಸ ಇರಿಸದಿದ್ದರೆ ಹೇಗೆ ? ಇಂತಹವರನ್ನು ಎಂತಹ ಸಹಕಾರಿಗಳೆಂದು ಕರೆಯಬೇಕು ? ಎರಡು ಕೋಟಿ ರೂಪಾಯಿಗಳು ಬೇಕಾದರೆ 20 ಲಕ್ಷ ರೂಪಾಯಿಗಳು ಗ್ಯಾರಂಟಿಯನ್ನು ಕೊಡುವುದಕ್ಕೆ ಆಗುತ್ತದೆಯೇ? ಇದನ್ನು ತಾವು ತಿಳಿದುಕೊಂಡು ಸಹಕಾರಿ ಕ್ಷೇತ್ರದಲ್ಲಿ ಯಾರು ಅನುಭವಸ್ಥರು ಇರುತ್ತಾರೋ ಅವರನ್ನು ಅಲ್ಲಿಗೆ ಹಾಕಿದರೆ ಒಳ್ಳೆಯದು. ನೀವು ಹಾಕಿದ ಅಧಿಕಾರಿಗಳಿಗೆ ಯಾವುದೇ ರೀತಿಯ ಅನುಭವ ಇರುವುದಿಲ್ಲ. ಅಂತಹವರನ್ನು ನಾವು ಏನೆಂದು ಕರೆಯಬೇಕು. ಅಧಿಕಾರಿಗಳ ಸಹಕಾರಿಗಳೆಂದು ಕರೆಯಬೇಕೆ? ಇವೊತ್ತಿನ ದಿವಸ ನಮ್ಮ ಐ. ಡಿ. ಬಿ. ಮತ್ತು ಕೆ ಎಸ್ ಐ. ಸಿ. ಯವರಿಗೆ ಕೋಟ್ಯಾಂತರ ರೂಪಾಯಿಗಳ ಸಾಲವನ್ನು ಕೊಡುತ್ತೀರಿ ? ಅವುಗಳಿಗೆ ಗ್ಯಾರಂಟಿಯನ್ನು ಕೊಡಬೇಕಾಗುತ್ತದೆ ಆಗ ನಿಮ್ಮ ಅಪೆಕ್ಸ್ ಬ್ಯಾಂಕ್‌ನವರು ಗ್ಯಾರಂಟಿಯನ್ನು ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಅಲ್ಲಿಗೆ ಅನುಭವ ಇರುವವರನ್ನು ಅಧ್ಯಕ್ಷರನ್ನಾಗಿ ಮಾಡಿ ಒಳ್ಳೆಯ ತಜ್ಞರನ್ನು ನೇಮಕ ಮಾಡಿ. ಸಹಕಾರಿಗಳು ಅಪೆಕ್ಸ್ ಬ್ಯಾಂಕಿನಲ್ಲಿ ಭಿಕ್ಷೆಯನ್ನು ಬೇಡುವುದಕ್ಕೆ ಹೋಗುವುದಿಲ್ಲ ಈ ಎಲ್ಲಾ ಸಂಸ್ಥೆಗಳು ಒಂದು ರೀತಿಯಲ್ಲಿ ಮದರ್ ಇನ್‌ಸ್ಟಿಟ್ಯೂಟ್ಸ್ ಇದ್ದಹಾಗೆ. ಈ ಸಂಸ್ಥೆಗಳಿಂದ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಸಹಾಯ ಮಾಡಬೇಕು. ಇಲ್ಲದಿದ್ದರೆ ಈ ಸಂಸ್ಥೆಗಳು ಏತಕ್ಕೆ ಬೇಕು ? ನಾನು ಕೇವಲ ಸಲಹೆಗಳನ್ನು ಮಾತ್ರ ಕೊಡುತ್ತಿದ್ದೇನೆ. ಇದನ್ನು ಮಾನ್ಯ ಮಂತ್ರಿಗಳು ಟೀಕೆ ಎಂದು ತಿಳಿಯಬಾರದು. ಈಗ ಪೋಲೀಸ್ ಕಾನ್‌ಸ್ಟೇಬಲ್‌ನ್ನು ಕರೆದುಕೊಂಡು ಹೋಗಿ ಅವರಿಗೆ ಡಾಕ್ಟರ್ ಉಪಯೋಗಿಸುವ ಸ್ಟೆಥಾಸ್ಕೋಪ್ ಕೊಟ್ಟರೆ ಪೋಲೀಸ್. ಕಾನ್‌ಸ್ಟೇಬಲ್ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಅದೇ ರೀತಿ ಸಹಕಾರಿ ಕ್ಷೇತ್ರಗಳಿಗೆ ಐ ಎ. ಎಸ್ ಅಧಿಕಾರಿಗಳನ್ನು ಹಾಕಿದರೆ ಆಗುತ್ತದೆ ಹಿಂದೆ ಹಳೆಯ ಮೈಸೂರು ಏರಿಯಾದಲ್ಲಿ ಡಿ. ಐ. ಜಿ ಯವರನ್ನು ತೆಗೆದುಕೊಂಡು ಹೋಗಿ ಕಲೆಕ್ಟರ್ ಆಗಿ ನೇಮಿಸುವುದು, ಕಲೆಕ್ಟರನ್ನು ಡಿ.ಐ.ಜಿ. ಆಗಿ ನೇಮಕ ಮಾಡುವುದು, ಎಜುಕೇಷನ್ ಆಫೀಸರ್ಸ್‌ನ್ನು ಇನ್ನಾವುದಕ್ಕೊ ನೇಮಕ ಮಾಡುವುದು ಈ ರೀತಿ ಇತ್ತು. ಆದರೆ ನಮ್ಮಲ್ಲಿ ಆ ರೀತಿ ಇರಲಿಲ್ಲ. ಇನ್ನೊಂದು ವಿಷಯ

ವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುವುದೇನೆಂದರೆ ನಮ್ಮ ರಾಜ್ಯದಲ್ಲಿ ಒಳ್ಳೆಯ ರೀತಿಯಲ್ಲಿ ಸಹಕಾರಿ ಚಳುವಳಿ ನಡೆಯುತ್ತಿದೆ ದೊಡ್ಡ ದೊಡ್ಡ ಸಹಕಾರಿ ಸಂಸ್ಥೆಗಳು ಇವೆ. ನಮ್ಮಲ್ಲಿ ಒಟ್ಟು ೨೮ ಸಹಕಾರಿ ಟೆಕ್ಸ್‌ಟೈಲ್ ಮಿಲ್‌ಗಳು ಇವೆ. ಮತ್ತು ನಮ್ಮಲ್ಲಿ ಸಹಕಾರಿ ಷುಗರ್ ಫ್ಯಾಕ್ಟರಿಗಳು ಇವೆ. ಆ ಸಹಕಾರಿ ಷುಗರ್ ಫ್ಯಾಕ್ಟರಿಗಳಿಗೆ ಸುಮಾರು ೮–೯ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ ಆದರೆ ಯಾವ ಷುಗರ್ ಫ್ಯಾಕ್ಟರಿಯೂ ಕೂಡ ಸರಿಯಾಗಿ ನಡೆಯುತ್ತಿಲ್ಲ. ಅದೇ ರೀತಿಯಲ್ಲಿ ಟೆಕ್ಸ್‌ಟೈಲ್ ಮಿಲ್‌ಗಳು ಇವೆ. ಇವುಗಳಿಗೂ ಕೂಡ ಸರ್ಕಾರದವರು ಹಣವನ್ನು ಖರ್ಚು ಮಾಡುತ್ತಿದ್ದೀರಿ. ಆದರೂ ಕೂಡ ಎಲ್ಲಾ ಮಿಲ್‌ಗಳು ಯಾವಾಗಲೂ ಬಂದ್ ಆಗಿರುತ್ತವೆ. ಇದಕ್ಕೆ ನಿಮ್ಮದು ತಪ್ಪು ಎಂದು ನಾನು ಹೇಳುವುದಿಲ್ಲ. ಇದರಲ್ಲಿ ನಿಮ್ಮದೂ ಕೂಡ ಸ್ವಲ್ಪಮಟ್ಟಿಗೆ ತಪ್ಪು ಇದ್ದರೂ ಇರಬಹುದು. ನೀವು ಅಧಿಕಾರಿಗಳನ್ನು ಒಂದು ರೀತಿಯಲ್ಲಿ ನೋಡಿಕೊಳ್ಳುತ್ತೀರಿ. ಅಧಿಕಾರೇತರರನ್ನು ಒಂದು ರೀತಿಯಲ್ಲಿ ನೋಡಿಕೊಳ್ಳುತ್ತೀರಿ. ರಾಯಚೂರು ಸ್ಪಿನ್ನಿಂಗ್ ಮಿಲ್ ಚಲೋ ರೀತಿಯಲ್ಲಿ ನಡೆಯುತ್ತಿದೆ. ಅಲ್ಲಿ ಸಹಕಾರಿ ಕ್ಷೇತ್ರ ಕೂಡ ಚಲೋ ಇದೆ. ಆದರೆ ತಾವು ಅಲ್ಲಿ ಏನು ಮಾಡಿದ್ದೀರಿ? ಒಬ್ಬ ಜಿಲ್ಲಾಧಿಕಾರಿಯನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದೀರಿ. ಅಲ್ಲಿ ವರ್ಷ ಒಂದಕ್ಕೆ ಎರಡು ಸಾವಿರ ಅಥವಾ ಮೂರು ಸಾವಿರ ರೂಪಾಯಿ ಲಾಭ ತೋರಿಸಿದರೆ ಅದು ಚಲೋ ನಡೆಯುತ್ತದೆಂದು ಅರ್ಥವಲ್ಲ. ತಾವು ಅಲ್ಲಿಗೆ ರೆಪ್ರಜಂಟೇಷನ್ ತೆಗೆದುಕೊಳ್ಳಿ. ಇವೊತ್ತು ನಾವೇ ಆಗಲಿ ಅಥವಾ ನೀವೇ ಆಗಲಿ ಎನ್.ಸಿ.ಡಿ.ಸಿ.ಬಗ್ಗೆ ಕುಳಿತುಕೊಂಡು ಮಾತನಾಡುವಾಗ ತಲೆ ಕೆಳಗೆ ಮಾಡಿ ಮಾತನಾಡುವಂತಹ ಪರಿಸ್ಥಿತಿ ಬಂದಿದೆ. ಇದು ನಮ್ಮಂತಹ ಸಹಕಾರಿಗಳಿಗೆ ಚಲೋ ಕಾಣುವುದಿಲ್ಲ. ಅದೇ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎಲ್ಲಿಯಾದರೂ ಕುಳಿತು ಮಾತನಾಡುವಾಗ ಎನ್.ಸಿ.ಡಿ.ಸಿ. ಬಗ್ಗೆ ಪ್ರಸ್ತಾಪ ಬಂದರೆ ಅವರೂ ಕೂಡ ತಲೆ ಕೆಳಗೆ ಮಾಡಬೇಕಾಗುತ್ತದೆ. ತಾವು ಗುಲ್ಬರ್ಗಾ ಜಿಲ್ಲೆಯ ಸಹಕಾರಿ ಸಂಘವನ್ನು ಸೂಪರ್‌ಸೀಡ್ ಮಾಡಿದಿರಿ. ಅಲ್ಲಿ ಹಿಂದೆ ಯಾರು ಡಿಫಾಲ್ಟರ್ಸ್ ಆಗಿ ಹೆಚ್ಚು ಅವ್ಯವಹಾರವನ್ನು ಮಾಡಿದ್ದರೋ ಅವರ ಮೇಲೆ ಜಾಯಿಂಟ್ ರಿಜಿಸ್ಟ್ರಾರ್ ಪ್ರೊಸೀಡಿಂಗ್ಸ್ ಮಾಡಿದ್ದರೋ ಅವರನ್ನೇ ಮತ್ತೆ ತಾವು ಡಿಸ್ಟ್ರಿಕ್ಟ್ ಬ್ಯಾಂಕ್ ಅಧ್ಯಕ್ಷರನ್ನಾಗಿ ನೇಮಿಸಿದ್ದೀರಿ. ನಿಮಗೆ ಕಾಂಗ್ರೆಸ್ ಪಕ್ಷದವರು ಬೇಡವೆಂದರೆ ತೆಗೆದುಹಾಕಿ ಆದರೆ ಜಗದೀಶ ಪಾಟೀಲ ಎನ್ನುವವರನ್ನು ಹಾಕಿದ್ದೀರಿ. ನಿಮ್ಮ ಪಕ್ಷದಲ್ಲಿ ಚಲೋ ಜನರು ನಿಮಗೆ ಸಿಗಲಿಲ್ಲವೆ ?

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ ಅಲ್ಲಿ ಇರುವುದು ಚುನಾಯಿತ ಮಂಡಲಿ.

ಶ್ರೀ ಕೆ. ಹೆಚ್. ಪಾಟೀಲ್.—ಅಲ್ಲಿ ಚುನಾಯಿತ ಮಂಡಲಿ ಏನು ಇತ್ತು ಆ ಬಗ್ಗೆ ಹೇಳುವುದಾದರೆ ಒಂದು ಪಕ್ಷದಿಂದ ಸುಮಾರು ೧೩ ಜನರು ಗೆದ್ದು ಬಂದರು. ಇನ್ನೊಂದು ಪಕ್ಷದಿಂದ ಇಬ್ಬರು ಮಾತ್ರ ಗೆದ್ದು ಬಂದರು. ಮುಂದೆ ತಾವು ಏನು ಮಾಡಿದಿರಿ, ಆ ಇಬ್ಬರ ಜೊತೆಗೆ ಎಷ್ಟು ಜನರು ಬೇಕಾಗಿತ್ತೋ ಅಷ್ಟು ಜನರನ್ನು ನಾಮಕರಣ ಮಾಡಿದಿರಿ. ಅಲ್ಲಿರತಕ್ಕಂಥ ಅಧಿಕಾರಿಗಳು ಯಾರಿಗೆ ಓಟು ಹಾಕಬೇಕೆಂದು ತಾವು ಹೇಳಿದಿರೋ ಅವರಿಗೆ ಓಟು ಹಾಕಿದರು. ನಾನು ಉದಾಹರಣೆಗೆ ಮಾತ್ರ ಇದನ್ನು ಹೇಳಿದೆ ಅದೇ ರೀತಿಯಾಗಿ ಅನೇಕ ಕಡೆಗಳಲ್ಲಿ ನಡೆದಿದೆ. ನಿಮ್ಮ ಫೆಡರೇಷನ್ ಚುನಾವಣೆಗಳನ್ನು ಮಾಡಿದಿರಿ. ಅದು ಮುಖ್ಯವಾಗಿ ಪಾರ್ಟಿ ಪ್ರಶ್ನೆ ಇರಲಿಲ್ಲ. ಯಾರು ಒಳ್ಳೆಯವರು ಇರುತ್ತಾರೋ ಅವರಿಗೆ ಓಟು ಹಾಕಬೇಕು ಎಂದು ಇತ್ತು. ಈಗ ಅಜಿಬಾಳಿ ಹೆಗಡೆಯವರು ಇದ್ದಾರೆ ಅವರು ಒಳ್ಳೆಯ ವ್ಯಕ್ತಿ. ಅಂತಹವರಿಗೆ ಓಟು ಹಾಕಿ ಎಂದು ಹೇಳಿದರೆ ನಾನು ಯಾವ ಪಾರ್ಟಿ ಎಂದು ಪರಿಗಣಿಸದೆ ಅವರಿಗೆ ಮತ ಹಾಕುತ್ತೇನೆಂದು ಹೇಳುತ್ತೇನೆ. ಆದರೆ ನೀವು ಏನು ಮಾಡಿದಿರಿ, ಎಲ್ಲೆಲ್ಲಿ ಕಾಂಗ್ರೆಸ್‌ನವರು ಇರುತ್ತಾರೋ ಅಲ್ಲೆಲ್ಲಾ ನಾಮಕರಣ ಮಾಡಿದಿರಿ. ಈಗ ಕೆ. ಹೆಚ್ ಪಾಟೀಲ್ ಚಲೋ ಇಲ್ಲವೆಂದು ಆದರೆ ಅವರನ್ನು ತೆಗೆಯಿರಿ, ಬೇಡವೆಂದು ನಾನು ಹೇಳುವುದಿಲ್ಲ ಆದರೆ ಕೆ.ಹೆಚ್. ಪಾಟೀಲ್‌ರನ್ನು ತೆಗೆದು ಅವರ ಜಾಗದಲ್ಲಿ ಕಳ್ಳ ಖದೀಮರನ್ನು ಹಾಕಿದರೆ ಹೇಗೆ ? ಇದನ್ನು ಮಾನ್ಯ ಮಂತ್ರಿಗಳು ಕೂಡ ಒಪ್ಪಿಕೊಳ್ಳುತ್ತಾರೆಂದು ಕಾಣುತ್ತದೆ. ಇವತ್ತು ಷುಗರ್ ಫ್ಯಾಕ್ಟರಿಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲಾ ಷುಗರ್ ಫ್ಯಾಕ್ಟರಿಗಳನ್ನು ಮುಚ್ಚುವಂತಹ ಸ್ಥಿತಿಗೆ ಬಂದಿವೆ. ಅದರಲ್ಲಿ ಒಂದೋ ಎರಡೋ ಫ್ಯಾಕ್ಟರಿಗಳು ಚಲೋ ನಡೆಯುತ್ತಿರಬಹುದು. ಆ ಸಕ್ಕರೆ ಫ್ಯಾಕ್ಟರಿಯನ್ನು ಮಾಡುವಾಗ ನಾವು, ನೀವೂ ಮಾನ್ಯ ಕೆ. ಎಫ್ ಪಾಟೀಲರು ವಿಶೇಷವಾದ ಶ್ರಮ ವಹಿಸಿದ್ದೆವು. ಆದರೆ ಆ ಸಕ್ಕರೆ ಫ್ಯಾಕ್ಟರಿ ರಿಜಿಸ್ಟರ್ ಆಗುವುದರೊಳಗೇ ನಮ್ಮನ್ನು ಹೊರಗಡೆ ದೂಡಿದರು, ನಮ್ಮನ್ನು ನಿಮ್ಮನ್ನು ಇಬ್ಬರನ್ನೂ ಬಿಟ್ಟರು, ಮಾನ್ಯ ಕೆ. ಎಚ್. ಪಾಟೀಲರನ್ನು

ಮಾತನಾಡಿಸಲೇ ಇಲ್ಲ. ಅದಾದ ನಂತರ ಯಾರು ಯಾರೋ ಆದರು, ಅದು ಹೇಗೋ ನಡೆಯಿತು ಅದು ಮುಗಿದ ಮೇಲೆ ಕೆಲಸ ಎಷ್ಟು ನಡೆದಿದೆ ಹಣ ಎಷ್ಟು ಖರ್ಚಾಗಿದೆ ಒಂದೂ ಗೊತ್ತಿಲ್ಲ. ಅದಕ್ಕೆ ಡಿ.ಸಿ. ನೇ ಚೇರ್ಮನ್, ಕನ್ವೀನರ್. ಅವರ ಮೇಲೆ ಏನು ಆಕ್ಷನ್ ತೆಗೆದುಕೊಂಡರು, ಅವರೇನೂ ನಿಮಗೆ ಸೋದರಳಿಯನೇ ? ನಮ್ಮ ಮೇಲೆ ಆಕ್ಷನ್ ತೆಗೆದುಕೊಂಡರು ಆದರೆ ಅವರ ಮೇಲೆ ಆಕ್ಷನ್ ಏತಕ್ಕೆ ತೆಗೆದುಕೊಳ್ಳುವುದಿಲ್ಲ ? ಹಿಂದೆ ಸಹಕಾರಿ ಸಚಿವರಾಗಿದ್ದಂಥವರು, ಅವರು ನಮ್ಮ ಸ್ನೇಹಿತರು. ಆದರೂ ಸಹ ಅವರು ಒಂದು ಟೆಕ್ಸ್‌ಟೈಲ್ ಮಿಲ್ ಸಂಸ್ಥೆಗೆ ಡಿ.ಸಿ. ಯನ್ನು ಕನ್‌ವೀನರ್ ಆಗಿ ಮಾಡಿದರು. ನಾನು ಅವರಿಗೂ ಈ ಮಾತನ್ನು ಹೇಳಿದೆ ಆಫೀಸರ್‌ನ್ನು ಕನ್ವೀನರ್ ಮಾಡಬೇಡಿ ಅದು ಆಗುವ ಹಾಗೆ ಇದ್ದರೆ ಜನರ ಸಹಕಾರದಿಂದ ಆಗಲಿ, ಜನರ ಸಹಕಾರದಿಂದ ಆಗುವ ಹಾಗಿದ್ದರೆ ಅದನ್ನು ಸಹಕಾರಿ ಎಂದು ಕರೆಯಿರಿ ಎಂದು ಹೇಳಿದೆ, ಮಾನ್ಯ ಹೆಗಡೆಯವರಿಗೆ ಭಿನ್ನಹ ಮಾಡಿಕೊಂಡು ಜನಗಳ ಸಹಕಾರದಿಂದ ಆಗದೇ ಇದ್ದರೆ, ಅದನ್ನು ಗೌರ್ನಮೆಂಟ್ ಅಂಡರ್ ಟೇಕಿಂಗ್ ಮಾಡಿ ಎಂದು ಕೇಳಿಕೊಳ್ಳಿ ಎಂದು ಹೇಳಿದೆ. ಆಗ ಇದು ಸರ್ಕಾರಿ ಗಿರಣಿ ಆಗುತ್ತದೆಯೇ ಹೊರತು, ಸಹಕಾರಿ ಗಿರಣಿ ಆಗುವುದಿಲ್ಲ ಎಂಬ ಮಾತನ್ನು ಹೇಳುತ್ತಿದ್ದೇನೆ. ಆವೊತ್ತೂ ಹೇಳಿದೆ, ಇವೊತ್ತೂ ಹೇಳುತ್ತಿದ್ದೇನೆ. ನಾನು ವಿರೋಧ ಪಕ್ಷದಲ್ಲಿ ಕುಳಿತಿದ್ದೀನಿ ಎಂದು ಈ ರೀತಿ ಹೇಳುತ್ತಿದ್ದೀನಿ ಎಂದು ತಿಳಿಯಬೇಡಿ. ಈ ದೃಷ್ಟಿಯಿಂದ ಎಲ್ಲೆಲ್ಲಿ ಅಧ್ಯಕ್ಷರನ್ನಾಗಿ, ಮ್ಯಾನೇಜಿಂಗ್ ಡೈರೆಕ್ಟರನ್ನಾಗಿ ಅಧಿಕಾರಿಗಳನ್ನು ಹಾಕಿದ್ದೀರಿ. ಆ ಅಧಿಕಾರಿಗಳು ವೈಟ್ ಎಲಿಫೆಂಟ್ಸ್ ಆಗಿದ್ದಾರೆ.

ಮಾನ್ಯ ಅಧ್ಯಕ್ಷರೇ, ಧಾರವಾಡ ಡಿಸ್ಟ್ರಿಕ್ಟ್ ಆಯಿಲ್ ಸೀಡ್ಸ್ ಪ್ರೊಸೆಸಿಂಗ್ ಸೊಸೈಟಿ ಎಂದು ಗದಗ್‌ನಲ್ಲಿರತಕ್ಕ ಒಂದು ಸಂಸ್ಥೆಯನ್ನು ಮಾಡುವಾಗ ಅಂದು ನಾನು ಅಧಿಕಾರಕ್ಕೆ ಬರುವ ಪೂರ್ವದಲ್ಲಿ ಮಾನ್ಯ ಹೆಗಡೆಯವರ ಮನಸ್ಸಿನ ವಿರುದ್ಧವಾಗಿ, ಅಂದು ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರ ಒತ್ತಾಯಕ್ಕೆ ಮಣಿದು, ಒಂದು ಆರ್ಡರ್ ಮಾಡಿ ಬೇರೆಯವರಿಗೆ ಕೊಟ್ಟರು ಅದಕ್ಕೆ ಒಬ್ಬ ಆಫೀಸರ್ ಬಂದರು. ಅವರು ೪೫ ಟನ್ ಎಣ್ಣೆ ಎವಾಪರೇಟ್ ಆಗಿದೆ ಎಂದು ರಿಪೋರ್ಟ್ ಮಾಡಿದರು. ಅವೊತ್ತಿನ ಸರ್ಕಾರದವರು ಅದನ್ನು ಒಪ್ಪಿದರು. ನಾನು ನಿಮ್ಮ ಸರ್ಕಾರದ ಮೇಲೆ ಹೇಳುತ್ತಿಲ್ಲ. ಈ ರೀತಿ ಅಧಿಕಾರಸ್ಥರು ಮಾಡಿದ ತಪ್ಪುಗಳನ್ನು, ಯಾವ ರೀತಿಯಾಗಿಯೂ ಲೆಕ್ಕಕ್ಕೆ ತೆಗೆದುಕೊಳ್ಳದೆ, ಅವುಗಳನ್ನು ಕ್ಷಮಾ ಮಾಡಿಬಿಡತಕ್ಕಂಥ ಧೋರಣೆ ಸಹಕಾರಿ ಚಳುವಳಿಗೆ ಮಾರಕಪ್ರಾಯವಾಗಿದೆ ಎಂದು ಹೇಳುವುದಕ್ಕೆ ಇಚ್ಚೆಪಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಇಲಿ ಕಬ್ಬಿಣ ತಿಂದಿರುವ ಸೊಸೈಟಿಗಳೂ ಇವೆ.

ಶ್ರೀ ಕೆ. ಹೆಚ್. ಪಾಟೀಲ್,—ಸಂಕೇಶ್ವರ ಸಕ್ಕರೆ ಫ್ಯಾಕ್ಟರಿ ಬಹಳ ಚಲೋ ಇದೆ. ಮಾನ್ಯ ಅಪ್ಪನಗೌಡರು ಒಳ್ಳೆಯ ತಪಸ್ವಿ ಸಹಕಾರಿಗಳು. ಬಹಳ ಉತ್ತಮ ರೀತಿಯಲ್ಲಿ ಆ ಸಕ್ಕರೆ ಕಾರ್ಖಾನೆಯನ್ನು ಕಟ್ಟಿದರು. ಅತ್ಯಲ್ಪ ಹಣದೊಳಗೆ ಅದನ್ನು ಕಟ್ಟುವ ಕೆಲಸ ಮುಗಿಯಿತು. ಆದುದರಿಂದ ಇವೊತ್ತು ಅದು ಲಾಭದೊಳಗೆ ಇದೆ. ಇವೊತ್ತಿನ ದಿವಸ ಅದು ಲಾಭದೊಳಗಿದೆ ಎಂದು ಬೇಕಾದದ್ದು ಮಾಡಿದರೂ ನಡೆಯುತ್ತದೆಯೇ ? ಅಲ್ಲಿರತಕ್ಕಂಥ ನೌಕರರನ್ನು ಯಾವ ರೀತಿಯಾಗಿಯೂ ನೋಟೀಸ್ ಕೊಡದೇ, ಕಾರ್ಯಕರ್ತರನ್ನು ದೂರ ಮಾಡಿದರು. ಅವರು ಎಲ್ಲಿಗೆ ಹೋಗಬೇಕು ? ಅವರು ಸಹಕಾರಿ ಚಳುವಳಿಗೆ ಮಾರಕಪ್ರಾಯರಾಗಿ ತಿರುಗಬೇಕೇ, ಇಲ್ಲ ಒಳ್ಳೆಯ ಸಹಕಾರಿಗಳಾಗಿ, ಸಹಕಾರಿ ಧೋರಣೆಯಿಂದ ತಮ್ಮ ಕಡೆಗೆ ಬರಬೇಕೆ ಎಂದು ಕೇಳುತ್ತೇನೆ. ಏನಾದರೂ ಆದರೆ ಕರೆದು ಕಿವಿ ಒಳಗೆ ಬುದ್ಧಿ ಹೇಳಿ ನಿಮ್ಮನ್ನು ಡಿಫೆಂಡ್ ಮಾಡುತ್ತೇವೆ ಈ ರೀತಿ ಮಾಡಬೇಡಿ ಎಂದು ಹೇಳಿ. ಡಿಫೆಂಡ್ ಮಾಡುವಂತಹ ಸಹಕಾರಿಗಳನ್ನು ನೀವು ಈ ರೀತಿ ಹೀಗೆ ಮಾಡುವುದು ಸರಿಯಲ್ಲ ಅವರ ನೌಕರಿಯನ್ನು ತೆಗೆಯುವುದರಿಂದ ಏನಾಗುವುದಿಲ್ಲ, ಅವರಿಗೆ ಬುದ್ಧಿವಾದ ಹೇಳಿ ಅವರನ್ನು ಪುನರಪಿ ಸಹಕಾರ ಚಳುವಳಿಯಲ್ಲಿ ಅಳವಡಿಸುವುದಕ್ಕೆ ಪ್ರಯತ್ನ ಮಾಡಿ ಎಂದು ನಾನು ಸಲಹೆ ಮಾಡುವುದಕ್ಕೆ ಇಚ್ಚೆಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಈ ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕುಗಳ ಬಗ್ಗೆ ನಾವು ಎಷ್ಟೆಷ್ಟು ಕಡಿಮೆ ಮಾತನಾಡಿದರೂ ಅಷ್ಟು ಸರಿ ಎಂದು ನನಗನ್ನಿಸುತ್ತದೆ. ಇದರ ವಿಷಯ ನಮಗೂ ನಿಮಗೂ ಪೂರ್ಣ ಗೊತ್ತಿರುವಾಗ ಇದರ ಬಗ್ಗೆ ಹೆಚ್ಚಾಗಿ ಹೇಳಬೇಕಾಗಿಲ್ಲ. ಇವರು ಅನೇಕ ಬ್ರಾಂಚ್‌ಗಳನ್ನು ತೆಗೆಯುತ್ತಾರೆ ಎಲ್ಲೆಲ್ಲಿ ತೆಗೆಯುತ್ತಾರೆ, ಏನು ಸ್ಥಳ, ಏತಕ್ಕೆ ತೆಗೆಯುತ್ತಾರೆ, ಎಲ್ಲಿ ನೋಡಿದರೂ ಬ್ರಾಂಚ್

ಆಫೀಸ್, ಪೇ ಆಫೀಸ್, ಇದನ್ನು ಏತಕ್ಕೆ ತೆಗೆಯುತ್ತಾರೆ ? ಡೈರೆಕ್ಟರು, ಚೇರ್ಮೆನ್ ಅಡ್ಡಾಡಿ ಅಡ್ಡಾಡಿ ಚೈನಿ ಮಾಡಲಿಕ್ಕೆ ಇದನ್ನು ತೆಗೆಯುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಒಂದು ಇದೆ, ಇರಲಿ, ಅಲ್ಲಿ ಎಲ್ಲಾ ಸೊಸೈಟಿಗಳನ್ನು ಒಂದುಗೂಡಿಸಿ ತೆಗೆದುಕೊಳ್ಳುವುದಕ್ಕೆ ಅಡ್ಡಿಯಿಲ್ಲ. ಆದರೆ ಯಾರದ್ದೋ ಕಮಿಷನ್ ಬರುತ್ತದೆ ಎಂದು, ಯಾರದ್ದೋ ದುಡ್ಡು, ಎಲ್ಲಮ್ಮನ ಜಾತ್ರೆ ಎಂದು ಮಾಡಿ, ಸಹಕಾರ ಚಳುವಳಿಗೆ ನೆರಳನ್ನು ಕೊಡತಕ್ಕಂಥ ಸಹಕಾರ ಬ್ಯಾಂಕುಗಳು ಬಿಸಿಲನ್ನು ತಂದುಕೊಟ್ಟರೆ ಸಹಕಾರಿಗಳ ಸ್ಥಿತಿ ಏನಾಗುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ನಿಮ್ಮ ಮುಖಾಂತರ ಮಾನ್ಯ ಸಹಕಾರ ಸಚಿವರನ್ನು ಕೇಳುತ್ತೇನೆ, ಈ ಸೆಂಟ್ರಲ್ ಬ್ಯಾಂಕ್‌ಗಳಲ್ಲಿ ತಾರತಮ್ಯ ಧೋರಣೆ ಏಕೆ ? ಈ ಅಪೆಕ್ಸ್ ಬ್ಯಾಂಕ್ ತಾರತಮ್ಯ ಧೋರಣೆಯಲ್ಲಿ ಬೆಳೆದರೆ ಆಗುವುದಿಲ್ಲ. ಒಂದು ಬ್ಯಾಂಕ್‌ನಲ್ಲಿ ಗೌರ್ನಮೆಂಟ್ ಅಡ್ಮಿನಿಸ್ಟ್ರೇಟರನ್ನು ನೇಮಿಸುತ್ತೀರಿ, ಇನ್ನೊಂದು ಬ್ಯಾಂಕ್‌ನಲ್ಲಿ ಇಲ್ಲ ಇನ್ನೊಂದು ಬ್ಯಾಂಕ್‌ನವರು ಏನು ಮಾಡಿದರೂ ಮಾಫ್. ಇದು ಏತಕ್ಕೆ ? ಏನಾದರೂ ಮಾಡಿದರೆ ಎಲ್ಲಾ ಕಡೆಗೂ ಮಾಡಿ, ಇಲ್ಲದಿದ್ದರೆ ಬಿಟ್ಟು ಬಿಡಿ ನಾಮಿನೇಷನ್ ಮಾಡುವಾಗ ಸಹ ಒಂದು ಕಡೆಗೆ ಅಧಿಕಾರಿಗಳನ್ನು ನಾಮಿನೇಟ್ ಮಾಡುತ್ತೀರಿ ಮತ್ತೊಂದು ಕಡೆಗೆ ಬೈಲಾ ಮೀರಿ, ಹೆಚ್ಚು ಹೆಚ್ಚು ಜನರನ್ನು ನಾಮಿನೇಟ್ ಮಾಡುತ್ತೀರಿ. ಈ ರೀತಿ ಮಾಡಿದರೆ ನೀವು ಕೋರ್ಟಿಗೆ ಹೋಗಬಹುದು ಎಂದು ಹೇಳಬಹುದು, ಅನೇಕ ಸಲ ನಾನು ತಮ್ಮನ್ನು ಇದರ ಬಗ್ಗೆ ಕೇಳಿದಾಗ ಕೋರ್ಟಿಗೆ ಹೋಗಬೇಡಿ ಎಂದು ಹೇಳಿದಿರಿ. ಯಾವುದೋ ದೃಷ್ಟಿಯಿಂದ ಸಂಸ್ಥೆಗೆ ಹಿತ ಆಗಬೇಕೆಂದು ಮಾಡಿದರೆ ಪರವಾಗಿಲ್ಲ. ಆದರೆ ಕೆಲವು ವ್ಯಕ್ತಿಗಳನ್ನು ತಪ್ಪಿ ಹಾಕಿರಬಹುದು. ಇಂದಲ್ಲ ನಾಳೆ ಮಾನ್ಯ ಜಾಲಪ್ಪನವರು ತಿದ್ದಿಕೊಳ್ಳುತ್ತಾರೆ ಎಂದು ಇದನ್ನು ಹೇಳುತ್ತೇನೆ. ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರನ್ನಾಗಿ ಮಾಡಿ, ಡೈರೆಕ್ಟರ್ ಇಲ್ಲದವರನ್ನು ಚೇರ್ಮೆನ್ ಆಗಿ ಕೂಡಿಸಿ. ಇದು ಇವತ್ತು ಸರಿ ಆಗಬಹುದು, ಆದರೆ ನಾಳೆ, ಇಂಟರ್‌ನ್ಯಾಷನಲ್ ಮಾರ್ಕೆಟ್ ಒಳಗೆ, ಇಂಟರ್‌ನ್ಯಾಷನಲ್ ಕೋ-ಆಪರೇಟೀವ್ ಕಾಮನ್ ವೆಲ್ತ್‌ಗೆ ನೀವು ಹೋಗಿ ಭಾಷಣ ಮಾಡುವಾಗ, ನನ್ನಂಥವನು ಮಿಸ್‌ಚೀಫ್ ಮಾಡಲಿಕ್ಕೆ ನಿಮ್ಮ ರಾಜ್ಯದ ಸಹಕಾರ ಚಳುವಳಿಯಲ್ಲಿ ಹೀಗೆ ಆಗಿದೆ ಎಂದು ಹೇಳಿದರೆ, ಅದಕ್ಕೆ ತಾವು ಏನು ಉತ್ತರ ಕೊಡುತ್ತೀರಿ ? ಮಾನ್ಯ ಹೆಗಡೆಯವರು ಏನು ಉತ್ತರ ಕೊಡುತ್ತಾರೆ ? ಡೆಮಾಕ್ರಸಿ ಪರಿಪಾಲನೆ ಮಾಡುವವರು, ಡೆಮಾಕ್ರಸಿ ಕಿಲ್ಲರ್ ಆದರೆ ಅದು ನಿಜವಾಗಿಯೂ ಸಾಧುತ್ವವೇ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ಕೋ-ಆಪರೇಟೀವ್ ಯೂನಿಯನ್ ಆಕ್ಟನ್ನು ದುರಸ್ತಿ ಮಾಡುವ ವಿಷಯದಲ್ಲಿ ಅನೇಕ ಕಮಿಟಿಗಳನ್ನು ಮಾಡಿದ್ದೀರಿ. ಒಂದೆರಡು ಕಮಿಟಿ ಮಾಡಿದ್ದೀರಿ. ನಾನು ಮಾನ್ಯ ಹೆಗಡೆಯವರು ಕೂಡಿ ಒಂದೆರಡು ಕಮಿಟಿಗೆ ಹೋಗಿದ್ದೆವು. ಇವತ್ತಿನತನಕ ಸಹ ನಿಮ್ಮ ಕಾನೂನು ಪೂರ್ತಿ ಆಗಿಲ್ಲ, ಎಂಟೆಂಟು ದಿನಕ್ಕೆ ಒಂದೊಂದು ಸೆಕ್ಷನ್ ಬರುತ್ತಿದೆ. ಮಾನ್ಯ ಜಾಲಪ್ಪನವರು ಇರುವಾಗ ಅದು ಪೂರ್ಣ ಕಾನೂನು ಆದರೆ ಒಳ್ಳೆಯದು. ಆದರೆ ಅದಕ್ಕೆ ಕೆ. ಹೆಚ್. ಪಾಟೀಲರ ಕಾನೂನು ಎಂದು ಹೆಸರು ಬರುತ್ತದೆ ಎಂದರೆ ಅದನ್ನು ಬಿಟ್ಟು ಬಿಡಿ. ಅದನ್ನು ಬಿಸಾಕಿ. ಬೇಕಾದರೆ ಮಾನ್ಯ ಕೆಂಪೇಗೌಡರ ಅಧ್ಯಕ್ಷತೆಯಲ್ಲಿ, ಮಾನ್ಯ ಅಜಿಬಾಳ ಹೆಗಡೆಯವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿ ಅದರಲ್ಲಿ ದೋಷಗಳೇನಾದರೂ ಇದ್ದರೆ ತಿದ್ದಿ, ಅದು ಕೆ. ಹೆಚ್. ಪಾಟೀಲರ ಕಾನೂನಲ್ಲ, ಅದು ಜನತಾ ಪಕ್ಷದ ಕಾನೂನು ಎಂದು ತೆಗೆದುಕೊಂಡು ಬನ್ನಿ. ''ಹಸಿರು ಸೀರೆ ಕೊಡುವುದಕ್ಕೆ ಹೋಗುವವರು, ಸಹಕಾರ ಚಳುವಳಿಗೆ ಒಂದು ಕಾನೂನು ಕೊಡುವುದಿಲ್ಲ'' ಎಂದರೆ ಅದು ಅಸಮಂಜಸ ಧೋರಣೆ ಆಗುತ್ತದೆ. ಈ ಕಾನೂನನ್ನು ತೀವ್ರವಾಗಿ ಕೊಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಕಳಕಳಿಯಿಂದ ಭಿನ್ನಹ ಮಾಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಈಗ ನೂಲಿನ ಗಿರಣಿಯ ಬಗ್ಗೆ ನಾನು ಹೇಳುತ್ತೇನೆ. ಸಹಕಾರ ರಂಗದಲ್ಲಿ, ಕರ್ನಾಟಕ ರಾಜ್ಯದಲ್ಲಿ ನೂಲಿನ ಗಿರಣಿಗಳಿಗೆ ಪ್ರೋತ್ಸಾಹದ ಹಣದ ಅಭಾವ ಇತ್ತು ನಾನೇನೋ ನೂಲಿನ ಗಿರಣಿಗಳಿಗೆ ಷೇರಿನ ಹಣವನ್ನು ಕೊಟ್ಟಾಗ, ನನ್ನನ್ನು ಅಂದು ಗ್ರೋವರ್ ಕಮಿಷನ್ ಮುಂದೆ ನಿಲ್ಲಿಸಿದರು. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನಾನು ಹೇಳುವುದಿಲ್ಲ, ನನ್ನ ಬಗ್ಗೆ ಸಹಾನುಭೂತಿ ಆಗಲೂ ಅವರಿಗೆ ಇತ್ತು ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಒಮ್ಮೊಮ್ಮೆ ಸಾರ್ವಜನಿಕ ಜೀವನದಲ್ಲಿರುವಾಗ ಉತ್ತಮವಾದ ಕೆಲಸ ಮಾಡುವುದಕ್ಕೆ ಹೋದರೂ ಪ್ರಾಯಶ್ಚಿತ್ತ ಅನುಭವಿಸಬೇಕಾಗುತ್ತದೆ. ಆದರೆ ಅಂದು ನಾನು ಮಾಡಿದಂಥ ಕೃತ್ಯ, ಅದು ಕೊನೆಯ

ವರೆಗೂ ಪ್ರೈಮ್ ಮಿನಿಸ್ಟರ್‌ವರೆಗೂ ಹೋಗಿ, ನಾನು ಮಾಡಿದ್ದು ಯೋಗ್ಯ ಎಂದು, ಆಗ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಹೇಳಿದಾಗ, ಅವೊತ್ತು ನ್ಯಾಷನಲ್ ಕೋ-ಆಪರೇಟೀವ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್‌ನ ಅಂದಿನ ಉಪಾಧ್ಯಕ್ಷರಾಗಿದ್ದ ಶ್ರೀಮಾನ್ ಎ. ಪಿ. ಶಿಂಧೆಯವರನ್ನು ಕರೆಯಿಸಿ ಹಣ ಹೆಚ್ಚಾಗಿ ಕೊಡುವುದಕ್ಕೆ ಹೇಳಿದರು. ನಾವು ೧೫ ಲಕ್ಷ ಕೊಟ್ಟರೆ, ಅವರು ೮೦ ಲಕ್ಷ ರೂಪಾಯಿಗಳನ್ನು ಕೊಟ್ಟರು. ಮಿಲ್ ಆಯಿತು. ಮಿಲ್ ಇದೆ. ಇದೇ ಪ್ರಕಾರ ಮತ್ತೊಂದು ಮಿಲ್ ಮಾಡುವುದಕ್ಕೆ ಮುಂದೆ ಬಂದರು, ಷೇರು ಕಲೆಕ್ಷನ್ ಮಾಡುವುದು ತೊಂದರೆ ಆಗಲಿಲ್ಲ. ಇವೊತ್ತು ಮಾನ್ಯ ಮುಖ್ಯಮಂತ್ರಿವರ್ಯರು ಗಮನಿಸುವುದಾದರೆ, ನಮ್ಮದು ಒಂದೇ ಒಂದು ಹಳ್ಳಿಯಲ್ಲಿ ಅದರಿಂದ ಸರ್ಕಾರಕ್ಕೆ ಇವತ್ತು ೪-೫ ಲಕ್ಷ ರೂಪಾಯಿಗಳ ಟ್ಯಾಕ್ಸ್ ಪ್ರತಿ ದಿವಸ ಸಿಗುತ್ತಿದೆ, ಅದು ಎಕ್ಸೈಸ್ ಆಗಲಿ, ಸೇಲ್ಸ್ ಟ್ಯಾಕ್ಸ್ ಆಗಲಿ, ಎಲೆಕ್ಟ್ರಿಸಿಟಿ ಆಗಲಿ ಸಿಗುತ್ತಿದೆ, ಅದು ಯಾವುದರ ಪ್ರಭಾವ ? ಸರ್ಕಾರದವರು ಕೊಟ್ಟ ಸಹಾಯದ ಫಲವಾಗಿ ಇವತ್ತು ಜನ ಮುಂದೆ ಬಂದಿದ್ದಾರೆ. ಇವತ್ತು ಆ ಸಣ್ಣ ಹಳ್ಳಿಯಲ್ಲಿ ಎರಡೂವರೆ ಸಾವಿರ ಜನಸಂಖ್ಯೆ ಇರುವ ಹಳ್ಳಿಯಲ್ಲಿ ೩ ಸಾವಿರ ಜನ ನೌಕರರು ದುಡಿಯುತ್ತಿದ್ದಾರೆ ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಯಾವ ಮನುಷ್ಯನಾದರೂ ಇಂತಹ ಕೆಲಸಗಳನ್ನು ಮಾಡಬಹುದು. ನಾನು ಅಧಿಕಾರದಲ್ಲಿದ್ದಾಗ ಮಾಡಿದ್ದುದು ಇದೊಂದೇ. ಉಳಿದೆಲ್ಲಾ ಕೆಲಸಗಳನ್ನು ಅಧಿಕಾರ ಇಲ್ಲದಾಗ, ನನ್ನನ್ನು ಯಾರೂ ಕೇಳದಿದ್ದಾಗ ಮಾಡಿದಂಥ ಕೆಲಸಗಳು. ಉಳಿದವರೆಲ್ಲಾ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಾಡುವಂತಹ ಯೋಗ್ಯತೆಯನ್ನು ಮಾನ್ಯ ಸಹಕಾರ ಸಚಿವರು ತಂದು ಕೊಡುವುದಾದರೆ ನಿಜವಾಗಿಯೂ ಕರ್ನಾಟಕದ ಆರ್ಥಿಕ ಭವಿಷ್ಯಕ್ಕೆ ಒಳ್ಳೆಯದಾಗುತ್ತದೆ. ಈ ರೀತಿ ಮಾಡುವುದಕ್ಕೆ ಅವರು ಮುಂದುವರೆಯಬೇಕೆಂದು ನಾನು ಆಶಾ ಮಾಡುತ್ತೇನೆ.

ಈಗ ಎರಡು ನೂತನ ನೂಲಿನ ಗಿರಣಿಗಳನ್ನು ಮಂಜೂರ್ಮಾಡಿದ್ದಾರೆ. ಒಂದು ತುಂಗಭದ್ರಾ ಸಹಕಾರಿ ನೂಲಿನ ಗಿರಣಿ, ರಾಣಿಬೆನ್ನೂರು, ಮತ್ತೊಂದು ಸಂಕೇಶ್ವರ ಸಹಕಾರಿ ನೂಲಿನ ಗಿರಣಿ, ಲಕ್ಷ್ಮೇಶ್ವರ. ಈ ಎರಡು ಗಿರಣಿಗಳಿಗೆ ಹಣ ಪೂರ್ತಿಯಾಯಿತು. ನೀವು ಯಾರಿಗಾದರೂ ಕೊಡಿ, ಆದರೆ ಕೊಡುವಾಗ ಕಾರ್ಯ ಬಾಹುಳ್ಯವನ್ನು ನೋಡಿ ಕೊಡಿ. ಇವೊತ್ತು ಏನು ಕಾರ್ಯಕ್ರಮ ಆಗಿದೆ ಎಂದರೆ, ಸಂಕೇಶ್ವರದಲ್ಲಿ ಷೇರು ವಸೂಲ್ಮಾಡುವುದು ೨೧ ಲಕ್ಷ. ಇದಕ್ಕೆ ೫ ಲಕ್ಷ ರೂಪಾಯಿಗಳನ್ನು ಕರ್ನಾಟಕ ಸೆಂಟ್ರಲ್ ಬ್ಯಾಂಕ್‌ನವರು ಕೊಟ್ಟರು. ಅವರು ಮಾಡಿದ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಕೊಟ್ಟರು. ನ್ಯಾಷನಲ್ ಕೋ-ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು, ಐ.ಎಫ್.ಸಿ.ನವರು ರೈತಾಪಿ ಜನರಿಗೆ ಕನಿಷ್ಠ ೫ ಪರ್ಸೆಂಟ್ ರಿಯಾಯಿತಿ ಕೊಡಬೇಕೆಂದು ಹೇಳುತ್ತೀರಿ. ಮಾನ್ಯ ಹೆಗಡೆಯವರು ವಿಶೇಷಪ್ರಯತ್ನ ಮಾಡಿದ್ದಾರೆ. ಅವರು ಪತ್ರ ಬರೆದಿದ್ದನ್ನು ನೋಡಿ, ನಾನು ಅವರಿಗೆ ಹೃದಯಪೂರ್ವಕ ಅಭಿನಂದನೆ ಸಲಿಸುತ್ತೇನೆ. ಅವರಿಂದ ೫ ಪರ್ಸೆಂಟ್ ಹಣ ಕೊಡಿಸಲೂ ಇಲ್ಲ. ಇನ್ನೊಂದು ಹನುಮನಹಟ್ಟಿಯಲ್ಲಿ ರೈತರ ಸಹಕಾರ ನೂಲಿನ ಗಿರಣಿ ಇದೆ. ಆ ಗಿರಣಿಯಲ್ಲಿ ೧೦೦ಕ್ಕೆ ೧೮ರಷ್ಟು ಹರಿಜನ ಸದಸ್ಯರಿದ್ದಾರೆ. ಮೇಲಿನ ಎರಡು ಮಿಲ್ಲುಗಳಲ್ಲಿ ನೂರಕ್ಕೆ ಒಂದು ಪರ್ಸೆಂಟೂ ಇಲ್ಲ. ಹರಿಜನರ ಅಭಿವೃದ್ಧಿಗೆ ಅತ್ಯಂತ ಉತ್ಸಾಹ ತಾಳಿದ ಸರ್ಕಾರ, ಈ ಮಿಲ್ಲುಗಳಿಗೆ ಹಣ ಕೊಟ್ಟು ಉಳಿದ ಮಿಲ್ಲುಗಳಿಗೆ ಹಣ ಕೊಡುವುದಿಲ್ಲ ಎಂದರೆ ಹೇಗೆ ? ಇದಕ್ಕೆ ಏನು ಕಾರಣ ? ಮೊನ್ನೆ ಕೂಡ ಹೆಗಡೆಯವರು ಪತ್ರ ಬರೆದಿದ್ದಾರೆ. ಒತ್ತಾಯ ಮಾಡಿದ್ದಾರೆ. ಪ್ರಧಾನ ಮಂತ್ರಿಯವರಿಗೂ ಬರೆದಿದ್ದಾರೆ. ಎನ್.ಸಿ.ಡಿ.ಸಿ ಅವರಿಗೂ ಕೊಡಿ ಎಂದು ಎಲ್ಲಾ ಪಾರ್ಲಿಮೆಂಟರಿ ಸದಸ್ಯರಿಗೂ ಒತ್ತಾಯ ಮಾಡಿದ್ದಾರೆ. ಮಾನ್ಯ ಹೆಗಡೆಯವರು ರೂಲ್ಸ್ ಮಾಡಿದ ಮೇಲೆ, ನಾವು ಕೊಡಬೇಕೇ ಎಂದು ಹೇಳುತ್ತಿದ್ದಾರೆ. ಇದು ಒಂದು ತರಹ ಆಗಿದೆ. ''ಮದುವೆ ಆಗದೆ ಹುಚ್ಚು ಬಿಡುವುದಿಲ್ಲ, ಹುಚ್ಚು ಬಿಡದೆ ಮದುವೆಯಾಗುವುದಿಲ್ಲ'' ಎಂಬಂತಾಗಿದೆ. ಆದುದರಿಂದ ಇನ್ನು ಮುಂದಾದರೂ ಮಾನ್ಯ ಮುಖ್ಯಮಂತ್ರಿಗಳು ಯಾರಿಂದ ಕೆಲಸ ನಡೆದಿದೆ ಎನ್ನತಕ್ಕ ಅಭಿಪ್ರಾಯವನ್ನು ಪಡೆದು, ಅಂತಹವರಿಗೆ ಸಹಾಯ ಮಾಡಲಿ ಎಂದು ನಾನು ಹಾರೈಸುತ್ತೇನೆ. ಅದೇರೀತಿ ಸವದತ್ತಿ ಮಿಲ್ ಬಗ್ಗೆ ಮಾನ್ಯ ಸಹಕಾರ ಸಚಿವರು ಹೇಳಿದರು. ಈ ವರ್ಲ್ಡ್ ಬ್ಯಾಂಕ್‌ನವರು, ನೂಲಿನ ಗಿರಣಿ ಸ್ಥಾಪನೆ ಮಾಡಲು ಸವದತ್ತಿಗೆ ಕೊಟ್ಟಿದ್ದಾರೆ. ನಮ್ಮ ಧಾರವಾಡದಲ್ಲಿ ಎರಡು ಇವೆ, ಎರಡು ಇದ್ದರೂ ಕೊಡಬೇಕೆಂದು ಹೇಳಿದೆ. ಸಹಕಾರ ಚಳುವಳಿ ನಮ್ಮ ಜಿಲ್ಲೆಯಿಂದಲೇ ಪ್ರಾರಂಭವಾಯಿತು. ಕರ್ನಾಟಕಕ್ಕೆ ಒಂದು ಕೊಡಬೇಕೆಂದು ಹೇಳಿ, ಸವದತ್ತಿ ಚಲೋ ಅಂದರು, ಅಲ್ಲಿಗೆ ಕೊಟ್ಟರು. ನಿಮ್ಮ ಸಹಾಯ ಇಲ್ಲವೆಂದಲ್ಲ ಹಣ ಸಹಾಯ ಮಾಡಿದ್ದೀರಿ.

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಧಾರವಾಡ ಜಿಲ್ಲೆಯಲ್ಲಿ ಎರಡು ಕೊಟ್ಟಿರುವುದರಿಂದ, ಬೆಳಗಾಂ ಜಿಲ್ಲೆಯನ್ನು ಸೆಲೆಕ್ಟ್ ಮಾಡಿದ್ದುದು ಸಾವೇ

ಶ್ರೀ ಕೆ. ಹೆಚ್. ಪಾಟೀಲ್.—ಧಾರವಾಡದಲ್ಲಿ ಹುಬ್ಬಳ್ಳಿ ಸಂಜಯ ಮಿಲ್ ಎಂದು ಮಾಡಿಸಿದ್ದುದು ನಾವು. ಒಂದೇ ಜಿಲ್ಲೆಗೆ ಎರಡು ಏಕೆ ಆಗಬಾರದು ? ಇದು ಯಾವ ಲೆಕ್ಕ. ಧಾರವಾಡ ಜಿಲ್ಲೆಯಲ್ಲಿ ಆಗಿವೆ ಎಂದರೆ ಹೇಗೆ ? ಬೇರೆ ಕಡೆ ಎರಡು ಮಿಲ್ಲುಗಳನ್ನು ಕೊಟ್ಟಿಲ್ಲವೇ ? ಕೊಟ್ಟಿದ್ದು ಸರಿಯಾಗಿ ಆಗುತ್ತಿದೆಯೋ ಎನ್ನುವುದನ್ನು ನೋಡಬೇಕು. ಕಾರವಾರ ಜಿಲ್ಲೆಗೆ ಒಂದು ಹಡಗು ಕೊಡಿ ಎಂದರೆ, ಏಕೆ ಕೊಡಬೇಕು, ಕೋಲಾರ ಜಿಲ್ಲೆಗೆ ಕೊಡಬಾರದೆ ಎಂದು ಹೇಳಿದ ಹಾಗಾಯಿತು. ಈ ಸಹಕಾರ ಚಳುವಳಿ ಹುಟ್ಟಿಸಿದವರು ಧಾರವಾಡ ಜಿಲ್ಲೆಯವರು.

ಶ್ರೀ ರಾಮಕೃಷ್ಣ ಹೆಗಡೆ.—ಸಹಕಾರ ಚಳುವಳಿಯನ್ನು ಹುಟ್ಟಿಸಿದವರು ಎನ್ನಬೇಡಿ, ಪ್ರಾರಂಭ ಮಾಯಿತು ಎಂದು ಹೇಳಿ.

ಶ್ರೀ ಕೆ. ಹೆಚ್. ಪಾಟೀಲ್.—ಹಿಂದೆ ಇಲ್ಲಿ ಸಹಕಾರಿ ಸೊಸೈಟಿಗಳನ್ನು ಪ್ರಾರಂಭ ಮಾಡಿದವರು, ಜಿ. ಕೆ. ಪಾಟೀಲ್. ಆರ್. ಕೆ. ಪಾಟೀಲ್ ಇವರೆಲ್ಲಾ ನಮ್ಮವರೇ. ಇವರೆಲ್ಲಾ ಸೇರಿ ಕೋ-ಆಪರೇಟಿವ್ ಸೊಸೈಟಿಗಳನ್ನು ಮಾಡಿ, ರಿಜಿಸ್ಟ್ರೇಷನ್ ಮಾಡಿಸಿದವರು ಇವರೇ. ಆದುದರಿಂದ ಈ ಸಹಕಾರ ಹುಟ್ಟಿದ್ದು ಇಲ್ಲಿಂದಲೇ ಎಂದು ಹೇಳಿದ್ದುದು.

ಶ್ರೀ ರಾಮಕೃಷ್ಣ ಹೆಗಡೆ.—ಸಹಕಾರ ಚಳುವಳಿ ಪ್ರಾರಂಭ ಮಾಡಿದವರು ಧಾರವಾಡ ಜಿಲ್ಲೆಯವರು, ಆದರೆ ತಾವು ಹುಟ್ಟಿಸಿದವರು ಎಂದರಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಒಟ್ಟಿನಲ್ಲಿ ಸಹಕಾರ ಚಳುವಳಿ ಪ್ರಾರಂಭ ಮಾಡಿದ್ದು, ಸಹಕಾರ ಚಳುವಳಿಯ ನೀತಿಯನ್ನು ಅನುಸರಿಸಿದ ಜಿಲ್ಲೆ ಆದಾಗಿದೆ. ಆ ಶ್ರೇಯಸ್ಸು ಎಲ್ಲಿದೆ ಎಂದರೆ ಧಾರವಾಡ ಜಿಲ್ಲೆಯಲ್ಲಿ. ಆದುದರಿಂದ ಇವತ್ತಿನ ದಿವಸ, ಎರಡಲ್ಲ. ಮೂರಲ್ಲ. ನಾಲ್ಕಾದರೂ ಅಲ್ಲಿಗೆ ಕೊಡಲೇಬೇಕು. ಉಣ್ಣೆ ಸಲುವಾಗಿ ರಾಣೆಬೆನ್ನೂರಿನಲ್ಲಿ, ಉಣ್ಣೆ ಮಾಡಲು ಆಗಿಲ್ಲ. ಕುರುಬರಿಗೆ ಒಂದಾದರೂ ಮಿಲ್ಲನ್ನು ಪ್ರಾರಂಭ ಮಾಡಬೇಕು. ಇದನ್ನು ಪ್ರಾರಂಭ ಮಾಡಿ, ತಾವು ಕೀರ್ತಿಯನ್ನು ಪಡೆಯಬೇಕು. ಆ ಭಾಗ್ಯ ನಿಮ್ಮದಾಗಲಿ ಎಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತಿನ ದಿವಸ ಅನೇಕ ಸಂದರ್ಭದೊಳಗೆ ನಮ್ಮಲ್ಲಿರತಕ್ಕ ಅನೇಕ ಅರ್ಬಿಟ್ರೇಷನ್ ಕೇಸುಗಳು ಇನ್ನೂ ಪೆಂಡಿಂಗ್ ಇವೆ ಏಕೆ ಅರ್ಬಿಟ್ರೇಷನ್ ಹಾಕಿದ್ದಾರೆ. ಇದರಿಂದ ಬಹು ಜನರು ತಮ್ಮ ಹೊಟ್ಟೆ ತುಂಬಿಕೊಳ್ಳುವ ಕೆಲಸದಲ್ಲಿದ್ದಾರೆ. ಇದು ಬದಲಾವಣೆ ಆಗಬೇಕು. ಇವೊತ್ತು ಅರ್ಬಿಟ್ರೇಟರ್ ಸಹಕಾರಿ ಚಳುವಳಿಯ ತ್ವತವನ್ನು ಅನುಸರಿಸಿ, ಸಹಕಾರ ಚಳುವಳಿಯ ಹಿತವನ್ನು ಗಮನಿಸುವ ವ್ಯಕ್ತಿಗಳನ್ನು ನೇಮಿಸಬೇಕು. ಆಕ್ಟ್ ಪಾಲನೆ ಮಾಡಬೇಕೆಂದು ಹೇಳಿದ್ದೀರಿ ಸಿವಿಲ್ ಕೋಡ್ ಎಲ್ಲಾ ಅನುಸರಿಸುವುದು ಇದ್ದರೂ ಕೂಡ, ಎರಡು ತಿಂಗಳೊಳಗೆ ಮುಗಿಯಬೇಕೆಂದಿದ್ದರೂ ಕೂಡ ೭-೮ ವರ್ಷಗಳು ಆಗಿವೆ. ಇನ್ನು ಪಿ. ಎಲ್ ಡಿ. ಬ್ಯಾಂಕ್ ಹಾವೇರಿಯಲ್ಲಿ ೧೯೭೬ನೇ ಇಸವಿಯಿಂದ ಇದು ಇದೆ. ಇಲ್ಲ ಮಿಸ್ ಅಪ್ರೊಪ್ರಿಯೇಷನ್ ಮತ್ತು ಅರ್ಬಿಟ್ರೇಷನ್ ಕೇಸ್ ಪೆಂಡಿಂಗ್ ಇವೆ. ಆಗ ನಿಮ್ಮ ಸರ್ಕಾರವೇ ಇತ್ತು ಎಂದು ನೀವು ಕೇಳಬಹುದು. ಆದರೆ ನಾವು ಅಂಥಾದ್ದು ಮಾಡದೇ ಹೋದೆವು. ಈಗ ನೀವು ಮಾಡಿ ಎಂದು ಕೇಳಿ ಕೊಳ್ಳುತ್ತೇನೆ. ಅದರೊಳಗೆ ಮಿಸ್ ಅಪ್ರೋಪ್ರಿಯೇಷನ್ ಆಗಿದೆ, ಅರ್ಬಿಟ್ರೇಷನ್ಸ್ ಪೆಂಡಿಂಗ್ ಇದೆ. ಈ ರೀತಿಯಾದ ಅನೇಕ ಕಾರ್ಯಕ್ರಮಗಳು ಇವೆ. ಹುಬ್ಬಳ್ಳಿಯಲ್ಲಿ ಜನತಾ ಬಜಾರ್ ಇದೆ. ಇದರಲ್ಲಿ ಸ್ವಲ್ಪ ದೊಡ್ಡವರೇ ಚೇರ್ಮನ್ ಆಗಿದ್ದಾರೆ. ಅಲ್ಲಿ ದುರುಪಯೋಗವಾಗದಿದ್ದರೆ ಶಹಭಾಸ್‌ಗಿರಿ ಕೊಡೋಣ. ದುರುಪಯೋಗವಾಗಿದ್ದರೆ, ದುರುಪಯೋಗ ಮಾಡಿದಂತಹ ಅಧಿಕಾರಿಗಳಿಗೆ, ಅವರನ್ನೇ ಗುರಿ ಮಾಡಬೇಕು. ಜನತಾ ಬಜಾರ್‌ಗಳು ಎಲ್ಲೆಲ್ಲಿ ನೋಡಿದರೂ ಸಹ ಸರಿಯಾಗಿ ನಡೆಯುತ್ತಿಲ್ಲ. ಬಾಗಲಕೋಟೆ ಒಂದನ್ನು ಬಿಟ್ಟರೆ, ಸ್ವಲ್ಪ ಹೆಚ್ಚು ಕಡಿಮೆ ಜನತಾ ಬಜಾರ್ ಎಲ್ಲಾ ಲಿಕ್ವಿಡೇಟ್ ಆಗುವ ಸ್ಟೇಜಿಗೆ ಬಂದಿವೆ. ಇನ್ನು ಗದಗ್ ಜನತಾ ಬಜಾರನ್ನು ತಾವೂ ಕೂಡ ನೋಡಿದ್ದೀರಿ. ಅವರು ೨೫-೩೦-೪೦ ಲಕ್ಷ ರೂಪಾಯಿಗಳ ಸಾಲ ಮಾಡಿದ್ದಾರೆ. ಸಾಲ ಮಾಡಿ, ಚುನಾವಣೆಗೆ ಪ್ರತಿನಿಧಿಗಳನ್ನು ತೆಗೆದುಕೊಳ್ಳಿ ಎಂದು ಬಿಟ್ಟಿದ್ದಾರೆ. ಕೆನರಾ ಬ್ಯಾಂಕಿನವರು ದಿನನಿತ್ಯ ನೋಟೀಸ್ ಕೊಡುತ್ತಿದ್ದಾರೆ. ಇದು ಒಂದು ತರಹ ಕ್ಯಾನ್ಸರ್ ರೋಗವಿದ್ದಂತೆ ಆಗಿದೆ. ಅನೇಕ ಕಡೆಗಳಲ್ಲಿ ಜನತಾ ಬಜಾರ್‌ಗಳು ಬಹಳ ನಿಕೃಷ್ಟ ವ್ಯವಸ್ಥೆಯಲ್ಲಿವೆ. ಇವುಗಳನ್ನು ತಿದ್ದಬೇಕು. ನಾನು ಟೀಕೆಗಾಗಿ ಈ ಮಾತನ್ನು ಹೇಳುತ್ತಿಲ್ಲ. ನಿಜ

ವಾಗಿಯೂ ಇವುಗಳಿಗೆ ವಿಟಮಿನ್ ಬೇಕು, ಇವುಗಳನ್ನು ತಾವು ಪುನರುಜ್ಜೀವನಗೊಳಿಸಬೇಕು. ಕೆಲವು ಜನತಾ ಬಜಾರ್‌ಗಳಲ್ಲಿ ಏನೇನು ಸಾಮಾನು ತಂದರು ಎಂದು ಹೇಳಲು ನಾಚಿಕೆಯಾಗುತ್ತದೆ.

ಇನ್ನು ಫೆಡರೇಷನ್ ವಿಚಾರ, ಇದರ ಬಗ್ಗೆಯೂ ನೀವೇ ಎಂದು ಹೇಳಬಹುದು. ಈ ಫೆಡರೇಷನ್‌ನೊಳಗೆ ಏನಾದರೂ ಮಾಪನ ಬೇಕಲ್ಲವೇ? ಸಹಕಾರಿ ಚಳುವಳಿಗೆ ಮಾತ್ರ ನಮ್ಮ ಮಾಲು ಮಾರಾಟ ಮಾಡುವುದು ಆಗಲೀ, ತೆಗೆದುಕೊಳ್ಳುವುದಾಗಲೀ ಮೀಸಲಾಗಬೇಕೇ ವಿನಹ ಹೊರಗಡೆ ಇರುವ ಸಹಕಾರಿ ಫೆಡರೇಷನ್‌ನ್ನು ಬಂದ್ ಮಾಡಬೇಕು. ಅಪೆಕ್ಸ್ ಬ್ಯಾಂಕ್‌ನವರು, ಈ ಫೆಡರೇಷನ್‌ಗಳಿಗೆ ಕೋಟಿಗಟ್ಟಲೆ ಸಾಲ ಕೊಡುತ್ತಾರೆ. ಆದರೂ ಕೂಡ ಅವು ಲಿಕ್ವಿಡೇಟ್ ಸ್ಟೇಜಿಗೆ ಬಂದಿವೆ

೬-೩೦ ಪಿ.ಎಂ.

ಈ ಫೆಡರೇಷನ್ ವ್ಯವಹಾರಗಳನ್ನು ಮಾನ್ಯ ಸಚಿವರು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಇದರ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಹಾಗೆ ಕೂಲಂಕಷವಾಗಿ ನೋಡಬೇಕೆಂದು ಅನೇಕ ಸದಸ್ಯರು ಹೇಳಿದ್ದಾರೆ. ಈ ಸಹಕಾರೀ ರಂಗದಲ್ಲಿ ಅನೇಕ ಅವ್ಯವಹಾರಗಳಿಂದ ಎಷ್ಟೋ ಸೊಸೈಟಿಗಳು ಬಂದ್ ಆಗಿವೆ. ಎಷ್ಟೋ ಸೊಸೈಟಿಗಳು ಬಹಳ ಲುಕ್ಸಾನು ಆಗಿವೆ. ಅಂಥಾ ಸಂಘಗಳನ್ನು ಬಂದ್ ಮಾಡದೆ ಮೇಲಕ್ಕೆತ್ತುವ ಹಾಗೆ ಮಾಡಬೇಕು. ಸಹಕಾರೀ ಸಂಘಕ್ಕೆ ಸೇರಿದ ಒಂದು ಹಣ್ಣಿನ ಸಂಘವೇ ಆಗಲಿ ಯಾವುದೇ ಆಗಲಿ ಅದು ಲುಕ್ಸಾನಿನಲ್ಲಿ ನಡೆಯುತ್ತಿದ್ದರೆ ಅದನ್ನು ತಿದ್ದಿ ಸರಿ ಮಾಡುವ ಹಾಗೆ ಮಾಡಬೇಕು. ಅವುಗಳಿಗೆ ಅಪೆಕ್ಸ್ ಬ್ಯಾಂಕ್‌ನಿಂದ ಒಂದಿಷ್ಟು ಹಣ, ಯೂನಿಯನ್‌ನವರಿಂದ ಒಂದು ಲಕ್ಷ ಎರಡು ಲಕ್ಷ ಹಾಕಿ ಮೇಲಕ್ಕೆತ್ತುವ ಹಾಗೆ ಮಾಡಬೇಕು. ಟೆಕ್ಸ್‌ಟೈಲ್ ಮಿಲ್ಸ್ ಏನಾದರೂ ಲಾಸ್ ಆದರೆ ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಯಾವ ಬ್ಯಾಂಕಿನಿಂದಲಾದರೂ ಕೊಡಿಸಿ ಏನಾದರೂ ಮಾಡಿ ಮೇಲಕ್ಕೆತ್ತುತ್ತೀರಿ. ಅದೇ ರೀತಿಯಾಗಿ ಇಂತಹ ಸಂಸ್ಥೆಗಳನ್ನೂ ಸಹ ಮಾನ್ಯ ಹೆಗಡೇಜೀಯವರು ಪುನರುಜ್ಜೀವ ಮಾಡಬೇಕು. ರೈತರ ಸೊಸೈಟಿಗಳು ಏನು ಇವೆ ಅದನ್ನು ಪುನರುತ್ಥಾನ ಮಾಡುವ ಹಾಗೆ ಮಾಡಬೇಕು. ಈ ಸಂದರ್ಭದಲ್ಲಿ ನನಗೆ ಒಂದು ವಿಚಾರ ಜ್ಞಾಪಕಕ್ಕೆ ಬರುತ್ತದೆ. ಅಂದಿನ ವ್ಯವಸಾಯ ಸಚಿವರಾದಂಥ ಡಾ. ನಾಗನಗೌಡರು ಈ ಸಹಕಾರೀ ಚಳುವಳಿ ಬಗ್ಗೆ ಮತ್ತು ವ್ಯವಸಾಯದ ಬಗ್ಗೆ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಷುಗರ್‌ಫ್ಯಾಕ್ಟರಿ ಮೊದಲು ಅಂಥವರ ಕೈಯಲ್ಲಿ ಇತ್ತು. ಆಗ ಅವರು ಎಷ್ಟೋ ಉತ್ತಮವಾದ ಕಾರ್ಯಗಳನ್ನು ಮಾಡಿದರು. ಅಂಥವರ ಕೈಯ್ಯಲ್ಲಿ ಈ ಸಹಕಾರೀ ಸಂಘಗಳು ಇದ್ದರೆ ನಿಜವಾಗಿಯೂ ಉದ್ಧಾರವಾಗುತ್ತವೆ. ಇವೊತ್ತು ಅವರು ಇಲ್ಲ. ಇವೊತ್ತು ಹೊಸಪೇಟೆಯಲ್ಲೊಂದು ಡಾ. ನಾಗನಗೌಡರ ಹೆಸರಿನಲ್ಲಿ ಒಂದು ಷುಗರ್ ಫ್ಯಾಕ್ಟರಿಯನ್ನು ಪ್ರಾರಂಭ ಮಾಡಿದರೆ ಆ ಭಾಗದ ರೈತರಿಗೆ ಉತ್ತೇಜನ ಕೊಟ್ಟಂತಾಗುತ್ತದೆ. ಅವರು ಈ ಬಗ್ಗೆ ಸಾಧನೆ ಮಾಡಿದಂಥಾದ್ದು, ಭಾಷಣ ಮಾಡಿದಂಥಾದ್ದು ನಾವು ಸ್ಮರಿಸಿಕೊಳ್ಳಬೇಕು. ಮತ್ತು ಅವರ ಪ್ರಯತ್ನಕ್ಕೆ ನಿಜವಾಗಿಯೂ ನಾವು ಶ್ಲಾಘನೀಯ ಮಾಡಬೇಕಾಗಿದೆ. ಈ ಸಹಕಾರ ಸಂಘಗಳಿಗೆ ಉತ್ತೇಜನ ಕೊಟ್ಟು ಮುಂದಕ್ಕೆ ತಂದವರೇ ಅವರು. ಅವರು ಈ ಸಹಕಾರ ಸಂಘದ ಮುಖಂಡರಾಗಿ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ತಮಗೆ ಹೇಳುವುದೇನೆಂದರೆ ನಾನು ಈ ಸಹಕಾರ ಸಂಘದ ಮುಖಾಂತರ ಫರ್ಟಿಲೈಸರ್ಸ್‌ನಲ್ಲಿ ಕೆಲವು ಭಾಗ ಏನು ನಾಶವಾಗುತ್ತದೆಯೋ ಅದನ್ನೆಲ್ಲಾ ಉಪಯೋಗಿಸಿ ನೈಟ್ರೋಜನ್ ಗ್ಯಾಸ್ ಅನ್ನು ಉತ್ಪಾದನೆ ಮಾಡಬೇಕೆಂದು ಒಂದು ಪ್ರೋಗ್ರಾಂ ಹಾಕಿದ್ದೆ. ದುರ್ದೈವವಶಾತ್ ನಾನು ಬಹಳ ದಿವಸ ಮಂತ್ರಿಯಾಗಿ ಇರಲಿಲ್ಲ. ಈ ಬಗ್ಗೆ ನಾನು ಮಾನ್ಯ ರಾಮಕೃಷ್ಣ ಹೆಗಡೇಜೀಯವರಿಗೆ ಪತ್ರ ಬರೆದಿದ್ದಕ್ಕೆ ಅವರು ನನಗೆ ಉತ್ತರ ಬರೆದಿದ್ದಾರೆ. ಬಹುಶಃ ಅದನ್ನು ಇನ್ನೂ ಪರಿಶೀಲಿಸುತ್ತಾ ಇರಬಹುದು. ಇದಲ್ಲದೆ ನಾನು ಬೆಂಗಳೂರು ಮತ್ತು ಮಂಗಳೂರಿನ ಕೆಮಿಕಲ್ ಫರ್ಟಿಲೈಸರ್ಸ್‌ನವರಿಗೂ ಸಹ ಪತ್ರ ಬರೆದಿದ್ದೇನೆ. ನಿಮ್ಮಲ್ಲಿ ಉತ್ಪಾದನೆಯಾಗುವಂಥ ಗೊಬ್ಬರದ ಕೆಲವು ಭಾಗವೇನು ನಾಶವಾಗುತ್ತದೆಯೋ ಅದನ್ನು ಉಪಯೋಗಿಸಿಕೊಂಡು ನೈಟ್ರೋಜನ್ ಅನ್ನು ಗ್ಯಾಸ್ ರೂಪದಲ್ಲಾಗಲಿ ಅಥವಾ ನೀರಿನ ರೂಪದಲ್ಲಿ ಆಗಲಿ ಉತ್ಪಾದನೆ ಮಾಡಿದರೆ ಈಗ ಏನು ಅದರ ಬೆಲೆ ಇದೆಯೋ ಅದರ ಮೂರನೆಯ ಒಂದು ಭಾಗದ ಬೆಲೆ ಇದಕ್ಕೆ ಬೀಳುತ್ತದೆ ಆ ರೀತಿ ಮಾಡಬೇಕು ಎಂದು ಹೇಳಿದ್ದೇನೆ. ಈವೊತ್ತು ರೀಸರ್ಚ್‌ನ ಯುಗದಲ್ಲಿ ಇರತಕ್ಕಂಥ ಮಾನ್ಯ ಹೆಗಡೇಜೀಯವರು ಸಾರ್ವಜನಿಕರಿಗೆ ಇಂದು ಅನೇಕ ಕೊಡುಗೆಗಳನ್ನು ಏನು ಕೊಟ್ಟಿದ್ದಾರೆ ಅದೇ ರೀತಿಯಾಗಿ ಈ ಒಂದು ಕೊಡುಗೆಯನ್ನೂ ಸಹ ಸಾರ್ವಜನಿಕರಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಹಳ್ಳಿಗಳಲ್ಲಿರತಕ್ಕಂಥ ಸೊಸೈಟಿಗಳಲ್ಲಿ ಸೆಕ್ರೆಟರಿಯವರನ್ನು ನೇಮಿಸಿದ್ದೀರಿ. ಯಾವುದೋ ಒಂದು ಕಾಲದಲ್ಲಿ ಮಂತ್ರಿಗಳಾಗಿದ್ದವರು ನಮ್ಮ ಕೈಯ್ಯಲ್ಲಿ ಸರ್ವಸ್ವವೂ ಇರಬೇಕೆಂದು ಎಂದು ಮಾಡಿದರು. ಹಾಗೆ ನೀವೂ ಸಹ ಮಾಡಬಾರದು. ತಮಗೆ ಈ ಸಂದರ್ಭದಲ್ಲಿ ಒಂದು ಗಾದೆಯನ್ನು ಹೇಳಬಯಸುತ್ತೇನೆ. ಅದೇನೆಂದರೆ ಒಬ್ಬ ದೇವರ ಹತ್ತಿರ ಬಂದು ಒಂದು ವರ ಕೇಳಿದ, ಏನೆಂದರೆ ನಾನು ಮುಟ್ಟಿದ್ದೆಲ್ಲಾ ಬಂಗಾರ ಆಗಬೇಕು ಎಂದು. ಅದರಂತೆ ಅವನಿಗೆ ವರ ಸಿಕ್ಕಿತು. ಆದರಂತೆ ಅವನು ಮುಟ್ಟಿದ್ದೆಲ್ಲಾ ಬಂಗಾರವಾಯಿತು. ಅವನು ಹೆಂಡತಿ ಮುಟ್ಟಿದ ಬಂಗಾರವಾಯಿತು. ಊಟ ಮುಟ್ಟಿದ ಬಂಗಾರವಾಯಿತು, ಹಾಗಾಗಬಾರದು. ನೌಕರಶಾಹಿಗಳೆಲ್ಲಾ ನಮ್ಮ ಕೈಯ್ಯಲ್ಲಿ ಇರಬೇಕೆಂದು ಮಾಡಿದರೆ ಈ ಸಹಕಾರೀ ಚಳುವಳಿ ದೃಷ್ಟಿಯಿಂದ ಸಾಧ್ಯವಿಲ್ಲ. ಸಹಕಾರೀ ಚಳುವಳಿ ದೃಷ್ಟಿಯಿಂದ ಈ ಸೆಕ್ರೆಟರಿಯವರು ಛೇರ್ಮನ್‌ರವರ ವಿರುದ್ಧವಾಗಿ ಎಲ್ಲೇ ಹೋಗಬಾರದು. ಹಾಗೆ ಹೋದರೆ ಏನಾಗುತ್ತದೆ ಎಂದರೆ ವಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ನೋಡಿದ ಎಂದ ಹಾಗಾಗುತ್ತದೆ. ಅವರ ಮೇಲೆ ಎಷ್ಟರ ಮಟ್ಟಿಗೆ ಕಡಿಮೆ ನಿಯಂತ್ರಣ ಮಾಡಬೇಕೋ ಅಷ್ಟರಮಟ್ಟಿಗೆ ಮಾಡಿ. ಹಿಂದಿನ ಒಂದು ಮನೋಭಾವನೆಯನ್ನೇ ಇಂದೂ ಕೂಡ ಮುಂದುವರೆಸಿಕೊಂಡು ಹೋಗಬಾರದು. ಈ ಸಹಕಾರ ಚಳುವಳಿಯನ್ನು ಇವೊತ್ತಿಗೆ ತಕ್ಕಂತೆ ಯಶಸ್ವಿಯಾಗಿ ನಡೆದುಕೊಂಡು ಹೋಗುವಂತೆ ತಾವು ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇದಕ್ಕೆ ಸಂಬಂಧಪಟ್ಟಂತೆ ಇನ್ನೊಂದು ವಿಷಯ ಇದೆ. ಅದೇನೆಂದರೆ ಈ ಸಹಕಾರ ಸಂಘಕ್ಕೆ ನೀವು ಯಾರನ್ನಾದರೂ ಕೂಡ ಮ್ಯಾನೇಜಿಂಗ್ ಡೈರೆಕ್ಟರ್ ಹಾಕಿರಿ. ನಿಮ್ಮವರನ್ನೇ ಹಾಕಿರಿ, ನಾವು ಬೇಡ ಅನ್ನುವುದಿಲ್ಲ, ಆದರೆ ಒಂದು ಸಾರಿ ಅಲ್ಲಿಗೆ ಪೋಸ್ಟ್ ಮಾಡಿದ ಮೇಲೆ ಅವರನ್ನು ಬದಲಾವಣೆ ಮಾಡುವುದಕ್ಕೆ ಹೋಗಬೇಡಿ. ದೊಡ್ಡ ದೊಡ್ಡ ಸಂಸ್ಥೆಯಲ್ಲಿ ಮೊದಲು ಅನುಭವ ಪಡೆದುಕೊಂಡು ಬಂದಿದ್ದರೂ ಸಹ ಅವರು ಈ ಸಹಕಾರ ಸಂಘಕ್ಕೆ ಬಂದ ಮೇಲೆ ಇಲ್ಲಿಯ ಒಂದು ಸಹಕಾರ ಚಟುವಟಿಕೆಗಳಲ್ಲಿ ಕೆಲಸ ಮಾಡಲು ಕೊನೆಯ ಪಕ್ಷ ೩ ವರ್ಷಗಳಾದರೂ ಬೇಕಾಗುತ್ತದೆ. ಆದುದರಿಂದ ಈ ಸಹಕಾರ ಸಂಘಕ್ಕೆ ಅಂಥವರನ್ನು ಹಾಕಿದ ಮೇಲೆ ತಕ್ಷಣ ಬದಲಾವಣೆ ಮಾಡುವುದಕ್ಕೆ ಹೋಗಬೇಡಿ ಎಂದು ನನ್ನ ಸಲಹೆಯನ್ನು ತಮ್ಮ ಎದುರಿಗೆ ಇಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಇನ್ನೂ ಅನೇಕ ವಿಷಯಗಳು ಹೇಳಬೇಕಾದದ್ದು ಇತ್ತು, ಕಾಲಾವಕಾಶ ಇಲ್ಲ. ಕೊನೆಯದಾಗಿ ಒಂದೆರಡು ವಿಷಯಗಳನ್ನು ಹೇಳಿಬಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಸಹಕಾರ ಸಚಿವರು ಅನೇಕ ಒಳ್ಳೆಯ ಕಾರ್ಯಗಳನ್ನು ಇದುವರೆಗೂ ನಡೆಸುತ್ತಾ ಬಂದಿದ್ದಾರೆ. ಉದಾಹರಣೆಗೆ ಹೇಳಬೇಕಾದರೆ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿ ಇವೊತ್ತು ವ್ಯಾಪಾರಸ್ಥರ ಒಂದು ಕಡಿವಾಣದಲ್ಲಿತ್ತು. ಅದನ್ನು ರೆಗ್ಯುಲೇಟೆಡ್ ಕಮಿಟಿ ವ್ಯಾಪ್ತಿಯೊಳಗೆ ಒಳಪಡಿಸುವಂಥ ಕಾರ್ಯಕ್ರಮವನ್ನು ಅವರು ನಡೆಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಾಗೆಯೇ ಇವೊತ್ತು ಬಡ ರೈತರ ಜೀವನವನ್ನು ಉತ್ತಮಪಡಿಸುವುದಕ್ಕೆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಅಜ್ಞಾನದ ಅರಿವಿನಲ್ಲಿರತಕ್ಕಂಥ ರೈತರನ್ನು ಕಾಪಾಡುವುದಕ್ಕೆ ಮಂತ್ರಿಮಂಡಲ ಇವೊತ್ತಿನ ದಿವಸ ರೈತರಿಗೆ ಅನುಕೂಲವಾಗುವ ಹಾಗೆ ಮಧ್ಯವರ್ತಿ ದಳ್ಳಾಳಿಗಳು ಏನು ಇದ್ದರು ಅವರನ್ನು ತೆಗೆದುಹಾಕಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಸಂಪೂರ್ಣವಾಗಿ ರೈತರನ್ನು ದಳ್ಳಾಳಿಗಳಿಂದ ಮುಕ್ತ ಮಾಡಿದ್ದಾರೆ. ಈ ಕೀರ್ತಿ ನಿಮ್ಮದಾಗಿರುತ್ತದೆ. ಇದುವರೆಗೂ ಈ ದಳ್ಳಾಳಿಗಳ ಪದ್ಧತಿ ಏನು, ಅವರ ಪರಂಪರೆಯನ್ನು ನಿಲ್ಲಿಸಿದ್ದೀರಿ. ಜೊತೆಗೆ ವ್ಯಾಪಾರಸ್ಥರನ್ನು ಕೂಡ ಈ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ನಿಯಂತ್ರಣಕ್ಕೆ ಒಳಪಡಿಸುವಂಥ ಒಂದು ಕಾನೂನನ್ನು ತೆಗೆದುಕೊಂಡು ಬನ್ನಿ. ಆ ಬಗ್ಗೆ ಎಷ್ಟೇ ಅಡಚಣೆಗಳು ಇದ್ದರೂ ಸಹ ನಾವು

ತಮಗೆ ಧೈರ್ಯಸ್ಥೈರ್ಯಗಳನ್ನು ಕೊಡುತ್ತೇವೆ. ರೈತನಿಗೆ ಅವನ ಅಜ್ಞಾನದ ಅರಿವು ಇರುವುದರಿಂದ ಅವನಿಗೆ ಲೆಕ್ಕಗಳನ್ನು ಹಾಕುವುದಕ್ಕೆ ಬರುವುದಿಲ್ಲ. ಆತನ ಮನೆಗೆ ಬಂದು ತನ್ನ ಹೆಂಡತಿ ಮಕ್ಕಳನ್ನು ಕೇಳಿ ತಿಳಿದುಕೊಳ್ಳಬೇಕಾಗುತ್ತದೆ. ಅಂಥಾದ್ದನ್ನು ತಾವು ತಿಳಿದು ಆ ರೈತರನ್ನು ಇವೊತ್ತು ದಳ್ಳಾಳಿಗಳಿಂದ ಮುಕ್ತ ಮಾಡಿದ್ದೀರಿ. ದಳ್ಳಾಳಿಗಳ ವಿಷಯಗಳ ಬಗ್ಗೆ ಇಷ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಬಹು ಮುಖ್ಯವಾದ ಒಂದು ವಿಷಯವನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಇವೊತ್ತು ಸಹಕಾರೀ ರಂಗದಲ್ಲಿ ಮಾನ್ಯ ಶ್ರೀ ವೀರೇಂದ್ರ

ಪಾಟೀಲರು ಒಂದು ಮಾತನ್ನು ಹೇಳಿದ್ದಾರೆ, ಅದೇನೆಂದರೆ ನಾನು ಕರ್ನಾಟಕ ರಾಜ್ಯಕ್ಕೆ ಒಂದಲ್ಲ, ಎರಡಲ್ಲ ನಾಲ್ಕು ಗೊಬ್ಬರದ ಕಾರ್ಖಾನೆಗೆ ಮಂಜೂರಾತಿ ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ ನಾನು ಮಾನ್ಯ ಹೆಗಡೇಜೀಯವರಲ್ಲಿ ಪ್ರಾರ್ಥನೆ ಮಾಡುವುದು ಇಷ್ಟೆ. ಯಾರನ್ನಾದರೂ ಜನತಾ ಪಕ್ಷದವರನ್ನೇ ಮುಂದೆ ತನ್ನಿ, ಈ ಸಹಕಾರೀ ಸಂಘದಲ್ಲಿ ಒಂದು ಸೂಪರ್‌ಫಾಸ್ಫೇಟ್ ಕಾರ್ಖಾನೆಯನ್ನು ಕೊನೆಯ ಪಕ್ಷ ನಮ್ಮ ಕಾರವಾರ ಜಿಲ್ಲೆಯಲ್ಲಾದರೂ ಕೂಡ ಸ್ಥಾಪನೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಟೆಕ್ಸ್‌ಟೈಲ್ ಮಿಲ್ಸ್‌ಗೆ, ಷುಗರ್ ಫ್ಯಾಕ್ಟರಿಗೆ ಯಾವರೀತಿಯಾಗಿ ತಾವು ಹೆಚ್ಚಿನ ಒಂದು ತೀವ್ರತೆ ವಹಿಸುತ್ತೀರೋ ಅದೇ ರೀತಿಯಾಗಿ ಈ ಸಹಕಾರಿ ರಂಗಕ್ಕೂ ಅಷ್ಟೇ ತೀವ್ರತೆ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಹಕಾರೀ ರಂಗದಲ್ಲಿರುವ ರೈತರಿಗೆ ಅನುಕೂಲ ಮಾಡಿಕೊಡಬೇಕು. ಇಲ್ಲದೇ ಹೋದರೆ ನಮ್ಮ ಸಹಕಾರೀ ಚಳುವಳಿಗೆ ಒಂದು ಕಳಂಕಪ್ರಾಯವಾಗಿ ಬರತಕ್ಕಂಥ ಸನ್ನಿವೇಶಕ್ಕೆ ತಾವು ಪಾತ್ರರಾಗುತ್ತೀರಿ. ಇಂತಹ ಕೀರ್ತಿ ತಮಗೆ ಬರಬಾರದು ಎಂದು ನಾನು ಸಲಹೆ ಮಾಡಲಿಕ್ಕೆ ಇಷ್ಟ ಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ನಮ್ಮ ಜಿಲ್ಲೆಯ ಹಾವೇರಿ ತಾಲ್ಲೂಕಿನಲ್ಲಿ ಷುಗರ್ ಫ್ಯಾಕ್ಟರಿ ಏನು ಇದೆ ಅಲ್ಲಿಗೆ ಅಧಿಕಾರಿಗಳನ್ನು ಹಾಕಿರುವುದು ನಮ್ಮ ದುರುದೃಷ್ಟಕರ. ಅಲ್ಲಿಗೆ ಯಾರನ್ನಾದರೂ ಒಬ್ಬ ಅಧಿಕಾರೇತರ ಆಗಿರತಕ್ಕಂಥ ನಿಮ್ಮ ಜನತಾ ಪಕ್ಷದ ಮುಖಂಡರನ್ನೇ ಹಾಕಿ ಬೇಡ ಅನ್ನುವುದಿಲ್ಲ ಹಾಗೆ ಮಾಡಿದರೆ ಆತನು ಅದನ್ನು ಚೆನ್ನಾಗಿ ಮುಂದುವರಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಾನೆ ಅದನ್ನು ಅಧಿಕಾರಿಗಳಿಂದ ತಪ್ಪಿಸಿ ಸಹಕಾರೀ ರಂಗದಲ್ಲಿರುವವರನ್ನು ಹಾಕಿ. ಅಂಥವರನ್ನು ಹಾಕಿದರೆ ಅವರಿಂದ ಸಹಕಾರೀ ಚಳುವಳಿ ಆಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಸಹಕಾರೀ ರಂಗದ ಅಭಿವೃದ್ಧಿಗೆ, ಗ್ರಾಮಾಭ್ಯುದಯಕ್ಕೆ ಸಹಕಾರೀ ಸಚಿವರೂ ಮತ್ತು ಗ್ರಾಮಾಭಿವೃದ್ಧಿ ಸಚಿವರೂ ಸೇರಿ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಒಂದೊಂದು ಸಹಕಾರ ಸಂಘಗಳು ಇರುವಂತೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ ಎರಡು ಸಿಕ್ ಯೂನಿಟ್ಸ್ ಸೇರಿ ಅಮಾಲ್ಗಮೇಟ್ ಮಾಡುತ್ತೇವೆಂದು ಹೇಳಿದರು. ದಯವಿಟ್ಟು ತಾವು ಇಂಥ ಪದ್ಧತಿಗೆ ಕೈಹಾಕಬೇಡಿ ಎಂದು ಹೇಳುತ್ತೇನೆ.

ಇವತ್ತು ಕ್ಷಯ ಬೇನೆಯಿಂದ ಕೆಲವು ಹಾಳಾಗುತ್ತವೆ, ಅವು ಸದೃಢವಾಗುವುದಿಲ್ಲ. ಆದರೆ ಅಭದ್ರವಾದಂಥ ಸಹಕಾರ ಸಂಘಗಳನ್ನು ಕೂಡಿಸಿ ಸುಭದ್ರವಾದ ಸಹಕಾರ ಸಂಘವನ್ನು ಮಾಡುತ್ತೇವೆ ಎಂದರೆ ಅದು ನಿಮ್ಮ ಕನಸು, ಏನೂ ಆಗುವುದಿಲ್ಲ. ಧಾರವಾಡ ಜಿಲ್ಲೆಯಲ್ಲಿ ಇನ್ನೂ ತನಕ ಇದು ಆಗಿಲ್ಲ ಅಂದಿನಿಂದ ಇಲ್ಲಿಯವರೆಗೆ ನಾವು ಪ್ರಯತ್ನ ಮಾಡಿದೆವು. ಎಲ್ಲೆಲ್ಲಿ ಮಾಡಿದೆ ಅದನ್ನು ರಿವ್ಯೂಮಾಡಿ ಎಂದು ಹೇಳುವುದಿಲ್ಲ ರಿವ್ಯೂಮಾಡಿ ಅಂದರೆ ತಪ್ಪಾದೀತು. ಇದ್ದಂಥ ಸಂಘಗಳನ್ನು ಚೆನ್ನಾಗಿ ಮಾಡಿ, ಒಡೆಯಲಿಕ್ಕೆ ಪ್ರಯತ್ನ ಮಾಡಬೇಡಿ. ಇವೊತ್ತಿನದಿವಸ ಮಾರ್ಕೆಟಿಂಗ್ ಸೊಸೈಟಿಗಳು ಕರ್ನಾಟಕ ರಾಜ್ಯದಲ್ಲಿ ಇತಿಹಾಸವನ್ನು ಪಡೆದಿವೆ. ಮಾರ್ಕೆಟಿಂಗ್ ಸೊಸೈಟಿಗಳು ಬಹಳ ಇವೆ. ಸುಮಾರು ೪೪೪ ಇರಬಹುದು. ಮಾನ್ಯ ಸಭಾಧ್ಯಕ್ಷರೆ ತಮ್ಮನ್ನು ಕೇಳುತ್ತಾ ಇದ್ದೇನೆ ನಾನು ಹೇಳಿದ ಕೂಡಲೇ ದೊಡ್ಡಸ್ತನದಿಂದ ಹೇಳುತ್ತೇನೆ ಎಂದಲ್ಲ. ಸಹಕಾರಿ ಕಾನೂನನ್ನು ನಿರ್ಮಾಣ ಮಾಡುವಾಗ ನಾನು ಕಮಿಟಿ ಛೇರ್ಮನ್ನಾಗಿ ಅಡ್ಡಾಡಿದ್ದೆ. ಎಲ್ಲಿಯೂ ಮಾರ್ಕೆಟಿಂಗ್ ಕಮಿಟಿಗಳು ನನಗೆ ಕಾಣಲಿಲ್ಲ ಹಳೇ ಮೈಸೂರಿನಲ್ಲಿ ಒಂದೂ ಕಾಣಲಿಲ್ಲ ಅಂದರೆ ಮಾನ್ಯ ರಾಮಕೃಷ್ಣ ಹೆಗಡೆಯವರು ನನ್ನ ಮೇಲೆ ಕೋಪಗೊಳ್ಳಬಹುದು. ಮಂಡ್ಯ ಜಿಲ್ಲೆಯಲ್ಲಿ ನಮ್ಮ ಸ್ನೇಹಿತರು ಮಾಡಿದ್ದುದು ಮಾರ್ಕೆಟಿಂಗ್ ಸೊಸೈಟಿ ಅಲ್ಲ ಕನ್‌ಸ್ಯೂಮರ್ ಸೊಸೈಟಿ. ಕ್ಯಾಂಕೋ ಮಾತ್ರ ಇತ್ತು, ಇತ್ತೀಚೆಗೆ ಅದರ ವ್ಯವಹಾರ ಬದಲಾವಣೆಯಾಗಿದೆ. ಇಲ್ಲಿ ನಾನು ಟೀಕೆಗಾಗಿ ಈ ಮಾತನ್ನು ಹೇಳುತ್ತಾ ಇಲ್ಲ. ನಿಜವಾಗಿ ಹಳೇ ಮೈಸೂರಿನಲ್ಲಿ ಸಹಕಾರ ಚಳುವಳಿ ಪ್ರಬಲವಾಗಿ ಬೆಳೆಯಬೇಕು. ಯಾವಾಗಲೂ ಹಳೇ ಮೈಸೂರಿನವರೇ ಸಹಕಾರ ಸಚಿವರಾಗಿ ಬಂದಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಬಿಟ್ಟಮೇಲೆ ಹಳೇ ಮೈಸೂರಿನವರೇ ಸಹಕಾರ ಸಚಿವರಾಗಿ ಬಂದಿದ್ದಾರೆ. ಅಂದು ರಾಮಕೃಷ್ಣ ಹೆಗಡೆಯವರು ಸಹಕಾರ ಸಚಿವರಾದಮೇಲೆ ನಾಡಗೌಡರು ಆಗಿದ್ದರು. ಆದರೂ ಚಳುವಳಿ ನಡೆಯಲಿಲ್ಲ ಮಾರ್ಕೆಟಿಂಗ್ ಸೊಸೈಟಿಗಳಿಗೆ ಹೋಗಿರಿ, ಸದಸ್ಯರು ಮಾಲನ್ನು ತಂದು ಮಾರುತ್ತಾರೆಯೋ ಎಂದು ನೋಡಿ. ನಾನು ತಪ್ಪು ಹೇಳಿದ್ದರೆ ನಾನು ಕಬೂಲು ಇದ್ದೇನೆ. ಷುಗರ್ ಕಂಟ್ರೋಲ್ಡ್ ಆರ್ಟಿಕಲ್ ಇದೆ. ಷುಗರ್, ಗೊಬ್ಬರ ಮುಂತಾದ್ದನ್ನು ಮಾರಿ ಲಾಭ ಪಡೆಯಬೇಕು. ಎಂದು ಕೆಲವರ ಅಭಿಪ್ರಾಯ ಇದೆ, ನೀವು ಮಾರ್ಕೆಟಿಂಗ್

ಸೊಸೈಟಿಗಳಿಗೆ ಸಾಲ ಕೊಡುತ್ತೀರಿ, ನಬಾರ್ಡ್, ರಿಸರ್ವ್‌ಬ್ಯಾಂಕ್‌ನಿಂದ ಹಣ ತಂದಿರತಕ್ಕಂಥ ಅಂಕಿ ಸಂಖ್ಯೆ ಇದೆ. ಮಾರ್ಕೆಟಿಂಗ್ ಸೊಸೈಟಿಗಳ ಅಭಿವೃದ್ಧಿಗಾಗಿ ಎಷ್ಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಬಂಡವಾಳ ಕೊಟ್ಟಿದ್ದೇವೆ, ಅವುಗಳು ರೈತರ ಕಲ್ಯಾಣಕ್ಕೆ ಬರತಕ್ಕಂಥ ರೀತಿಯಲ್ಲಿ ಮೇಲ್ಮಟ್ಟಕ್ಕೆ ತರಬೇಕು ಎಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ನಿಜವಾದ ಮಾರ್ಕೆಟಿಂಗ್ ಸೊಸೈಟಿಗಳು ಯಾವುವು? ಮಾನ್ಯ ಸಭಾಧ್ಯಕ್ಷರೆ, ತಾವು ಹೀರೆಕೆರೂರಿನ ವ್ಯವಸಾಯಗಾರರ ಸಂಘವಲ್ಲಿ ಅಧ್ಯಕ್ಷರಾಗಿದ್ದಿರಿ ನಮ್ಮದು ಯಾರಿಗಿಂತಲೂ ಕಡಿಮೆ ಇಲ್ಲ. ಮುಂಬೈ ವ್ಯಾಪಾರಸ್ಥರು ಬಂದಾಗ ಸೀಲ್ ಹಾಕಿ ಕೊಡುತ್ತಾರೆ. ಸಹಕಾರ ಚಳವಳಿಯಲ್ಲಿ ದುಡ್ಡು ಹೊಡೆಯುತ್ತಾರೆ ಎಂದು ಹೇಳುತ್ತಾರೆ. ನಾನು ಈ ಮಾತನ್ನು ನಮ್ರವಾಗಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಮಾರ್ಕೆಟಿಂಗ್ ಸೊಸೈಟಿಗಳನ್ನು ಪೂರ್ಣವಾಗಿ ಬೆಳೆಸಬೇಕು. ಸುದೈವದಿಂದ ಕರ್ನಾಟಕ ರಾಜ್ಯ ನೈಸರ್ಗಿಕವಾಗಿ ಬಹಳ ಸಂಪದ್ಭರಿತವಾದ ರಾಜ್ಯ. ಪ್ರಯತ್ನ ಮಾಡಿದರೆ ಸರ್ಕಾರ ಸಂಪನ್ಮೂಲಗಳನ್ನು ಹೆಚ್ಚು ಮಾಡಲಿಕ್ಕೆ ಸಾಧ್ಯವಿದೆ. ಹಾಸನ ಜಿಲ್ಲೆಗೆ ಹೋದರೆ ಟೆಕ್ಸ್‌ಟೈಲ್ ಮಿಲ್ಸ್ ಹಾಕಲಿಕ್ಕೆ ಆಗುವುದಿಲ್ಲ. ಹಾಸನ ಜಿಲ್ಲೆಯಲ್ಲಿ ಪೊಟ್ಯಾಟೊ ಯಥೇಚ್ಛವಾಗಿ ಸಿಗುತ್ತದೆ, ಆದರ ಸಲುವಾಗಿ ಕೋಲ್ಡ್ ಸ್ಟೋರೇಜ್ ಮಾಡಿದರೆ ಅದನ್ನು ಈಗ ದನದ ಬೆರಣಿ ಹಾಕಲಿಕ್ಕೆ ಉಪಯೋಗಿಸುತ್ತಿದ್ದಾರೆ, ಪೊಟ್ಯಾಟೊ ಕೋಲ್ಡ್ ಸ್ಟೋರೇಜ್ ಮಾಡಿಲ್ಲ. ಪೊಟ್ಯಾಟೊ ಪೌಡರ್‌ಮಾಡಿ ಚಿಪ್ಸ್‌ಮಾಡುವಂಥ ಕಾರ್ಖಾನೆಗಳನ್ನು ಹಾಕಿದರೆ ಎಷ್ಟು ಸುಕೃತ, ಪುಣ್ಯ ಪಡೆಯುತ್ತೀರಿ. ಕೋಲಾರದಲ್ಲಿ ಸಿಗತಕ್ಕಂಥ ಟೊಮ್ಯಾಟೊ ತಂದು ಒಂದು ರೂಪಾಯಿಗೆ ಒಂದು ಕೆ.ಜಿ ಮಾರುತ್ತಾರೆ ಒಮ್ಮೊಮ್ಮೆ ೪ ಆಣೆಗೆ ಮಾರುತ್ತಾರೆ. ಅದನ್ನು ಅಲ್ಲೇ ಇಟ್ಟು ಸರಿಯಾಗಿ ಉಪಯೋಗಿಸಿಕೊಂಡರೆ ೫-೬ ರೂಪಾಯಿಗಳನ್ನು ಪಡೆಯುತ್ತಾರೆ. ಒಂದು ಕೋಟಿಯೊಳಗೆ ದೊಡ್ಡ ಫ್ಯಾಕ್ಟರಿ ಮಾಡುವುದಾದರೆ ೧೦ ಲಕ್ಷ ಜನರನ್ನು ಕೊಡಿಸಿದರೆ ೯೦ ಲಕ್ಷ ಆಗುತ್ತದೆ. ಆದರೆ ಇಂತಹ ಕಾರ್ಖಾನೆಗಳನ್ನು ಹಾಕಲಿಕ್ಕೆ ಮನಸ್ಸಿನ ಕೊರತೆ ಮಾತ್ರ ಇದೆ. ಹಣದ ಕೊರತೆ ಇದ್ದುದಕ್ಕೆ ನಾನು ಮಾತನಾಡುವುದಿಲ್ಲ. ನಾವೇ ಹೋಗಿ ಹೆಗ್ಗಡೆಯವರೆ ಸಹಾಯಮಾಡಿ ಎಂದರೆ ಅವರಿಗೆ ಸಹಾಯ ಮಾಡುವುದಕ್ಕೆ ಶಕ್ತಿ ಇದೆ. ಆದರೆ ಇದಕ್ಕೆ ಏಕೆ ಮಾಡುವುದಿಲ್ಲ? ಅದೇ ರೀತಿ ದೊಡ್ಡಬಳ್ಳಾಪುರದಲ್ಲಿ ಪೊಟ್ಯಾಟೋ ಆಗಲಿ, ಮತ್ತೊಂದಾಗಲಿ ಇವುಗಳನ್ನು ಪ್ರೊಸೆಸ್‌ಮಾಡಿ ಎಕ್ಸ್‌ಪೋರ್ಟ್ ಮಾಡಲಿಕ್ಕೆ ಹತ್ತಿದರೆ ತಮಗೆ ಕೀರ್ತಿ ಬರುತ್ತದೆ. ಅಂತಹ ಕೀರ್ತಿಯನ್ನು ಪಡೆಯಿರಿ ಚಿತ್ರದುರ್ಗಕ್ಕೆ ಹೋದರೆ ಅಲ್ಲಿ ಅಂಥಾದ್ದು ಯಾವುದೂ ಇಲ್ಲ ತಿರುಗುಮುರುಗು ಮಾಡಿದರೂ ನಮ್ಮಲ್ಲಿ ಯಾವುದೇ ರೀತಿಯ ಪರಿಷ್ಕರಣವಿಲ್ಲ. ಮಾನ್ಯ ಅಶ್ವತ್ಥರೆಡ್ಡಿಯವರದು ಸ್ವಂತ ಮಿಲ್ ಇದೆಯೆಂದು ಹೇಳುತ್ತಾರೆ, ಅವರ ಸ್ವಂತ ಮಿಲ್ ಅಭಿವೃದ್ಧಿಯಾಗಲಿ, ಸಹಕಾರಿ ಮಿಲ್ಲನ್ನೂ ಕಟ್ಟಿದರೆ ಎಷ್ಟು ಅನುಕೂಲವಾಗುತ್ತದೆ. ಅದನ್ನು ಮಾಡುವುದಿಲ್ಲ. ನಮ್ಮ ಫೆಡರೇಷನ್‌ನವರು ಪೆಸ್ಟಿಸೈಡ್ಸ್, ಇನ್‌ಸೆಕ್ಟಿಸೈಡ್ಸ್ ತೆಗೆದುಕೊಳ್ಳಬೇಕಾದರೆ ತಮಗೆ ಗೊತ್ತಿದೆ ಟೆಂಡರ್ ಇಲ್ಲ, ಎಲ್ಲಾ ಹಾಗೇ ತೆಗೆದುಕೊಳ್ಳುತ್ತಾರೆ. ಸರ್ಕಾರದವರು ಒಂದು ಟೆಂಡರನ್ನು ಕರೆಯಲಿಲ್ಲ ಎಂದರೆ ಅದು ಬಯಲಿಗೆ ಬರುತ್ತದೆ. ಅದಕ್ಕೆ ನಮ್ಮ ಸ್ನೇಹಿತರು ಅನೇಕ ಜನರು ಹೇಳುತ್ತಾ ಇದ್ದಾರೆ. ಪಿ.ಎ.ಸಿ ನಲ್ಲೂ ಈ ವಿಷಯ ಬರುತ್ತದೆ. ಅಕೌಂಟೆಂಟ್ ಜನರಲ್‌ರವರ ತೀರ್ಪೂ ಇದೆ. ಇದಕ್ಕೆ ಮಾತ್ರ ನಾನು ವಿರೋಧವಿದ್ದೇನೆ. ನಾನೂ ಕೂಡ ಸಹಕಾರಿಯಾಗಿದ್ದೇನೆ. ಸಹಕಾರ ಸಂಘಗಳಿಗೆ ಕೆಟ್ಟಗಾಳಿ ಬರಬಾರದು. ಇದರ ಜೊತೆಗೆ ಸತ್ಯ ಪರಿಪಾಲನೆಯಾಗಬೇಕು. ಪ್ರಾಮಾಣಿಕವಾದ ಕೆಲಸ ಆಗಬೇಕು, ಪ್ರಾಮಾಣಿಕವಾದ ವ್ಯವಹಾರಗಳು ಆಗಬೇಕು. ತಾವು ಅನೇಕ ಸಂಸ್ಥೆಗಳಿಗೆ ಸೇಲ್ಸ್ ಆಫೀಸರ್ರನ್ನು ಕೊಟ್ಟಿದ್ದೀರಿ. ಅವರು ಕೆಲಸಮಾಡುವ ಹಾಗೆ ಸಂಘಗಳನ್ನು ವ್ಯವಸ್ಥೆಗೊಳಿಸಬೇಕು. ಸೇಲ್ಸ್ ಆಫೀಸರ್ ಇದ್ದಾಗ ಇಷ್ಟು ದಿವಸದಲ್ಲಿ ಇಷ್ಟು ಸೇಲ್ಸ್ ಆಗಬೇಕು, ಇಲ್ಲದೇಹೋದರೆ ನಿನ್ನನ್ನು ಮನೆಗೆ ಕಳಿಸುತ್ತೇವೆ ಎಂದು ಸರ್ಕ್ಯುಲರ್ ನಿಮ್ಮಿಂದ ಬಂದರೆ ಆಗ ಅವರಿಗೆ ಅಂಜಿಕೆ ಬರುತ್ತದೆ. ಅವನು ನಿಮ್ಮ ಕೈಯಲ್ಲಿರುತ್ತಾನೆ, ಪಗಾರ ಕೊಡುವವರು ನೀವು, ಅಧಿಕಾರ ಮಾಡುವವರು ನೀವು. ಒಮ್ಮೊಮ್ಮೆ ನಮ್ಮಲ್ಲಿರತಕ್ಕ ನೌಕರರಿಗೆ ಪಗಾರ ಕೊಡುತ್ತೇವೆ, ರಜಾ ಮಂಜೂರು ಮಾಡುತ್ತೇವೆ. ನಮ್ಮ ಮಾತು ಕೇಳದೇಹೋದರೆ ಭೀರ್ಮನ್ನರ ಗತಿ ಏನಾಗುತ್ತದೆ ಇವತ್ತಿಗೂ ತಡವಾಗಿಲ್ಲ, ನಿಮ್ಮದುರಿಗೆ ಇರತಕ್ಕಂಥ ಕೋಆಪರೇಷನ್ ಬಿಲ್ಲನ್ನು ಕನ್ಸಾಲಿಡೇಟ್‌ಮಾಡಿ, ಅವರ ಹೆಸರನ್ನು ಬಿಟ್ಟು ಬೇರೆ ಯಾರನ್ನಾದರೂ ನೇಮಿಸಿ, ಕಾನೂನನ್ನು ತೀವ್ರವಾಗಿ ಮಾಡಿ ಕರ್ನಾಟಕ ಇಡೀ ಭಾರತ ದೇಶಕ್ಕೆ ಸಹಕಾರ ಚಳುವಳಿಯಲ್ಲಿ ಮಾದರಿಯಾಗಿದೆ ಎಂದು ತೋರಿಸುತ್ತೀರಿ ಎಂದು ಆಶಿಸಿ, ನನಗೆ ಸಮಯ ಹೆಚ್ಚು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ, ಸಹಕಾರ ಇಲಾಖೆಯ ಬೇಡಿಕೆಯ ಬಗ್ಗೆ ಈಗಾಗಲೇ ಹತ್ತಾರು ಸದಸ್ಯರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಒಬ್ಬ ಸಹಕಾರಿ ಅನುಭವಿ ವ್ಯಕ್ತಿಗೆ ಇವೊತ್ತು ಮಂತ್ರಿ ಸ್ಥಾನ ದೊರೆತು ಈ ರಾಜ್ಯದ ರೈತರ ಹಿತವನ್ನು ಕಾಪಾಡುವುದರ ಜೊತೆಗೆ, ಸಹಕಾರಿ ಕ್ಷೇತ್ರವನ್ನು ಶುದ್ಧಿ ಮಾಡುವಂಥ ಪ್ರಾಮಾಣಿಕವಾದ ಪ್ರಯತ್ನವನ್ನು ಅವರು ಮಾಡುತ್ತಾರೆ ಎಂದು ನಾನು ಭಾವಿಸಿದ್ದೇನೆ. ಮಾನ್ಯ ಕೆ. ಹೆಚ್. ಪಾಟೀಲರು ಮಾತನಾಡಿದ ಮೇಲೆ ನನಗೆ ಅನ್ನಿಸಿತು, ಅನುಭವ ಇರುವಂಥ ವ್ಯಕ್ತಿಗಳು ಹಳೆಯ ನೆನಪುಗಳನ್ನು ಮಾಡಿಕೊಳ್ಳುತ್ತಾ ಇದರಲ್ಲಿ ಭ್ರಷ್ಟಾಚಾರ, ಅವ್ಯವಹಾರ ತಾಂಡವವಾಡುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಗ್ರಾಮಾಂತರ ಪ್ರದೇಶದ ಜನಜೀವನದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಒಂದು ಕ್ರಾಂತಿಕಾರಿ ಕೆಲಸವನ್ನು ಬಹಳ ವರ್ಷಗಳಿಂದ ಈ ಕ್ಷೇತ್ರ ಮಾಡುತ್ತಾ ಬಂದಿದೆ. ವಿಶೇಷವಾಗಿ ಉತ್ಪಾದನೆ ಮಾಡುವ ವ್ಯವಸ್ಥೆ, ಅದನ್ನು ವ್ಯವಸ್ಥಿತ ಬೆಲೆಗೆ ಮಾರಾಟ ಮಾಡುವ ವ್ಯವಸ್ಥೆ ಮತ್ತು ಅದನ್ನು ಗ್ರಾಹಕರಿಗೆ ತಲುಪಿಸುವ ಒಂದು ವ್ಯವಸ್ಥೆ—ಈ ಮೂರೂ ಈ ಒಂದು ಇಲಾಖೆಯಿಂದ ನಡೆಯುತ್ತಿದೆ. ಕಳೆದ ಎರಡೂವರೆ ವರ್ಷಗಳಲ್ಲಿ ರಾಜ್ಯದ ರೈತರ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಸರ್ಕಾರ ಸಾಕಷ್ಟು ಒಳ್ಳೆಯ ಕೆಲಸವನ್ನು ಮಾಡಿದೆ. ಇವೊತ್ತು ಬಡ್ಡಿ, ಚಕ್ರಬಡ್ಡಿ ಮನ್ನಾ ಮಾಡಿರುವುದು, ಸಮಯಕ್ಕೆ ಸರಿಯಾಗಿ ಸಾಲವನ್ನು ವಾಪಸ್ಸು ಕಟ್ಟತಕ್ಕವರಿಗೆ ೭ ಪರ್ಸೆಂಟ್ ಬಡ್ಡಿ ರಿಯಾಯಿತಿ ಕೊಟ್ಟಿರುವುದು, ಫೇಲ್ಯೂರು ಆದಂಥ ಬಾವಿಗಳಿಗೆ ಪರಿಹಾರ ಒದಗಿಸಿರುವುದು, ಈ ರೀತಿಯ ಮಹತ್ತರವಾದ ಕೆಲಸಗಳನ್ನು ಸರ್ಕಾರ ಮಾಡಿದೆ. ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಜಾಲಪ್ಪನವರು ಹಾಗೆಯೇ ಅವರ ಇತರ ಸ್ನೇಹಿತರೆಲ್ಲರೂ ಸೇರಿ ಒಳ್ಳೆಯ ಕೆಲಸವನ್ನು ಮಾಡಿದಂಥ ಸರ್ಕಾರ ಕೊನೆಯ ಗಳಿಗೆಯಲ್ಲಿ ರೈತನ ಜಮೀನನ್ನು ಹರಾಜು ಮಾಡಲಿಕ್ಕೆ ಜಿಲ್ಲಾಧಿಕಾರಿಗಳಿಗೆ ಏತಕ್ಕೆ ಅಧಿಕಾರ ಕೊಟ್ಟರು ಎನ್ನುವ ಬಗ್ಗೆ ನನಗೆ ಅನುಮಾನ ಇದೆ. ಇದರಿಂದ ರಾಜ್ಯದ ರೈತನಿಗೆ ತಮ್ಮ ಬಗ್ಗೆ ಇದ್ದಂಥ ಎಲ್ಲಾ ಸದ್ಭಾವನೆಯನ್ನು ಕಳೆದುಕೊಳ್ಳುವ ಪರಿಸ್ಥಿತಿ ಬರಬಹುದು. ಯಾರೋ ಒಬ್ಬಿಬ್ಬರೂ ಬೇರೆ ಬೇರೆ ಕಾರಣಕ್ಕೋಸ್ಕರ ಹಣ ಕಟ್ಟದೇ ಇದ್ದರೆ ಅವರ ಮನಸ್ಸನ್ನು ಒಲಿಸಿ ಸಾಲವನ್ನು ಕಟ್ಟಿಸುವಂತೆ ಮಾಡಬಹುದಾಗಿತ್ತು. ಈಗ ಇರತಕ್ಕ ಕಾನೂನಿನಲ್ಲಿಯೇ ಇದಕ್ಕೆ ಅವಕಾಶ ಇದೆ. ಆದ್ದರಿಂದ, ಈಗ ಇರತಕ್ಕದ್ದಕ್ಕೆ ತಿದ್ದುಪಡಿ ಮಾಡತಕ್ಕ ಅವಶ್ಯಕತೆ ಇರಲಿಲ್ಲ. ಇದರ ಬಗ್ಗೆ ನಾನು ಹಿಂದೆ ಪ್ರತಿಭಟನೆ ಕೂಡ ಮಾಡಿದ್ದೇನೆ. ಈಗಲೂ ಸಹ ನನ್ನ ಮನಸ್ಸಿನಲ್ಲಿರತಕ್ಕ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಸಹಕಾರ ತತ್ವ, ಜನಗಳಿಂದ, ಜನಕ್ಕೋಸ್ಕರ, ಜನಗಳಿಗಾಗಿ, ಒಂದು ವಿಚಾರದ ಮೇಲೆ ಕೆಲಸ ಮಾಡುತ್ತಾ ಇದೆ. ಈಗ ಮಾನ್ಯ ಪಾಟೀಲ್‌ರು, ಹಾಗೆಯೇ ಹಿರಿಯ ಸದಸ್ಯರು ಮಾತನಾಡಿದ್ದನ್ನು ನೋಡಿದರೆ ಇದು ರಾಜಕಾರಣಿಗಳಿಗೋಸ್ಕರ, ರಾಜಕಾರಣಿಗಳಿಗಾಗಿ ಇರುವಂಥಾದ್ದೇ, ಅಥವಾ ಅಧಿಕಾರಿಗಳಿಗೋಸ್ಕರ ಇರತಕ್ಕದ್ದೇ ಎಂದು ಅನುಮಾನ ಬರುತ್ತಿದೆ. ಇದರ ಬಗ್ಗೆ ನನ್ನ ಬಳಿ ಸಾಕಷ್ಟು ಮಾಹಿತಿ ಇದೆ, ಈಗ ಸಮಯದ ಅಭಾವ ಇರುವುದರಿಂದ ನಾನು ಅಷ್ಟು ಹೇಳಲಿಕ್ಕೆ ಹೋಗುವುದಿಲ್ಲ. ಈಗ ನಾವು ಇಲ್ಲಿ ೨೨೪ ಜನ ಸದಸ್ಯರು ಏನಿದ್ದೇವೆ, ನಮ್ಮೆಲ್ಲರ ಶಿಷ್ಯರೆ ಅಲ್ಲಿ ಕೆಲಸ ಮಾಡುತ್ತಿರುತ್ತಾರೆ. ಸಹಕಾರಿ ಕ್ಷೇತ್ರದಲ್ಲಿ ಅವ್ಯವಸ್ಥೆ ತಾಂಡವವಾಡುತ್ತಿದೆ. ಆದ್ದರಿಂದ, ನಾನು ಮಾನ್ಯ ಜಾಲಪ್ಪನವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಕಳೆದ ೨೫ ವರ್ಷಗಳಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ದುರುಪಯೋಗ ಮಾಡಿಕೊಂಡ ದೊಡ್ಡ ದೊಡ್ಡ ಸಂಘಸಂಸ್ಥೆಗಳು ಏನು ಇವೆ, ಆ ಸಂಘಸಂಸ್ಥೆಗಳ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸತಕ್ಕ ಪ್ರಾಮಾಣಿಕ ಪ್ರಯತ್ನ ಮಾಡಿ. ಈ ಸಂಘಸಂಸ್ಥೆಗಳಲ್ಲಿ ಇಲ್ಲಿಯವರು ಯಾರೇ ಇದ್ದರೂ, ಅಲ್ಲಿಯವರು ಯಾರೇ ಇದ್ದರೂ ಅದು ರಾಜ್ಯದ ಜನತೆಗೆ ತಮ್ಮ ಮುಖಾಂತರ ಗೊತ್ತಾಗಲಿ, ಅದು ಗೊತ್ತಾಗುವಂತೆ ಆದರೆ, ಆಗ ಅಲ್ಲಿರತಕ್ಕವರು ನಮ್ಮ ಮರ್ಯಾದೆ ಹೋಗಬಹುದೆಂದು, ಪ್ರಾಮಾಣಿಕವಾಗಿ ಕೆಲಸ ಮಾಡಬಹುದು, ಆ ದೃಷ್ಟಿಯಿಂದ ನಾನು ಇದರ ಬಗ್ಗೆ ಆಗ್ರಹಪಡಿಸುತ್ತೇನೆ, ಆದ್ದರಿಂದ, ಮಾನ್ಯ ಮಂತ್ರಿಗಳು ಒಂದು ಶ್ವೇತಪತ್ರವನ್ನು ಹೊರಡಿಸಬೇಕೆಂದು ನನ್ನ ವಿನಂತಿ, ಅಲ್ಲಿ ಯಾವ ಯಾವ ರೀತಿ ಅನ್ಯಾಯಗಳು ಆಗುತ್ತವೆ ಎಂದರೆ ಅಂಕಿಅಂಶಗಳನ್ನು ಪುಸ್ತಕದಲ್ಲಿ ತೆಗೆದು ನೋಡಿದ್ದೇನೆ. ತಮಗೆ ಒಂದು ಉದಾಹರಣೆ ಹೇಳಬೇಕೆಂದು ಮೈಸೂರಿನಲ್ಲಿರುವಂಥ ಜನತಾ ಬಜಾರಿನ ಒಬ್ಬರು ಅಧ್ಯಕ್ಷರು ದಿನಾಂಕ ೧-೧೦ ೧೯೮೩ರಲ್ಲಿ ಬೆಂಗಳೂರು ನ್ಯಾಷನಲ್ ಕೋಆಪರೇಟೀವ್ ಕನ್‌ಸ್ಯೂಮರ್ಸ್ ಫೆಡರೇಷನ್‌ನಲ್ಲಿ ಒಂದು ಲಕ್ಷದ ನಾಲ್ಕು ಸಾರು ನೈಲಾನ್ ಜಿಪ್ಪನ್ನು ಖರೀದಿ ಮಾಡಿದ್ದಾರೆ,

ಅಧ್ಯಕ್ಷರು ಇಲ್ಲಿಗೆ ಬಂದು ಖರೀದಿ ಮಾಡಿದರು, ಅವರು ಕೊಟ್ಟಂತಹ ಬೆಲೆ ಒಂದು ನೈಲಾನ್ ಜಿಪ್‌ಗೆ ಒಂದು ರೂಪಾಯಿ ೬೦ ಪೈಸೆ. ನಮ್ಮ ದೇಶದಲ್ಲಿ ತಯಾರು ಮಾಡುವ ಜಿಪ್ ಬೆಲೆ ಒಂದಕ್ಕೆ ಮೂರೇ ರೂಪಾಯಿ ೫೦ ಪೈಸೆ ಇತ್ತು. ಅವರು ಒಂದು ಲಕ್ಷದ ನಾಲ್ಕು ಸಾವಿರ ಜಿಪ್‌ಗಳನ್ನು ಬೆಂಗಳೂರಿನಲ್ಲಿಯೇ ಮಾರಿ ಒಂದೂವರೆಲಕ್ಷ ರೂಪಾಯಿಗಳ ಲಾಭವನ್ನು ತೆಗೆದುಕೊಂಡು ಹೋಗಿದ್ದಾರೆ. ಈ ವಿಷಯ ಸ್ಟಾರ್ ಆಫ್ ಮೈಸೂರು ಪತ್ರಿಕೆಯಲ್ಲಿ ಪ್ರಕಟವಾಗಿದೆ, ನ್ಯಾಷನಲ್ ಕೋ-ಆಪರೇಟಿವ್ ಕನ್‌ಸ್ಯೂಮರ್ಸ್ ಫೆಡರೇಷನ್ ಪ್ರೈವೇಟ್ ಲಿಮಿಟೆಡ್ ಇವರು ಒಂದು ಪತ್ರವನ್ನು ಚೀಫ್ ಎಕ್ಸಿಕ್ಯುಟೀವ್ ಆಫೀಸರ್‌ಗೆ ಬರೆಯುತ್ತಾ ಈ ರೀತಿ ಹೇಳುತ್ತಾರೆ. The Above items have been effected delivery in the presence of the president of your Association ಎಂದು ಬರೆಯುತ್ತಾರೆ. ಅಧ್ಯಕ್ಷರ ಸಮಕ್ಷಮವೇ, ಸಾಮಾನ್ಯ ಜನರಿಗೆ ವಿತರಣೆ ಮಾಡಬೇಕೆಂದು ಕೊಟ್ಟಂಥ ಜಿಪ್ಪನ್ನು ಲಾಭಕ್ಕೋಸ್ಕರ ಬೆಂಗಳೂರಿನಲ್ಲಿಯೇ ಮಾರಾಟವಾಗಿವೆ. ಈ ರೀತಿಯಲ್ಲಿ ಎಷ್ಟು ಪ್ರಕರಣಗಳು ಆಗಿರಬಹುದು? ಈ ರೀತಿ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿಗಳನ್ನು ಮುಳುಗಿಸಿದಂಥ ಸಂದರ್ಭದಲ್ಲಿ ಅವರು ಸಣ್ಣ ವ್ಯಕ್ತಿ ಇರಬಹುದು ಅಥವಾ ದೊಡ್ಡ ವ್ಯಕ್ತಿ ಇರಬಹುದು ಅವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಂಡಿದ್ದೀರಾ? ಆ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ನಮಗೆ ಸುದ್ದಿ ಸಿಕ್ಕಿದ ೨೪ ಗಂಟೆಯಲ್ಲಿ ನಮ್ಮ ಅಧಿಕಾರಿಗಳನ್ನು ಕಳುಹಿಸಿ ತಪಾಸಣೆ ಮಾಡಿ ಈಗಾಗಲೇ ಆ ಸಂಸ್ಥೆಯನ್ನು ಸೂಪರ್‌ಸೀಡ್ ಮಾಡಿದ್ದೇವೆ. ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಪ್ರೊಸೀಜರ್ ಪ್ರಕಾರ ಕ್ರಮ ತೆಗೆದುಕೊಳ್ಳಲಿಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅದಕ್ಕೆ ಧನ್ಯವಾದಗಳು, ಅದಕ್ಕೋಸ್ಕರವೇ, ಒಬ್ಬ ನಂಬಿಕಸ್ತ ವ್ಯಕ್ತಿಯ ಕೈಯಲ್ಲಿ ಸಹಕಾರ ಇಲಾಖೆ ಸಿಕ್ಕಿದೆ ಎಂದು ನಾನು ಮೊದಲೇ ಹೇಳಿದೆ, ತಮಗೆ ಮತ್ತೊಂದು ವಿಚಾರ ಹೇಳಬೇಕೆಂದರೆ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ ಸುಮಾರು ೬ ಸಾವಿರ ಚೀಲ ಭತ್ತ ಮಂಗಮಾಯವಾಯಿತು. ಇದರ ಬಗ್ಗೆ ಸಾಕಷ್ಟು ಪ್ರಸ್ತಾಪ ಕೂಡ ಆಯಿತು. ಇವೆಲ್ಲಾ ದೊಡ್ಡ ದೊಡ್ಡ ಘಟನೆಗಳು ಈ ರೀತಿಯಲ್ಲಿ ನಡೆದಿವೆ. ಆದ್ದರಿಂದ, ಮಾನ್ಯ ಜಾಲಪ್ಪನವರಲ್ಲಿ ವಿನಂತಿ ಏನೆಂದರೆ, ರಾಜ್ಯದ ರೈತನ ಬಗ್ಗೆ ಅವನ ಪರಿಸ್ಥಿತಿಯ ಬಗ್ಗೆ ಸ್ವಲ್ಪ ಅನುಕಂಪ ಇರಲಿ ಎಂದು. ಇದುವರೆಗೂ ನಾನು ಹಿಂದೆ ನಡೆದಂಥ ಹಳೆಯ ಘಟನೆಗಳನ್ನು ಹೇಳಿದ್ದೇನೆ. ಇಂತಹ ಘಟನೆಗಳ ಬಗ್ಗೆ ನಮ್ಮಂಥವರ ಕೈವಾಡ ಇರುತ್ತದೆ, ಅದಕ್ಕೋಸ್ಕರವೇ ನಾನು ತಮ್ಮಲ್ಲಿ ಒಂದು ಶ್ವೇತಪತ್ರ ಹೊರಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ರಾಜ್ಯದ ರೈತರನ್ನು ಅನುಕಂಪದಿಂದ ತಾವು ನೋಡಬೇಕು. ಅವನ ಪರಿಸ್ಥಿತಿಯನ್ನು ತಿಳಿದುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಬೇಕು. ಇವೊತ್ತು ಒಂದೆರಡು ಎಕರೆ ಇಟ್ಟುಕೊಂಡಿರತಕ್ಕ ರೈತ ಹಗಲು ರಾತ್ರಿ ಕೆಲಸ ಮಾಡಿದರೂ ದುಬಾರಿ ಗೊಬ್ಬರ ಕೊಂಡು ಕೊಂಡು, ಔಷಧಿ ಕೊಂಡುಕೊಂಡು, ಬೀಜ ಕೊಂಡುಕೊಂಡು, ೧೦–೧೨ ರೂಪಾಯಿಗಳ ಕೂಲಿ ಕೊಟ್ಟು ಹಗಲುರಾತ್ರಿ ಕೆಲಸ ಮಾಡಿದರೂ ಒಂದು ವರ್ಷಕ್ಕೆ ೫೦೦ ರೂಪಾಯಿಗಳ ಲಾಭ ಸಿಕ್ಕುವುದಿಲ್ಲ. ನಾನು ಒಬ್ಬ ರೈತ ೧೦–೧೫ ಎಕರೆ ಇಟ್ಟುಕೊಂಡಿದ್ದರೂ, ಬೇರೆ ಬೇರೆ ಕಾರಣಗಳಿಂದ ಅದು ಅತಿವೃಷ್ಟಿ ಅಥವಾ ಅನಾವೃಷ್ಟಿ ಇರಬಹುದು, ಸಾಲ ಕಟ್ಟಲಿಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ, ರೈತರ ಬಗ್ಗೆ ಯೋಚನೆ ಮಾಡಿ ಅನುಕಂಪದಿಂದ ನೋಡಬೇಕಾಗುತ್ತದೆ. ಈಗ ಯಾರೋ ಸಣ್ಣಪುಟ್ಟ ರೈತರು, ಹತ್ತಾರು ವರ್ಷದಿಂದ ಸಾಲ ಕಟ್ಟಿಲ್ಲ ಎಂದು ನಿಮ್ಮ ಲೆಕ್ಕದಲ್ಲಿ ಇದೆಯೋ ಅಂಥ ಸಾಲಗಾರರ ಬಗ್ಗೆ ತಮ್ಮ ಅಧಿಕಾರಿಗಳ ಮೂಲಕ ಅವನು ಸಾಲ ಪಡೆದಿರುವುದು ನಿಜವೇ, ಇಲ್ಲವೇ ಇದನ್ನು ಪರಿಶೀಲನೆ ಮಾಡಬೇಕು. ನಾನು ಸಹ ಸಹಕಾರಿ ಕ್ಷೇತ್ರದಲ್ಲಿ ಸಣ್ಣಪುಟ್ಟ ಕೆಲಸ ಮಾಡಿದ್ದೇನೆ. ನನ್ನ ಅನುಭವದಲ್ಲಿ ಹೇಳುವುದಾದರೆ, ಅಲ್ಲಿರತಕ್ಕ ಸೆಕ್ರೆಟರಿ, ರೆವಿನ್ಯೂ ಇನ್ಸ್‌ಪೆಕ್ಟರ್, ವಿಲೇಜ್ ಅಕೌಂಟೆಂಟ್ ಅವರೆಲ್ಲ ಒಂದೇ ಇರುತ್ತಾರೆ. ವಿಲೇಜ್ ಅಕೌಂಟೆಂಟ್ ಪಹಣಿ ಬರೆಯುತ್ತಾನೆ, ಹಾಗೆಯೇ ಎಲ್ಲಾ ಕೆಲಸವನ್ನು ಮಾಡುತ್ತಾನೆ. ಎಷ್ಟೋಸಂದರ್ಭಗಳಲ್ಲಿ ರೈತರು ಸಾಲ ತೆಗೆದುಕೊಳ್ಳದೇ ಇದ್ದರೂ ಅವರ ಹೆಸರಿನಲ್ಲಿ ಸಾಲದ ಲೆಕ್ಕ ತೋರಿಬಿಡುತ್ತಾರೆ. ಆ ರೈತನಿಗೆ ನೋಟೀಸ್ ಹೋದಾಗಲೇ ನನ್ನ ಹೆಸರಿನಲ್ಲಿ ಸಾಲವಾಗಿದೆ ಎಂದು ಗೊತ್ತಾಗುವುದು. ಈ ರೀತಿ ಎಷ್ಟೋ ಕಡೆ ನಡೆದಿದೆ. ತಮಗೆ ಒಂದು ಉದಾಹರಣೆ ಹೇಳಬೇಕೆಂದರೆ, ವ್ಯವಸಾಯಸೇವಾ ಸಹಕಾರ ಸಂಘ ನಿಯಮಿತ, ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಅಣ್ಣಿಗೇರಿ ಸಹಕಾರ ಸಂಘ ಇದರಲ್ಲಿ ಬೇನಾಮಿ ಸಾಲಗಾರರು ಬಹಳ ಇದ್ದಾರೆ ಒಂದೇ ಸಂಸಾರದಲ್ಲಿ ನಾಲ್ಕೈದು ಜನರಿಗೆ ಸಾಲ ಕೊಟ್ಟಿದ್ದಾರೆ ಅಲ್ಲದೇ ಒಂದೇ ವರ್ಷದಲ್ಲಿ ಎರಡು ಮೂರು ಸಾರಿ

ಸಾಲ ಕೊಟ್ಟಿದ್ದಾರೆ. ಕಾನೂನು ಪ್ರಕಾರ ಒಂದು ವರ್ಷದಲ್ಲಿ ಎರಡುಮೂರು ಸಾರಿ ಸಾಲ ಪಡೆಯಲಿಕೆ ಬರುವುದಿಲ್ಲ ತಮಗೆಉದಾಹರಣೆ ಹೇಳಬೇಕೆಂದರೆ ಪರಮೇಶ್ವರಯ್ಯ ಎಂಬುವವರು ಈಗ ಬದುಕಿಲ್ಲ ಅವರ ಹೆಸರಿನಲ್ಲಿ ಸಾಲದ ದಾಖಲೆಗಳು ಇವೆ. ೩೧-೩-೧೯೭೭ರಲ್ಲಿ ಒಂದು ಸಾರಿ ಇದೆ, ೨೯-೬-೭೭ರಲ್ಲಿ ಒಂದು ಸಾರಿ ಇದೆ, ೬-೫-೭೮ರಲ್ಲಿ ಒಂದು ಸಾರಿ ಇದೆ. ಒಬ್ಬನ ಹೆಸರಿನಲ್ಲಿ ಮೂರು ಸಾರಿ ಸಾಲದ ಲೆಕ್ಕ ಇದೆ. ಬದುಕಿದ್ದಾಗ ಒಂದು ಸಾರಿ ಕೊಟ್ಟರೆ ಸತ್ತಮೇಲೆ ಎರಡು ಸಾರಿ ಸಾಲ ಕೊಟ್ಟಿದ್ದಾರೆ.

೭-೦೦ ಪಿ. ಎಂ.

ಅಲ್ಲಿರುವಂತಹ ಈ ಸಂಘದ ಕಾರ್ಯದರ್ಶಿಯವರಾದ ವೈ. ಎಸ್. ನಾಗಪ್ಪ ಮತ್ತು ಅಧಿಕಾರಿಗಳು ಶಾಮೀಲಾಗಿ ಓದು ಬರಹ ಗೊತ್ತಿಲ್ಲದ ಪರಮೇಶ್ವರಯ್ಯನ ತಾಯಿ ಬಸಮ್ಮ ನಮ್ಮ ತಂದೆಯವರಾದ ಮರುಳಸಿದ್ಧಯ್ಯ ನಮ್ಮ ತಾತ ೯೮ ವರ್ಷ ವಯಸ್ಸಿನ ಕಣ್ಣು ಕಾಣದ ಮುದುಕ ನಂಜಯ್ಯ ಅವರುಗಳ ಬೇನಾಮಿ ಹೆಸರಿನಲ್ಲಿ ಸಾಲ ತೆಗೆಯಲಾಗಿದೆ ಎಂದು ಶಿವಾನಂದ ಅವರು ಹೇಳಿಕೆ ಕೊಟ್ಟಿದ್ದಾರೆ. ಏಪ್ರಿಲ್ ೨೧ನೇ ತಾರೀಖು ಲಂಕೇಶ್ ಪತ್ರಿಕೆಯಲ್ಲಿಯೂ ಇದು ಬಂದಿದೆ. ಬೇರೆ ಬೇರೆ ಪತ್ರಿಕೆಗಳಲ್ಲೂ ಸಹ ಬಂದಿದೆ. ಅವರು ಸಂಬಂಧಪಟ್ಟ ಅಧಿಕಾರಿಗಳನ್ನು ಸಹ ಭೇಟಿ ಮಾಡಿದ್ದಾರೆ. ಇಷ್ಟೆಲ್ಲಾ ಆಗಿದ್ದರೂ ನಾನು ಏತಕ್ಕೆ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನಿರಪರಾಧಿಯಾದ ಯುವಕ ಕೆಲಸವನ್ನು ಬಿಟ್ಟು ತನ್ನ ಸಂಸಾರವನ್ನು ಉಳಿಸಿಕೊಳ್ಳುವುದಕ್ಕೆ ಊರಿಗೆ ವಾಪಸ್ಸು ಬಂದು ಕೇಸುಗಳಿಗೆ ಅಟೆಂಡ್ ಮಾಡುತ್ತಿದ್ದಾರೆ. ಫಾಲ್ಸ್ ರಿಪೋರ್ಟ್‌ಗಳ ಬಗ್ಗೆ ತನಿಖೆ ಮಾಡುತ್ತಿದ್ದಾರೆ. ಅಲ್ಲಿರುವ ಕಾರ್ಯದರ್ಶಿಗಳ ಮೇಲೆ ಇದುವರೆಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಈ ತರಹ ಉದಾಹರಣೆಗಳು ನೂರಾರು ಇವೆ. ಅದಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಸಾಲವನ್ನು ಕೊಟ್ಟಿದ್ದೇವೆಂದು ಏನು ಪಟ್ಟಿಯನ್ನು ಇಟ್ಟುಕೊಂಡಿದ್ದೀರಿ ಅದನ್ನು ತನಿಖೆಮಾಡಿ ಎಷ್ಟು ಜನ ನಿಜವಾಗಿಯೂ ಸಾಲಗಾರರಾಗಿ ಉಳಿದಿದ್ದಾರೆ ಅದರ ಬಗ್ಗೆ ವಿಮರ್ಶೆಮಾಡಿ ಸಾಲ ಕೊಡಬೇಕಾದವರ ಬಗ್ಗೆ ಈ ವರ್ಷ ನೀವು ಏನಾದರೂ ಕನ್ಸೆಷನ್ ಕೊಡಬೇಕು. ದೊಡ್ಡ ರೈತರಿಗೆ ಸೌಲಭ್ಯ ಕೊಡಿ ಎಂದು ನಾನು ಹೇಳುವುದಿಲ್ಲ. ತಾವು ಕೊಟ್ಟಿರುವ ಸಹಕಾರ ಇಲಾಖೆ ವಾರ್ಷಿಕ ವರದಿ ಪುಟ-೩ರಲ್ಲಿ ಸದಸ್ಯತ್ವದ ಸಂಖ್ಯೆ ೧೯೮೧ ರಿಂದ ೧೯೮೪ರವರೆಗೆ ಏನು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೀರಿ ಅದರಲ್ಲಿ ೧೯೮೧ ರಿಂದ ೧೯೮೪ವರೆಗೆ ೯೬.೪೫ ಲಕ್ಷ ಜನ ಸದಸ್ಯರಾಗಿದ್ದಾರೆ. ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸದಸ್ಯರಾಗುತ್ತಿಲ್ಲ ಎನ್ನುವುದನ್ನು ಈ ಅಂಕಿಅಂಶಗಳನ್ನು ನೋಡಿದಾಗ ಗೊತ್ತಾಗುತ್ತದೆ. ದಯಮಾಡಿ ಸಹಕಾರಿ ಚಳುವಳಿಯ ಉದ್ದೇಶವನ್ನು ಅರ್ಥಮಾಡಿಕೊಂಡು ಸಾಮಾನ್ಯ ಜನರು ಬಂದು ಸೌಲಭ್ಯವನ್ನು ಸಹಕಾರಿ ಸಂಸ್ಥೆಗಳ ಮೂಲಕ ಪಡೆಯುವುದರ ಕಡೆಗೆ ತಾವು ಗಮನ ಕೊಡಬೇಕು,

ವಿಶೇಷ ಘಟಕ ಯೋಜನೆಯಲ್ಲಿ ತಾವು ಹಣವನ್ನು ಯಾವರೀತಿ ಖರ್ಚುಮಾಡಿದ್ದೀರಿ ಅದನ್ನು ಹೇಳಿದ್ದೀರಿ. ವಿಶೇಷ ಘಟಕ ಯೋಜನೆಯಿಂದ ಹಿಂದುಳಿದ ಹರಿಜನ ಗಿರಿಜನರಿಗೆ ಹೆಚ್ಚು ಸೌಲಭ್ಯ ಸಿಗಬೇಕಾಗಿದೆ. ವಿಶೇಷ ಘಟಕ ಯೋಜನೆಯ ಬಗ್ಗೆ ೧೯೮೦-೮೧, ೧೯೮೧-೮೨, ೧೯೮೨-೮೩ ಮತ್ತು ೧೯೮೩-೮೪ರ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಉಪಯೋಜನೆಯ ನಿಗದಿತ ಮೊತ್ತ ೮೦೦.೦೦ ಲಕ್ಷ ಹಾಗೂ ರೂಪಾಯಿಗಳ ೧೧.೨೫ ಲಕ್ಷ ರೂಪಾಯಿಗಳಿದ್ದು ಪರಿಷ್ಕೃತ ನಿಗದಿ ಮತ್ತು ವೆಚ್ಚಗಳನ್ನು ಕೊಟ್ಟಿದ್ದೀರಿ. ಆದರೆ ತಾವು ನಿಗದಿ ಮಾಡಿರತಕ್ಕದ್ದು ನಾಲ್ಕು ವರ್ಷಗಳಿಗೆ ೪೦೫.೫೪ ಲಕ್ಷ ರೂಪಾಯಿಗಳು, ಆದರೆ ನೀವು ನಾಲ್ಕು ವರ್ಷಗಳಲ್ಲಿ ಖರ್ಚು ಮಾಡಿರತಕ್ಕದ್ದು ೨೬೭ ೪೭ ಲಕ್ಷ. ಈ ರೀತಿಯ ವ್ಯತ್ಯಾಸ ಏತಕ್ಕೆ ಆಗುತ್ತದೆಯೋ ನನಗೆ ಗೊತ್ತಿಲ್ಲ. ೧೯೮೩-೮೪ರಲ್ಲಿ ೧೨೭ ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದರೆ ನೀವು ವೆಚ್ಚ ಮಾಡಿರತಕ್ಕದ್ದು ಕೇವಲ ೧೦೨.೬೬ ಲಕ್ಷ ರೂಪಾಯಿಗಳು. ವಿಶೇಷ ಘಟಕ ಯೋಜನೆಯಲ್ಲಿ ತಾವು ಬಡವರಿಗಾಗಿ ಇಟ್ಟುಕೊಂಡಿರತಕ್ಕ ಹಣವನ್ನು ಬಡವರಿಗಾಗಿ ಖರ್ಚು ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ನೀವು ಮಾಡಿಲ್ಲ. ಕೊಟ್ಟ ಹಣವನ್ನು ವಿತರಣೆ ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಿಮ್ಮ ಅಧಿಕಾರಿಗಳು ಮಾಡಿಲ್ಲ. ಇದರ ಕಡೆಗೆ ತಾವು ಹೆಚ್ಚು ಗಮನ ಕೊಡಬೇಕು,

ಅರ್ಬಿಟ್ರೇಷನ್‌ಗೆ ಬಂದು ತೀರ್ಮಾನವಾಗದೇ ಇರುವಂತಹ ಕೇಸುಗಳು ೩೧-೩-೧೯೮೪ಕ್ಕೆ ೧೯,೬೦೦ ಕೇಸುಗಳು. ವಿಲೇವಾರಿ ಆಗದೇ ಉಳಿದಿರತಕ್ಕ ಅರ್ಜಿಗಳು ೩ ಲಕ್ಷದ ೨೯ ಸಾವಿರದ ೪೬೬

ಇವೆಯೆಂದು ಹೇಳಿದ್ದಾರೆ. ನಿಮ್ಮ ಅಂಕಿಅಂಶಗಳನ್ನು ಒಂದು ಸಾರಿ ನೋಡಿದರೆ ಭಯವಾಗುತ್ತದೆ. ರೈತರ ಗತಿ ಏನು ? ತೆಗೆದುಕೊಂಡಂತಹ ಸಾಲವನ್ನು ಪ್ರಾಮಾಣಿಕವಾಗಿ ಕೊಟ್ಟಿದ್ದರೂ ಸಹ ಜಮಾ ಮಾಡಿಕೊಂಡಿಲ್ಲ. ಶಿಕಾರಿಪುರ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಇರಬಹುದು, ಸೊರಬದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಇರಬಹುದು ತಮ್ಮದೇ ಆದಂತಹ ರಶೀತಿಯನ್ನು ಕೊಟ್ಟು, ಕೊಟ್ಟ ಹಣವನ್ನು ಬ್ಯಾಂಕ್‌ಗಳಿಗೆ ಜಮಾ ಮಾಡದೇ ಇರತಕ್ಕ ನಿದರ್ಶನಗಳಿವೆ. ನಮ್ಮ ತಾಲ್ಲೂಕಿನಲ್ಲಿ ನಡೆದಿರತಕ್ಕದ್ದು ನಮ್ಮ ಕಣ್ಣು ಮುಂದೆ ಇದೆ. ಈ ತರಹ ಸಾವಿರಾರು ಸಂಖ್ಯೆಯಲ್ಲಿ ರಾಜ್ಯದ ಎಲ್ಲಾ ಕಡೆಗಳಲ್ಲಿ ನಡೆಯುತ್ತಿದೆಯೋ ಏನೋ ಗೊತ್ತಿಲ್ಲ ತಾವು ಪ್ರಾಮಾಣಿಕವಾಗಿ ಎರಡು ಕೆಲಸವನ್ನು ಮಾಡಿದ್ದೀರಿ, ಈಗ ನೀವು ಮಾಡಬೇಕಾದದ್ದು ೨೫ ವರ್ಷಗಳಲ್ಲಿ ಆಗಿರುವಂತಹ ಭ್ರಷ್ಟಾಚಾರ ಸಹಕಾರ ಸಂಘಗಳಲ್ಲಿ ಏನು ಆಗಿದೆ. ಇದಕ್ಕೆ ಹಿನ್ನಲೆ ಯಾರು ? ಅದರ ಬಗ್ಗೆ ಶ್ವೇತಪತ್ರ ಹೊರಡಿಸಿ. ಸಾವಿರಾರು ಸಣ್ಣ ರೈತರು ಇದ್ದಾರೆ. ನಾನು ಸ್ವತಃ ಹತ್ತಾರು ಕೇಸುಗಳನ್ನು ನೋಡಿದ್ದೇನೆ. ನೂರಕ್ಕೆ ಸುಮಾರು ೩೦-೪೦ ಜನ ಸಾಲ ಪಡೆಯದೇ ಇರತಕ್ಕವರು ಅವರ ಹೆಸರಿನಲ್ಲಿ ಸಾಲ ಉಳಿದಿರತಕ್ಕ ಒಂದೆರಡು ಉದಾಹರಣೆಗಳನ್ನು ನಾನು ಕೊಟ್ಟಿದ್ದೇನೆ. ಇದರ ಬಗ್ಗೆ ಸಮಗ್ರವಾದಂತಹ ತನಿಖೆಯನ್ನು ಮಾಡಿ, ನಿರಪರಾಧಿ ರೈತರು ಒಂದೆರಡು ಎಕರೆ ಭೂಮಿಯನ್ನು ಇಟ್ಟುಕೊಂಡಿರತಕ್ಕವರು ಅವರಿಗೆ ಹೆಚ್ಚಿನ ಸೌಲಭ್ಯವನ್ನು ಸಹಕಾರಿ ಕ್ಷೇತ್ರದಲ್ಲಿ ದೊರೆಯುವಂತೆ ಮಾಡಬೇಕು. ಪಿ.ಎ.ಎಸ್.ಸಿ.ಎಸ್. ಇವತ್ತು ಹಾಳಾಗಿ ಹೋಗುತ್ತಾ ಇದೆ. ಒಳ್ಳೆಯ ಕೆಲಸ ಮಾಡಬೇಕೆನ್ನುವ ತರುಣರು ಇವತ್ತು ಸಹಕಾರ ಸಂಸ್ಥೆಗಳಲ್ಲಿ ಇದ್ದಾರೆ. ಹಿಂದೆ ಯಾರೋ ತಿಂದು ಹಾಕಿ ಇವತ್ತು ಅಲ್ಲಿ ಏನೂ ಇಲ್ಲದಹಾಗೆ ಮಾಡಿದ್ದಾರೆ ಸಣ್ಣಪುಟ್ಟ ಸೌಲಭ್ಯಗಳನ್ನು ಕೊಡಿಯೆಂದು ನಮ್ಮ ರೈತರು ಬಂದರೆ ಏನೂ ಸೌಲಭ್ಯ ದೊರೆಯುತ್ತಿಲ್ಲ. ರೈಸ್ ಮಿಲ್ ಇದೆ ಅಕ್ಕಿ ಸಂಗ್ರಹ ಮಾಡುತ್ತಿದ್ದಾರೆ. ಪಡಿತರ ವ್ಯವಸ್ಥೆ ಮೂಲಕ ಅಕ್ಕಿ ಸಕ್ಕರೆ ವಿತರಣೆ ಮಾಡುತ್ತೇವೆ ನಮಗೆ ಒಂದೆರಡು ಲಕ್ಷ ರೂಪಾಯಿಗಳ ಸಾಲ ಕೊಡಿಯೆಂದು ಕೇಳಿದರೆ ನಮಗೆ ಹಣದ ತೊಂದರೆ ಇದೆಯೆಂದು ಅವರು ಹೇಳುತ್ತಾರೆ. ಇವೊತ್ತು ಸೊಸೈಟಿಗಳು ಉಳಿಯಬೇಕೆನ್ನುವ ತಮ್ಮ ಅಪೇಕ್ಷೆ ಇದ್ದರೆ ಹಣದ ಸೌಲಭ್ಯವನ್ನು ಮಾಡಿಕೊಡಬೇಕು. ಹಿಂದೆ ಕಷ್ಟಪಟ್ಟು ಕಟ್ಟಿರತಕ್ಕ ಸಂಸ್ಥೆಗಳು ಉಳಿಯಬೇಕೆಂದು ವಿನಂತಿ ಮಾಡಿಕೊಂಡು ಈ ಸಂದರ್ಭದಲ್ಲಿ ನಾನು ಒಂದೆರಡು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶಕೊಟ್ಟ ಅಧ್ಯಕ್ಷರಿಗೆವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಎನ್. ಎಸ್. ಖೇಡ್‌ರವರು ಮಾತನಾಡಲು ಇಲ್ಲದಿರುವುದರಿಂದ. ಮಾನ್ಯ ಸದಸ್ಯರಾದ ಕೆ ಬಿ. ಕೋಳಿವಾಡರವರು ಮಾತನಾಡಿ, ನಿಮ್ಮ ಪಕ್ಷದ ಕೆ.ಎಚ್. ಪಾಟೀಲರು ಬಹಳಷ್ಟು ಹೇಳಿದ್ದಾರೆ ತಾವು ಬೇಗ ಮುಗಿಸಬೇಕು.

† ಶ್ರೀ ಕೆ.ಬಿ. ಕೋಳಿವಾಡ (ರಾಣಿಬೆನ್ನೂರು).—ಮಾನ್ಯ ಅಧ್ಯಕ್ಷರೆ, ಸಹಕಾರಿ ಇಲಾಖೆಯ ಬೇಡಿಕೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೋಆಪರೇಟಿವ್ ಸ್ಪಿನ್ನಿಂಗ್ ಮಿಲ್‌ಗಳ ಬಗ್ಗೆ ಮೊದಲು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ನೆರೆಯ ರಾಜ್ಯವಾದ ಮಹಾರಾಷ್ಟ್ರಕ್ಕೆ ನಮ್ಮ ರಾಜ್ಯವನ್ನು ನಾವು ತುಲನೆ ಮಾಡಿ ನೋಡಿದಾಗ, ಅಲ್ಲಿ ಆಗತಕ್ಕಂತಹ ನೂಲಿನ ಗಿರಣಿಗಳು, ಅಲ್ಲಿ ಬೆಳೆಯುತಕ್ಕ ಹತ್ತಿ ಅದನ್ನು ನಮ್ಮ ರಾಜ್ಯಕ್ಕೆ ತುಲನೆಮಾಡಿ ನೋಡಿದಾಗ ಮಹಾರಾಷ್ಟ್ರಕ್ಕಿಂಥ ಎಷ್ಟೋ ಪಟ್ಟು ಹೆಚ್ಚಿನ ಪ್ರಮಾಣದಲ್ಲಿ ಹತ್ತಿಯನ್ನು ತಾವು ಬೆಳೆಯುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಬೆಳೆಯುತಕ್ಕ ಹತ್ತಿ ಮಹಾರಾಷ್ಟ್ರ ರಾಜ್ಯಕ್ಕೆ ವಲಸೆ ಹೋಗತಕ್ಕದ್ದನ್ನು ನೋಡಿದರೆ ಅದು ಬಹಳ ದುರಾದೃಷ್ಟಕರ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯಸರ್ಕಾರ ನ್ಯಾಷನಲ್ ಕೋ-ಆಪರೇಟಿವ್ ಕಾರ್ಪೊರೇಷನ್ ಅನ್ನು ಅಪ್ರೋಚ್ ಮಾಡಿದ್ದು ಬಹಳ ತಡವಾಗಿ ಮಾಡಿದ್ದರಿಂದ ೧೯೮೩-೮೪ರಲ್ಲಿ ಕೇವಲ ಎರಡು ಮಿಲ್‌ಗಳನ್ನು ಪಡೆಯುತಕ್ಕ ಪರಿಸ್ಥಿತಿ ಬಂತು. ಆದರೆ ಮಹಾರಾಷ್ಟ್ರದವರು ೧೧ ಮಿಲ್‌ಗಳನ್ನು ಅದೇ ಎನ್.ಸಿ.ಡಿ.ಸಿ.ಯಿಂದ ಕ್ಲಿಯರ್ ಮಾಡಿಕೊಳ್ಳತಕ್ಕ ಪರಿಸ್ಥಿತಿ ಬಂತು. ನಾನು ಸಹಕಾರ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಎನ್.ಸಿ.ಡಿ.ಸಿಯವರು ಕ್ಲಿಯರ್ ಮಾಡದಿದ್ದರೂ ನಮ್ಮ ರಾಜ್ಯಸರ್ಕಾರ ಧೈರ್ಯಮಾಡಿ ಗಿರಣಿಗಳನ್ನು ಸ್ಥಾಪನೆ ಮಾಡಬೇಕಾಗಿತ್ತು. ನಾಲ್ಕು ವರ್ಷಗಳ ನಂತರ ಕ್ಲಿಯರ್ ಮಾಡಿಕೊಳ್ಳಬಹುದಾಗಿತ್ತು.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಹಾರಾಷ್ಟ್ರದವರು ಎನ್.ಸಿ.ಡಿ.ಸಿ.ಯವರು ಕ್ಲಿಯರ್ ಮಾಡದೇ ಹೋದರೂ ೧೯ ಮಿಲ್‌ಗಳನ್ನು ಶುರುಮಾಡಿ ಅವುಗಳಿಗೆ ಅಪೆಕ್ಸ್ ಬ್ಯಾಂಕುಗಳ ಮುಖಾಂತರ ಹಣವನ್ನು ಕೊಟ್ಟು ಸಹಕಾರ ಸಂಘಗಳ ನೂಲಿನ ಗಿರಣಿಗಳನ್ನು ಮಹಾರಾಷ್ಟ್ರದಲ್ಲಿ ಮಾಡಿರತಕ್ಕದ್ದನ್ನು ನಾವು ಕಾಣುತ್ತಿದ್ದೇವೆ ಅಂತಹ ಧೈರ್ಯವನ್ನು ನಮ್ಮ ಸಹಕಾರ ಮಂತ್ರಿಗಳು ಮಾಡಿದರೆ ನಮ್ಮ ರಾಜ್ಯದಲ್ಲಿ ಬೆಳೆಯತಕ್ಕ ಹತ್ತಿಯನ್ನು ನಾವೇ ಸಂಸ್ಕರಣ ಮಾಡಿದರೆ ಹತ್ತಿ ಬೆಳೆಯುತಕ್ಕ ರೈತರಿಗೆ ಯೋಗ್ಯವಾದ ಬೆಲೆಯನ್ನು ಕೊಡತಕ್ಕ ಪರಿಸ್ಥಿತಿ ನಮ್ಮ ರಾಜ್ಯದಲ್ಲೂ ಬರಬಹುದು ಎಂದು ತಮ್ಮ ಮುಖಾಂತರ ಸಹಕಾರ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಬಡ್ಡಿಯನ್ನು ಸೂಟಿ ಬಿಟ್ಟಿದ್ದೇವೆ, ಸುಸ್ತಿ ಬಡ್ಡಿಯನ್ನು ಸೂಟಿ ಬಿಟ್ಟಿದ್ದೇವೆಂದು ಹೇಳಿದ್ದಾರೆ. ಅದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿಯವರಗೆ ಸೂಟಿ ಬಿಟ್ಟಿರತಕ್ಕ ಸುಸ್ತಿಬಡ್ಡಿ ಸಹಕಾರಸಂಘಗಳಿಗೆ ಮುಟ್ಟಿಲ್ಲ. ಅನೇಕ ಸಹಕಾರ ಸಂಸ್ಥೆಗಳಿಗೆ ಮುಟ್ಟಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ತಾವು ಸೂಟಿ ಬಿಟ್ಟಿದ್ದೇವೆಂದು ಕೆಲವು ದಿವಸಗಳ ಹಿಂದೆ ಹೇಳಿದ್ದೀರಿ. ಇಲ್ಲಿಯವರೆಗೆ ಅದು ಅನೇಕ ಸಹಕಾರ ಸಂಘಸಂಸ್ಥೆಗಳಿಗೆ ಮುಟ್ಟಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯಸದಸ್ಯರು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ಹೇಳುವುದಾದರೆ ಜೂನ್ ೨೮, ೨೯ನೇ ತಾರೀಖು ಪ್ರತಿಯೊಂದು ಸೊಸೈಟಿಗಳಿಗೆ ಕೊಡಲಿಕ್ಕೆ ಜಿಲ್ಲಾ ಬ್ಯಾಂಕುಗಳಿಗೆ ಹಣವನ್ನು ಕೊಡಲಾಗಿದೆ. ಒಂದು ಕಾಸೂ ಕೂಡ ಬಾಕಿ ಇಲ್ಲ. ಒಂದು ಒಂದೂವರೆ ಕೋಟಿ ರೂಪಾಯಿಗಳನ್ನು ಜಾಸ್ತಿ ಡ್ರಾಮಾಡಿ ಪುನಃ ವಾಪಸ್ಸು ಕೊಡುತ್ತಿದ್ದೇವೆ.

ಶ್ರೀ ಕೆ. ಬಿ. ಕೋಳಿವಾಡ್.—ಸುಸ್ತಿ ಬಡ್ಡಿಯನ್ನು ಒಂದು ವರ್ಷದ ಕಾಲ ಮತ್ತೆ ಸಲ್ಲಿಸಿರುವುದಕ್ಕಾಗಿ ಮಾನ್ಯ ಸಹಕಾರ ಸಚಿವರನ್ನು ಸಹಕಾರಿ ಸಂಘಗಳ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸಹಕಾರಿ ಸಂಘದಲ್ಲಿ ನಾಮಿನೇಷನ್ ಮಾಡುವುದಾಗಲಿ ಅಥವಾ ಸೂಪರ್‌ಸೀಡ್ ಮಾಡುವುದಾಗಲಿ ಸರಿಯಾದುದಲ್ಲ, ಸೂಪರ್‌ಸೀಡ್ ಮಾಡಿರುವಂತಹ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಜಿಲ್ಲಾ ಬ್ಯಾಂಕನ್ನು ಸೂಪರ್‌ಸೀಡ್ ಮಾಡಿ ಜಿಲ್ಲಾಧಿಕಾರಿಗಳ ಕೈಗೆ ಕೊಟ್ಟಿದ್ದೀರಿ. ಜಿಲ್ಲಾಧಿಕಾರಿಗಳಿಗೆ ಸಹಕಾರಿ ಕ್ಷೇತ್ರದಲ್ಲಿ ಎಳ್ಳಷ್ಟು ಜ್ಞಾನ ಇಲ್ಲವೆಂದು ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ. ಅವರ ಬದಲು ಸಹಕಾರಿ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿದಂತಹವರ ಕೈಯ್ಯಲ್ಲೇ ಇದನ್ನು ಕೊಡಬಹುದಿತ್ತು. ಇನ್ನು ಕೆಲವೇ ದಿವಸಗಳಲ್ಲಿ ಚುನಾವಣೆ ನಡೆಯಬೇಕಾಗಿದ್ದರೂ ಸಹ ಆ ಬ್ಯಾಂಕಿನಲ್ಲಿರತಕ್ಕಂತಹ ಸಿಬ್ಬಂದಿಯನ್ನು ವರ್ಗ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇನ್ನು ೧೫–೨೦ ದಿವಸಗಳಲ್ಲಿ ಅಥವಾ ಒಂದು ತಿಂಗಳಲ್ಲಿ ಚುನಾವಣೆ ನಡೆಯತಕ್ಕಂತಹ ಈ ಬ್ಯಾಂಕಿನಲ್ಲಿ ಅಧಿಕಾರಿಗಳನ್ನು ವರ್ಗ ಮಾಡುವಂತಹ ಕೆಲಸವನ್ನು ಜಿಲ್ಲಾಧಿಕಾರಿಗಳು ಮಾಡುತ್ತಿದ್ದಾರೆ. ಯಾವ ಸೊಸೈಟಿ ಮತದಾನ ಮಾಡುವುದಕ್ಕೆ ಎಲಿಜಬಿಲಿಟಿ ಇದೆ ಅವುಗಳನ್ನು ಎಲಿಜಬಿಲಿಟಿಯಿಂದ ತೆಗೆಯಬೇಕೆನ್ನುವ ಪ್ರಯತ್ನ ನಡೆಯುತ್ತದೆ. ರಾಣೆಬೆನ್ನೂರು ತಾಲ್ಲೂಕಿನಲ್ಲಿ ೧೪ ಸೊಸೈಟಿಗಳನ್ನು ಎಲಿಜಬಿಲಿಟಿಯಿಂದ ಅವುಗಳನ್ನು ಯಾವ ರೀತಿ ತೆಗೆಯಬೇಕೆಂಬ ಪ್ರಯತ್ನ ನಡೆಯುತ್ತಿದೆ. ಈ ರೀತಿಯ ಅನ್ಯಾಯ ಸಹಕಾರಿ ಕ್ಷೇತ್ರದಲ್ಲಿ ಆಗಬಾರದು. ನ್ಯಾಯವಾಗಿ ಎಲಿಜಬಿಲಿಟಿ ಇರುವಂತಹ ಸೊಸೈಟಿಗಳು ತಮ್ಮ ಮತವನ್ನು ಹಾಕತಕ್ಕದ್ದನ್ನು ತಪ್ಪಿಸುವಂತಹ ಪ್ರಯತ್ನ ಯಾರೇ ಆಗಿರಲಿ ಮಾಡಬಾರದು ಎಂಬುದು ನನ್ನ ಸೂಚನೆ.

ಶ್ರೀ ಆರ್. ಎಲ್. ಜಾಲಪ್ಪ.—ಕೆಲವು ದಿನಗಳ ಹಿಂದೆ ಇನ್‌ಸ್ಪೆಕ್ಷನ್ ಮಾಡಿ ಒಂದು ವರದಿಯನ್ನು ನಿಮ್ಮ ಬ್ಯಾಂಕಿನ ಬಗ್ಗೆ ಕೊಟ್ಟಿದ್ದಾರೆ. ಅದನ್ನು ಬೇಕಾದರೆ ಪ್ರೈವೇಟ್ ಆಗಿ ಕೊಡುತ್ತೇನೆ. ಓದಿನೋಡಿ. ಆಗಬಾರದ ಅನಾಹುತವೆಲ್ಲಾ ಆಗಿದೆ. ಕೋರ್ಟಿಗೆ ಹೋಗಿರುವಂತಹದ್ದು ಸುಮ್ಮನೆ ಕಾರಣಕ್ಕಾಗಿಯಲ್ಲ. ಅಲ್ಲಿ ನಮ್ಮವರು ಸರಿಯಾಗಿ ವಾದ ಮಾಡದೇ ಕೋರ್ಟಿನಲ್ಲಿ ಕೇಸು ಇದೆ. ರಿಸರ್ವ್ ಬ್ಯಾಂಕಿನವರು ಇತ್ತೀಚೆಗೆ ಆ ಬ್ಯಾಂಕಿನ ಬಗ್ಗೆ ವರದಿ ಮಾಡಿದ್ದಾರೆ. ತಮಗೆ ಕೊಡುತ್ತೇನೆ. ಒಂದು ಸಾರಿ ತಾವು ನೋಡಿ.

ಶ್ರೀ ಕೆ. ಬಿ. ಕೋಳಿವಾಡ್.—ಸೂಪರ್‌ಸೀಡ್ ತಪ್ಪು ಎಂದು ನಾನು ಹೇಳುತ್ತಿಲ್ಲ. ಆದರೆ ತಾವು ನೇಮಿಸತಕ್ಕ ಅಡ್ಮಿನಿಸ್ಟ್ರೇಟರ್ ಎಂತಹವರು ಇರಬೇಕು ಎಂದರೆ, ಈ ಸಹಕಾರಿ ಕ್ಷೇತ್ರದಲ್ಲಿ ಅನುಭವ ಇರತಕ್ಕಂತಹವರು ಯಾರನ್ನಾದರೂ ಹಾಕಿ. ಅದಕ್ಕೆ ನಮ್ಮ ಅಬ್ಜೆಕ್ಷನ್ ಇಲ್ಲ. ನಿಮ್ಮ ಪಕ್ಷದವರನ್ನೇ

ಹಾಕಿ ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ಸಹಕಾರಿ ಕ್ಷೇತ್ರದಲ್ಲಿ ಯಾವುದೇ ರೀತಿಯ ಜ್ಞಾನ ಇಲ್ಲದೇ ಇರುವಂತಹ ಒಬ್ಬ ಐ.ಎ.ಎಸ್ ಆಫೀಸರ್ ಕೈಗೆ ಇದನ್ನು ಕೊಟ್ಟಿರುವಂತಹದ್ದು ಸರಿಯಾದುದಲ್ಲ. ಧಾರವಾಡ ಜಿಲ್ಲಾ ಬ್ಯಾಂಕನ್ನು ಸೂಪರ್‌ಸೀಡ್ ಮಾಡಬೇಕು ಎಂದು ಹೇಳುವವರಲ್ಲಿ ನಾನೂ ಒಬ್ಬ. ಅಲ್ಲಿ ಏನೇನು ನಡೆಯುತ್ತಿದೆ ಎಂಬ ವಿಷಯ ನನಗೂ ಸ್ವಲ್ಪ ಗೊತ್ತಿದೆ. ಸಹಕಾರಿ ಕ್ಷೇತ್ರದಲ್ಲೀ ಅನುಭವ ಇಲ್ಲದೇ ಇರುವಂತಹ ಒಬ್ಬ ಅಧಿಕಾರಿಯ ಕೈಯ್ಯಲ್ಲಿ ಕೊಟ್ಟು, ಇವತ್ತು ಅವರು ಅಲ್ಲಿರತಕ್ಕ ಎಲ್ಲಾ ಅಧಿಕಾರಿಗಳನ್ನು ವರ್ಗ ಮಾಡುವುದರಲ್ಲಿ ಇದ್ದಾರೆ. ಇದು ಆಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇನ್ನೊಂದು ರೂಲ್ಸ್ ಬಗ್ಗೆ ಹೇಳುವುದಾದರೆ, ಆಗೂ ಸಹಕಾರಿ ಸಂಘದಲ್ಲಿರತಕ್ಕ ಅಧಿಕಾರಿ ಎಂದರೆ ಸಕ್ರೆಟರಿ ಓಟರ್ಸ್ ಲಿಸ್ಟನ್ನು ಮಾಡುತ್ತಾನೆ. ಆ ರೀತಿ ತಯಾರು ಮಾಡಿದಂತಹ ಪಟ್ಟಿಯನ್ನು ಚುನಾವಣೆ ನಡೆಯುವಂತಹ ಸಮಯದಲ್ಲಿ ರಿಟರ್ನಿಂಗ್ ಆಫೀಸರ್‌ರವರಿಗೆ ಕೊಡುತ್ತಾರೆ, ಆ ರಿಟರ್ನಿಂಗ್ ಆಫೀಸರ್‌ರವರು ಕೊಟ್ಟಂತಹ ಪಟ್ಟಿಯಲ್ಲಿ ಯಾವುದು ಸರಿ ಇದೆ ? ಯಾವುದು ತಪ್ಪು ಇದೆ ಎಂಬುದನ್ನು ನೋಡುವಂತಹ ಅಧಿಕಾರ ಇಲ್ಲ. ಕೇವಲ ಲಿಸ್ಟನ್ನು ನೋಡಿ ಚುನಾವಣೆಯನ್ನು ನಡೆಸುವುದಷ್ಟೆ ಅವರಿಗೆ ಇರತಕ್ಕ ಅಧಿಕಾರ. ಆದ್ದರಿಂದ ಸಕ್ರೆಟರಿಯವರು ಮಾಡಿದಂತಹ ಓಟರ್ಸ್ ಲಿಸ್ಟ್ ಲೀಗಲ್ಲಾಗಿದೆಯೋ ಇಲ್ಲೀಗಲ್ಲಾಗಿ ಇದೆಯೋ ಎಂಬುದನ್ನು ನೋಡತಕ್ಕಂತಹ ಅಧಿಕಾರವನ್ನು ಕೊಡಬೇಕು.

ರಾಣಿಬೆನ್ನೂರು ತಾಲ್ಲೂಕು ಆಗ್ರಿಕಲ್ಚರಲ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಯ ಚುನಾವಣೆಯನ್ನು ಕಳೆದ ಸಾರಿ ಮಾಡುವುದಕ್ಕೆ ಹೊರಟಾಗ, ಸೊಸೈಟಿಗೆ ಯಾವ ಸಂಘದವರು ಮಾಲನ್ನು ಹೊಡೆಯುತ್ತಾರೋ, ಅವರಿಗೆ ಮಾತ್ರ ಚುನಾವಣೆಯಲ್ಲಿ ಭಾಗವಹಿಸತಕ್ಕಂತಹ ಹಾಗೂ ಓಟು ಹಾಕತಕ್ಕಂತಹ ಅಧಿಕಾರ ಇದೆ ಎಂಬುದಾಗಿ ಬೈಲಾದಲ್ಲೇ ಇದೆ. ಹಿಂದಿನ ಸಾರಿ ಚುನಾವಣೆ ನಡೆಯುವಾಗ ಅವರಿಗೆ ಬೇಕಾದವರನ್ನು ಮಾತ್ರ ಮಾಲನ್ನು ಹೊಡೆಯುತ್ತಾರೆಂದು ಇಟ್ಟುಕೊಂಡು ಬಾಕಿಯವರನ್ನೆಲ್ಲಾ ತೆಗೆದುಬಿಟ್ಟಿದ್ದರು. ಬೇರೆಯವರು ಮಾಲನ್ನು ಹೊಡೆಯುತ್ತಿಲ್ಲವೆಂಬ ಕಾರಣಕ್ಕಾಗಿ ಅವರು ಕೊಟ್ಟಂತಹ ನಾಮಿನೇಷನನ್ನು ರಿಜೆಕ್ಟ್ ಮಾಡಿದರು. ಆಗ ಅದು ಹೈಕೋರ್ಟಿಗೆ ಬಂದು ಸ್ಟೇ ಆಯಿತು. ಆದ್ದರಿಂದ ಈ ರೀತಿಯ ಕಾನೂನುಗಳು ಏನಿವೆ. ಅಂತಹವುಗಳನ್ನು ಬದಲಾವಣೆ ಮಾಡಿ ಸ್ಪಷ್ಟವಾದ ರೂಲ್ಸನ್ನು ಮಾಡುವ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಸಹಕಾರ ಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ರಿಟರ್ನಿಂಗ್ ಆಫೀಸರ್‌ರವರಿಗೆ, ಸಂಪೂರ್ಣವಾದ ಅಧಿಕಾರವನ್ನು ಕೊಡಬೇಕೆಂದು ಹೇಳುತ್ತಾ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗುರುಪಾದಪ್ಪ ನಾಗರಪಲ್ಲಿ (ಔರಾದ್).—ಸನ್ಮಾನ್ಯ ಅಧ್ಯಕ್ಷರೆ, ಸಹಕಾರಿ ಇಲಾಖೆಯ ಬಗ್ಗೆ ಇದುವರೆವಿಗೂ ಮಾತನಾಡಿರತಕ್ಕ ಹಲವಾರು ಮಾನ್ಯ ಸದಸ್ಯರು ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಇದನ್ನು ನೋಡಿ ನಾನು ಸಂತೋಷಪಡಬೇಕಾಗಿದೆ. ಯಾವಾಗಲೂ ಈ ಇಲಾಖೆಯ ಬಗ್ಗೆ ಟೀಕೆಗಳನ್ನೇ ನಾವು ನೋಡುತ್ತಿದ್ದೇವೆ. ಸಹಕಾರಿ ಕ್ಷೇತ್ರದಲ್ಲಿರತಕ್ಕಂತಹವರು ಕೇವಲ ತಮ್ಮದೇ ಆದಂತಹ ಸಂಘಗಳನ್ನು ಮಾಡಿಕೊಂಡು ದುಡ್ಡು ಹೊಡೆಯುವುದಕ್ಕೆ ಮಾಡುವಂತಹ ಒಂದು ಯೋಜನೆ ಎಂಬುದಾಗಿ ಕೆಲವರು ಹೇಳುತ್ತಿದ್ದರು. ಆದರೆ ಇವೊತ್ತು ಸಹಕಾರಿ ಕ್ಷೇತ್ರದ ಬಗ್ಗೆ ಸ್ವಲ್ಪ ಅನುಕಂಪ, ಸಹಕಾರಿ ರಂಗದ ಬಗ್ಗೆ ವಿಶೇಷವಾದ ಭಾವನೆಯನ್ನು ಅನೇಕರು ವ್ಯಕ್ತಪಡಿಸಿದ್ದಾರೆ, ಅದಕ್ಕಾಗಿ ಸಂತೋಷಪಡುತ್ತೇನೆ. ನಂತರ ಸಹಕಾರಿ ಇಲಾಖೆಯ ಬಗ್ಗೆ ಮಾನ್ಯ ಸಚಿವರು ಏನೊಂದು ಬೇಡಿಕೆಯನ್ನು ಮಂಡಿಸಿದ್ದಾರೆ, ಅದನ್ನು ನಾನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಸಹಕಾರಿ ಕ್ಷೇತ್ರದ ಬಗ್ಗೆ ಮಹಾತ್ಮಾ ಗಾಂಧೀಜಿಯವರು ಇಟ್ಟಂತಹ ಕನಸು ನನಸಾಗಬೇಕಾದರೆ, ಅದಷ್ಟು ಮಟ್ಟಿಗೆ ಯಾವುದೇ ಪಕ್ಷದವರು ಇರಲಿ, ಅದು ಮುಖ್ಯ ಅಲ್ಲ, ಸಹಕಾರಿ ಕ್ಷೇತ್ರ ಅತಿ ಮಹತ್ವವಾದುದು, ಯಾವ ಪ್ರಕಾರ ಮಂದಿರಗಳಿಗೆ ಹಾಗೂ ದೇವಾಲಯಗಳಿಗೆ ಹೋಗುವಾಗ, ಬಾಗಿಲಿನಲ್ಲೇ ಚಪ್ಪಲಿಗಳನ್ನು ಬಿಟ್ಟು ಒಳಗಡೆ ಹೋಗಿ ಬರುತ್ತೇವೆಯೋ ಅದರಂತೆ ಸಹಕಾರಿ ಕ್ಷೇತ್ರದಲ್ಲಿ ಎಂದರೆ ಆ ಒಂದು ರಂಗದಲ್ಲಿ ಕೆಲಸ ಮಾಡತಕ್ಕಂತಹವರು ತಮ್ಮ ರಾಜಕೀಯವನ್ನು ಬಿಟ್ಟು, ವೈಯಕ್ತಿಕ ಅಭಿಪ್ರಾಯಗಳನ್ನು ಬಿಟ್ಟು, ಕೆಟ್ಟ ಭಾವನೆಗಳನ್ನು ಬಿಟ್ಟು ಅದರಲ್ಲಿ ಒಳ ಹೊಕ್ಕು ಕೆಲಸ ಮಾಡಿದರೆ ನಿಜವಾಗಿಯೂ ಸಹಕಾರಿ ರಂಗಕ್ಕೆ ಒಳ್ಳೆಯದಾಗುತ್ತದೆ. ಸಹಕಾರಿ ಕ್ಷೇತ್ರ ಉದ್ಧಾರವಾಗುತ್ತದೆ. ಸಹಕಾರ ಚಳುವಳಿಗೆ ನಿಜವಾಗಿಯೂ ಒಂದು ಒಳ್ಳೆಯ ಅರ್ಥ ಬರುತ್ತದೆ ಎಂಬ

ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಜನತಾ ಪಕ್ಷ ಅಧಿಕಾರಕ್ಕೆ ಬಂದಮೇಲೆ ಯಾವ ರೀತಿ ಎಜುಕೇಷನ್ ಬಗ್ಗೆ ಮೆರಿಟ್ ಆಧಾರದ ಮೇಲೆ ಸೀಟುಗಳನ್ನು ಹಂಚಬೇಕೆಂಬ ತೀರ್ಮಾನವನ್ನು ತೆಗೆದುಕೊಂಡು ಆ ಬಗ್ಗೆ ಕೆಲಸ ಮಾಡುತ್ತಿದೆ. ಅದೇ ಪ್ರಕಾರ ಸಹಕಾರಿ ಕ್ಷೇತ್ರದಲ್ಲಿ ವಿಶೇಷ ಎಚ್ಚರಿಕೆಯಿಂದ ನೋಡಿಕೊಂಡು, ರಾಜಕೀಯ ಪ್ರಶ್ನೆ ಬರಲಾರದಂತೆ ನೋಡಿಕೊಂಡು, ಕಾನೂನಿನ ತಿದ್ದುಪಡಿಯೇ ಆಗಲಿ, ಅಥವಾ ನಾಮಿನೇಷನ್ ಮಾಡುವಂತಹದ್ದೇ ಆಗಲಿ, ಯಾವುದೇ ರಾಜಕೀಯದ ಒತ್ತಡಕ್ಕೆ ಒಳಗಾಗದೇ ಸಹಕಾರಿ ರಂಗವನ್ನು ನಮ್ಮ ಮಂತ್ರಿಗಳು ನಡೆಸಿಕೊಂಡು ಬರುತ್ತಿದ್ದಾರೆ. ಅವರಿಗೆ ಈ ಬಗ್ಗೆ ಅಪಾರವಾದ ಅನುಭವ ಇದೆ ಆದರಿಂದಾಗಿಯೇ ಇದು ಚೆನ್ನಾಗಿ ನಡೆದುಕೊಂಡು ಹೋಗುತ್ತಿದೆ. ಸರ್ಕಾರದ ಸಹಕಾರ ಸಂಘಗಳು ಆಗಿಲ್ಲದೆ, ಬರೀ ಅಧಿಕಾರಿಗಳ ಸಂಘಗಳು ಆಗಿಲ್ಲದೆ, ನಿಜವಾಗಿಯೂ ಸಹಕಾರಿ ಸಂಘಗಳಾಗಿವೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿರತಕ್ಕಂತಹವರು ಸಾಲದ ವಸೂಲಾತಿಯ ಬಗ್ಗೆ ಹೇಳಿದ್ದಾರೆ. ಸಾಲದ ವಸೂಲಾತಿಯ ಬಗ್ಗೆ ನಾನೂ ಕೂಡ ವಸೂಲಾಗಬಾರದು ಎಂಬುದಾಗಿ ಹೇಳುವವನಲ್ಲ. ವಸೂಲಾತಿಯನ್ನು ಖಡಾ ಖಂಡಿತವಾಗಿ ಮಾಡಲೇಬೇಕಾಗುತ್ತದೆ. ಯಾವ ರೀತಿ ವಸೂಲು ಮಾಡಬೇಕೆಂಬ ಬಗ್ಗೆ ಕೆಲವೊಂದು ತಿದ್ದುಪಡಿಯನ್ನು ಮಾನ್ಯ ಸಚಿವರು ತಂದಿದ್ದರು. ಅದು ಪಾಸಾಗಿದ್ದರೆ ಚೆನ್ನಾಗಿರುತ್ತಿತ್ತು. ಕಾರಣ ನಮ್ಮ ರೈತರಿಗೆ ಸಹಕಾರಿ ಸಾಲದ ಬಗ್ಗೆ ಕೆಲವು ಭಾವನೆ ಬಂದುಬಿಟ್ಟಿದೆ. ನಮ್ಮ ಕಡೆ "ಅಂಗಿಮನು" ಅಂತ ಹೇಳುತ್ತಾರೆ. ಸಹಕಾರಿ ಸಾಲ ಅಂಗಿಮನು ಎಂದು ಹೇಳುತ್ತಾರೆ. ಆದರೆ ಸಹಕಾರಿ ಸಾಲವನ್ನು ತೆಗೆದುಕೊಂಡಿರುವಂತಹ ರೈತರು. ಸಹಕಾರಿ ಸಾಲ ತಾನೆ ಕೊಡೋಣ ಬಿಡು, ಅದೇನು ದೊಡ್ಡ ಮಾತು ಎಂದು ಹೇಳತಕ್ಕಂತಹ ಭಾವನೆ ರೈತರಲ್ಲಿ ಬಂದು ಬಿಟ್ಟಿದೆ. ಆದ್ದರಿಂದ ಇದರ ಬಗ್ಗೆ ಕಠಿಣವಾದ ಕಾನೂನನ್ನು ಜಾರಿಗೆ ತಂದಿದ್ದರೆ ಚೆನ್ನಾಗಿರುತ್ತಿತು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. (ಉದರ್ಶ ಗಾದೆಯನ್ನು ಮಾನ್ಯ ಸದಸ್ಯರು ಉದಾಹರಿಸಿದರು). ಇಲ್ಲಿ ಒಳ್ಳೆಯವರು ಯಾರು ಇಲ್ಲದಂತಾಗಿದೆ. ತೆಗೆದುಕೊಂಡಂತಹ ಸಾಲವನ್ನು ವಾಪಸ್ಸು ಕೊಡುವಂತಹ ಭಾವನೆ ಪ್ರತಿಯೊಬ್ಬ ರೈತರಲ್ಲೂ ಬರಬೇಕು. ಆಗ ಮಾತ್ರ ಸಹಕಾರಿ ರಂಗ ನಿಜವಾಗಿಯೂ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ಸದಸ್ಯರು ಈಗಾಗಲೇ ಕೆಲವು ಅಂಕಿ ಸಂಖ್ಯೆಗಳನ್ನು ಹೇಳಿದ್ದಾರೆ. ಅದನ್ನೇ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ರಾಜ್ಯಮಟ್ಟದ ಸಂಸ್ಥೆಗಳ ಬಗ್ಗೆ ಅಧಿಕಾರಿಗಳನ್ನು ಹಾಕುವಾಗ ಐ. ಎ. ಎಸ್. ಆಫೀಸರ್ಸ್‌ಗಳನ್ನು ಹಾಕಬಾರದು ಎಂದು ಅಲ್ಲ. ಆದರೆ ಆ ಒಂದು ರಂಗದಲ್ಲಿ ಅನುಭವ ಇರತಕ್ಕಂತಹ ಅಧಿಕಾರಿಗಳನ್ನು ಹಾಕಿದರೆ ಮತ್ತಷ್ಟು ಚೆನ್ನಾಗಿ ನಡೆಯುವುದಕ್ಕೆ ಅನುಕೂಲವಾಗುತ್ತದೆ. ವಿಶೇಷವಾಗಿ ಕೆಲಸಗಳು ಆಗುತ್ತವೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕಾರಣ, ನಾನು ಸ್ವತಃ ಅನುಭವ ಪಡೆದಿದ್ದೇನೆ. ಆದ್ದರಿಂದ, ಈ ಮಾತನ್ನು ಹೇಳುವುದಕೆ ಇಷ್ಟಪಡುತ್ತಿದ್ದೇನೆ. ಅನುಭವ ಇಲ್ಲದಿದ್ದರೆ ಯಾವ ರೀತಿ ಆಗುತ್ತದೆಂದರೆ ನಮಗೆ ಟೋಪಿ ಬೇಕಾಗಿದ್ದು ಖುರ್ಚಿ ಅಂಗಡಿಗೆ ಹೋದರೆ ಹೇಗೆ ಅಲ್ಲಿ ಟೋಪಿ ಸಿಗುವುದಿಲ್ಲವೋ ಹಾಗೆ ಆಗುತ್ತದೆ. ಆದಕಾರಣ, ಸಹಕಾರ ಸಂಘದಲ್ಲಿ ನುರಿತವರು ಮತ್ತು ಅನುಭವಿಗಳು ಇರಬೇಕು, ಅಂಥವರು ಇದ್ದರೆ ಮಹಾ ಮಂಡಲಿ ಚೆನ್ನಾಗಿ ಕೆಲಸ ಮಾಡುತ್ತದೆ. ಕೆಲವು ಸದಸ್ಯರು ಇದರ ಬಗ್ಗೆ ಟೀಕೆ ಮಾಡಿದ್ದಾರೆ. ಮಹಾ ಮಂಡಲದ ಪೆಸ್ಟಿಸೈಡ್ಸ್ ಲುಕ್ಸಾನಾಗಿದೆ, ಅಲ್ಲಿ ದುಡ್ಡು ತಿಂದು ಹಾಕಿದ್ದಾರೆಂಬ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವು ವಿಷಯಗಳಲ್ಲಿ ಒಪ್ಪಬೇಕಾದುದು ನಮ್ಮ ಕರ್ತವ್ಯ. ಕಾರಣ, ಹಿಂದೆ ಆಗಿರುವಂಥದ್ದು ಇದೆ. ಗ್ರೋವರ್ ಕಮೀಷನ್‌ನಲ್ಲಿ ಪೆಸ್ಟಿಸೈಡ್ಸ್ ಬಗ್ಗೆ ವಿಚಾರಣೆ ನಡೆದಿದೆ. ಆದರೆ ಈಗ ಮಹಾ ಮಂಡಲದಲ್ಲಿ ಯಾವುದೇ ಕಷ್ಟ ಇಲ್ಲದೆ ಚೆನ್ನಾಗಿ ನಡೆಯುತ್ತಿದೆ, ಅಲ್ಲದೆ ಲಾಭ ಕೂಡ ಗಳಿಸುತ್ತಿದೆ. ಅಂಥ ಕಡೆ ಅನುಭವಿಗಳು ಇರಬೇಕು, ಚೆನ್ನಾಗಿ ಕೆಲಸ ಮಾಡುವವರು ಇರಬೇಕು. ಮಾನ್ಯ ಸಚಿವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಾರೆ, ಅದರ ಬಗ್ಗೆ ಅವರಿಗೇನೂ ಹೇಳಬೇಕಾಗಿಲ್ಲ. ತಾಲ್ಲೂಕು ಸಂಘಗಳ ಬಗ್ಗೆ ಹೇಳಬೇಕಾದರೆ ಇವು ಬಹಳ ಕಷ್ಟದಲ್ಲಿವೆ. ಅವರಿಗೆ ಸಂಬಳ ಕೊಡುವುದಕ್ಕೆ ಸಹ ಹಣ ಇಲ್ಲವಾಗಿದೆ, ತ್ರೀ ಟೈರ್ ಸಿಸ್ಟಂ ಇಲ್ಲದೆ ಬಹಳ ತೊಂದರೆಯಾಗಿದೆ. ತ್ರೀ ಟೈರ್ ಸಿಸ್ಟಂ ಅನ್ನು ಕೂಡಲೇ ಮಾಡಬೇಕು. ಇದನ್ನು ಮಾಡಿದರೆ ಮಾರಾಟ ಸಹಕಾರ ಸಂಘಗಳು ಉದ್ಧಾರವಾಗುತ್ತದೆ. ಅಲ್ಲಿನ ನೌಕರರಿಗೆ ಸಂಬಳ ಕೊಡದೆ ಇರುವ ಪರಿಸ್ಥಿತಿ ಸಹಕಾರ ಅನೇಕ ಸಂಘ ಗಳಲ್ಲಿದೆ. ಆದ್ದರಿಂದ, ತ್ರೀ ಟೈರ್ ಸಿಸ್ಟಂ ಅನ್ನು ಕೂಡಲೇ ಮಾಡಬೇಕೆಂದು ಹೇಳುತ್ತೇನೆ.

ಲೆಕ್ಕ ಪರಿಶೋಧನಾ ಸಂಸ್ಥೆಗಳನ್ನು ಬೇರೆ ಮಾಡಿ ಒಳ್ಳೆಯದಾಗಿದೆ. ಲೆಕ್ಕ ಪತ್ರಗಳನ್ನು ಪರಿಶೋಧನೆ ಮಾಡಲು ೨೦–೨೧ನೇ ಸಾಲಿನಿಂದ ಹೊಸದಾಗಿ ಒಂದು ಸಂಸ್ಥೆಯನ್ನು ರಚನೆ ಮಾಡಲಾಗಿದೆ. ಅದು ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ ಆದರಿಂದ ಸಹಕಾರ ಸಂಘಗಳಿಗೆ ಬಹಳ ಅನುಕೂಲವಾಗುತ್ತದೆ. ಅದರ ಒಂದು ಕಾರ್ಯವ್ಯಾಪ್ತಿಯ ಪ್ರಕಾರ ಎಲ್ಲಾ ಸೊಸೈಟಿಗಳ ಲೆಕ್ಕ ಪರಿಶೋಧನೆ ಮಾಡಿದರೆ ಒಳ್ಳೆಯದಾಗುತ್ತದೆ. ಆದರೆ ಅಲ್ಲಿ ಯಾವ ರೀತಿ ಲೆಕ್ಕ ಪರಿಶೋಧನೆ ಆಗಬೇಕೋ ಆ ಪ್ರಕಾರ ಆಗುತ್ತಿಲ್ಲ. ಇದರ ಬಗ್ಗೆ ಕೂಡ ಮಾನ್ಯ ಸಚಿವರು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಚುನಾವಣೆ ವಿಷಯದಲ್ಲಿ ಗ್ರಾಮೀಣ ಸಹಕಾರ ಸಂಘ, ತಾಲ್ಲೂಕು ಮಟ್ಟದ ಸಹಕಾರ ಸಂಘ, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಹಕಾರ ಸಂಘಗಳಿಗೆ ಬೇರೆಬೇರೆ ತಿದ್ದುಪಡಿಗಳನ್ನು ಕಾನೂನಿನಲ್ಲಿ ಮಾಡಬೇಕು. ಒಂದೊಂದಕ್ಕೆ ಒಂದೊಂದು ರೀತಿಯ ವ್ಯವಸ್ಥೆ ಇರಬೇಕಾಗುತ್ತದೆ. ಒಂದೇ ತರಹ ಇದ್ದರೆ ತೊಂದರೆ ಆಗುತ್ತದೆ. ಆದ್ದರಿಂದ ಎಲ್ಲದಕ್ಕೂ ಪ್ರತ್ಯೇಕವಾಗಿ ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ, ಸಾಲದ ತೀರುವಳಿ ಬಗ್ಗೆ ಹೇಳುವುದಾದರೆ, ನಮ್ಮ ಡಿ.ಸಿ.ಸಿ. ಬ್ಯಾಂಕಿನಲ್ಲಿ ಒಂದು ಪದ್ಧತಿ ಇದೆ. ಇನ್ನೊಬ್ಬರ ಹೆಸರಿನಲ್ಲಿ ಸಾಲ ತೆಗೆದುಕೊಳ್ಳುವ ಬಗ್ಗೆ ಸದಸ್ಯರು ಟೀಕೆ ಮಾಡಿದ್ದಾರೆ. ಯಾರದೋ ಹೆಸರಿನಲ್ಲಿ ಸಾಲ ತೆಗೆದುಕೊಳ್ಳುವ ಪದ್ಧತಿ ತಪ್ಪಬೇಕೆಂದು ನಾನೂ ಕೂಡ ಹೇಳುತ್ತೇನೆ. ಯಾರಿಗೆ ಸಾಲ ಬೇಕೊ ಅವರೇ ಸ್ವತಃ ತೆಗೆದುಕೊಳ್ಳಲಿ. ಬ್ಯಾಂಕುಗಳು ಬ್ರಾಂಚುಗಳನ್ನು ತೆರೆಯುವ ಬಗ್ಗೆ ಹಿರಿಯ ಸದಸ್ಯರು ಅನೇಕರು ಹೇಳಿದ್ದಾರೆ. ರೈತರಿಗೆ ಬ್ಯಾಂಕುಗಳ ಮತ್ತು ಸಹಕಾರ ಸಂಘಗಳ ಮೂಲಕ ಸಾಲ ಸೌಲಭ್ಯ ತಕ್ಷಣ ಸಿಗುವಂತಾಗಬೇಕು. ರೈತರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಬ್ರಾಂಚುಗಳನ್ನು ತೆರೆಯಬೇಕೇ ಹೊರತು ನಾವು ಬ್ರಾಂಚುಗಳನ್ನು ತೆರೆದಿದ್ದೇವೆಂದು ಹೇಳಿಕೊಳ್ಳುವುದಕ್ಕೆ ಅಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ರಿಜಿಸ್ಟ್ರೇಷನ್ ಶುಲ್ಕದ ಬಗ್ಗೆ ಬಹಳ ತೊಂದರೆಯಾಗಿದೆ. ಗೃಹ ನಿರ್ಮಾಣದಲ್ಲಿ ೮ ಸಾವಿರ ರೂಪಾಯಿವರೆಗೆ ವಿನಾಯಿತಿ ಕೊಟ್ಟಿದ್ದೀರಿ. ಇನ್ನೂ ಜಾಸ್ತಿ ಕೊಡಬೇಕೆಂದು ಗೃಹ ನಿರ್ಮಾಣ ಮಂಡಲಿಯವರು ಶಿಫಾರಸ್ಸು ಮಾಡಿದ್ದಾರೆ. ಸಾಮಾನ್ಯವಾಗಿ ಹಳ್ಳಿಗಳ ಕಡೆ ೧೫–೨೦ ಸಾವಿರ ರೂಪಾಯಿಗಳನ್ನು ಕೊಟ್ಟರೆ ಮನೆ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೋಸ್ಕರ ರಿಜಿಸ್ಟ್ರೇಷನ್ ಫೀ ಅನ್ನು ಪೂರಾ ಮನ್ನ ಮಾಡಬೇಕೆಂದು ಹೇಳುತ್ತೇನೆ. ಇನ್ನು ಎಪಿಎಂಸಿ. ಬಗ್ಗೆ ಹೇಳುವುದಾದರೆ ಬಾರ್ಡರ್ ಏರಿಯಾದಲ್ಲಿ ಎಪಿಎಂಸಿ.ಗಳು ಇವೆ. ಅಲ್ಲಿ ಬಹಳ ತೊಂದರೆಯಾಗಿದೆ. ಕಾರಣ ಅವರಿಗೆ ಹತ್ತಿ ಆ ಕಡೆಯಿಂದ, ಈ ಕಡೆಯಿಂದ ಎಲ್ಲಾ ಬರುತ್ತದೆ. ಅಲ್ಲಿ ೩೦ ಪೈಸೆ ದರ ಇದ್ದರೆ, ನಮ್ಮಲ್ಲಿ ೨ ರೂಪಾಯಿಗಳು ಇದೆ. ಆ ಬೆಲೆಗೆ ನಮ್ಮಲ್ಲಿ ಮಾರಾಟ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ನಮಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ಈ ಬಗ್ಗೆ ಸಚಿವರು ಗಮನ ಹರಿಸಿ ಬಾರ್ಡರ್ ಎಪಿಎಂಸಿಗಳಿಗೆ ಅನುಕೂಲ ಮಾಡಿಕೊಟ್ಟರೆ ಅಲ್ಲಿರತಕ್ಕ ಮಾಲಿಗೆ ಬೆಲೆ ಬರುತ್ತದೆ ಮತ್ತು ಅವರ ತೊಂದರೆ ತಪ್ಪುತ್ತದೆಂದು ಹೇಳುತ್ತೇನೆ, ಅಲ್ಲದೆ ಎಪಿಎಂಸಿ. ಕೂಡ ಸುಧಾರಣೆ ಆಗುತ್ತದೆ. ಪ್ರಜಾಪ್ರಭುತ್ವದಲ್ಲಿ ಎಪಿಎಂಸಿ.ಯಲ್ಲಿರತಕ್ಕ ಅಧ್ಯಕ್ಷರಿಗೆ ಯಾವ ಅಧಿಕಾರವೂ ಇಲ್ಲವಾಗಿದೆ. ಸುಮ್ಮನೆ ಖುರ್ಚಿ ಮೇಲೆ ಹೋಗಿ ಕೂಡುವುದು ಬರುವುದು ಆಗಿದೆ. ಅವರಿಗೂ ಕೂಡ ಪ್ರಜಾಪ್ರಭುತ್ವಕ್ಕನುಗುಣವಾಗಿ ಅಧಿಕಾರಗಳನ್ನು ಕೊಡಬೇಕೆಂದು ಹೇಳುತ್ತೇನೆ. ಹತ್ತಿಯನ್ನು ಮಹಾರಾಷ್ಟ್ರದಲ್ಲಿ ಮನಾಪಲಿಯಾಗಿ ಖರೀದಿ ಮಾಡುವುದರಿಂದ ರೈತರಿಗೆ ಅನುಕೂಲವಾಗಿದೆ ನಮ್ಮಲ್ಲಿ ನೂಲಿನ ಗಿರಣಿಗಳು ಇವೆ. ಅವುಗಳ ಪರಿಸ್ಥಿತಿ ಕೆಟ್ಟಿದೆ. ಕಾರಣ ಹತ್ತಿಯನ್ನು ಖರೀದಿ ಮಾಡುತ್ತಿಲ್ಲ. ನ್ಯಾಷನಲ್ ಫೆಡರೇಷನ್‌ನವರು ಖರೀದಿ ಮಾಡಲು ತಯಾರಿದ್ದಾರೆ. ಮಹಾರಾಷ್ಟ್ರದಲ್ಲಿರುವ ಪ್ರಕಾರ ಇಲ್ಲಿ ಮಾಡಿದರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇನ್ನೂ ಹೇಳಬೇಕಾದ ವಿಷಯಗಳು ಬಹಳ ಇದ್ದವು. ಆದರೆ ಸಮಯದ ಅಭಾವ ಇರುವುದರಿಂದ ಹೆಚ್ಚು ಹೇಳುವುದಕ್ಕೆ ಹೋಗದೆ, ಸಹಕಾರ ರಂಗದಲ್ಲಿ ಒಳ್ಳೆಯ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಸಚಿವರು ಅನುಭವಸ್ಥರಿರುವುದರಿಂದ ಅವರಿಗೆ ಹೆಚ್ಚು ಹೇಳಬೇಕಾಗಿಲ್ಲ. ಅವರು ಎಲ್ಲಾ ಮಾಹಿತಿಗಳನ್ನು ತೆಗೆದುಕೊಂಡು ಚೆನ್ನಾಗಿ ಕೆಲಸ ಮಾಡಲಿ ಎಂದು ಹೇಳಿ, ಬೇಡಿಕೆಗಳನ್ನು ಬೆಂಬಲಿಸುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೆ, ಸಹಕಾರ ಸಂಸ್ಥೆಗಳು ಎಂದರೆ ಮೋಸ ಮಾಡತಕ್ಕ ಜನಗಳ ಕೂಟ ಎಂಬ ಅಭಿಪ್ರಾಯ ಸಾಮಾನ್ಯ ಜನರಲ್ಲಿ ಬಂದಿದೆ. ಇದಕ್ಕೆ ನಾನಾ

ಕಾರಣಗಳು ಇವೆ. ಬೆಂಕಿ ಇಲ್ಲದೆ ಹೊಗೆ ಬರಲು ಸಾಧ್ಯವಿಲ್ಲ ಎಂಬಂತೆ ಈ ರೀತಿ ಜನಾಭಿಪ್ರಾಯ ಮೂಡಬೇಕಾದರೆ ಅಲ್ಲಿ ಏನೋ ಇರಬೇಕು. ಸಾಮಾನ್ಯವಾಗಿ ಹೆಚ್ಚಿನ ಕಡೆ ಸಹಕಾರ ಸಂಘಗಳಲ್ಲಿ ರಾಜಕೀಯ ಮಾಡತಕ್ಕ ವ್ಯಕ್ತಿಗಳು ಯಾವ ರೀತಿ ಇರುತ್ತಾರೆಂದರೆ ಸಾಮಾನ್ಯರಿಂದ ಹಣವನ್ನು ತಮ್ಮ ಸ್ವಲಾಭಕ್ಕೆ ಉಪಯೋಗಿಸಿಕೊಳ್ಳುತ್ತಿರುತ್ತಾರೆ. ಎಂದರೆ ತಲೆ ಹೊಡೆದು ಉಪಯೋಗಿಸುತ್ತಾರೆಂದು ಅಲ್ಲ. ಅವರೇ ಅಲ್ಲ ಸದಸ್ಯರಾಗಿ ಅಲ್ಲಿ ಸಿಗತಕ್ಕ ಬೆನಿಫಿಟ್ಸ್ ಅನ್ನು ತೆಗೆದುಕೊಳ್ಳುತ್ತಾರೆ. ಪಿ ಎಲ್.ಡಿ ಬ್ಯಾಂಕಿನಲ್ಲಿ ಒಂದು ಸಾರಿ ಚುನಾವಣೆ ಮಾಡಿದ್ದನ್ನು ನಾನು ನೋಡಿದ್ದೆ. ಅಲ್ಲಿ ತಮಗೆ ಬೇಕಾದ ಜನರನ್ನು ತಾವೇ ದುಡ್ಡು ಕೊಟ್ಟು ಸದಸ್ಯರನ್ನಾಗಿ ಮಾಡಿಸಿಕೊಳ್ಳುತ್ತಾರೆ. ಚುನಾವಣೆಗೆ ನಿಂತಾಗ ದುಡ್ಡು ಪಡೆದು ಸದಸ್ಯರಾದವರೆಲ್ಲರೂ ಇವರಿಗೇ ಓಟುಕೊಟ್ಟು ಗೆಲ್ಲಿಸುತ್ತಾರೆ. ಹೀಗಾಗಿ ಸಹಕಾರ ಸಂಘಗಳಲ್ಲಿ ಆಡಳಿತ ಮಾಡತಕ್ಕ ಜನರು ವಂಶಪಾರಂಪರ್ಯವಾಗಿ ಅವರೇ ಆಗಿರುತ್ತಾರೆ. ಆ ರೀತಿ ವ್ಯವಸ್ಥೆಯನ್ನು ಸಹಕಾರಿ ರಂಗದಲ್ಲಿ ಮಾಡಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ, ನಮ್ಮ ದೇಶದಲ್ಲಿ ಸಹಕಾರ ಚಳುವಳಿ ಫೇಲ್ ಆಗುತ್ತಿದೆ ಅನ್ನಿಸುತ್ತದೆ.

೭-೩೦ ಪಿ. ಎಂ.

ಇದಕ್ಕೆ ಒಂದು ಕಡೆ ಆಲ್ ಇಂಡಿಯಾ ರೂರಲ್ ಕ್ರೆಡಿಟ್ ಸರ್ವೆ ರಿಪೋರ್ಟ್ ೧೯೫೧ರಿಂದ ೧೯೫೪ ಎ. ಡಿ ಗೋರ್‌ವಾಲಾ ಅವರ ಲೀಡರ್‌ಷಿಪ್‌ನಲ್ಲಿ ಏನು ಹೇಳಿದ್ದಾರೆಂದರೆ.—

> "The rural credit survey report is regarded as bible of the co-operative movement. It reveals that the contribution of the co-operatives amounted to only 3.1 percent of the credit requirements of rural population in spite of their existence for over fifty years. Commenting on cooperative credit it stated, it satsfied none of the requirements of either good cooperation or of sound credit. After analysing various causes, the committee concluded that cooperation has failed but hastened to add that cooperation must succeed and for this it recommended an integrated scheme of rural credit."

ಈ ರೀತಿಯ ಅಭಿಪ್ರಾಯವನ್ನು ಅವರು ಕೊಟ್ಟಿದ್ದಾರೆ. ಇದರಲ್ಲಿ ಯಾವ ರೀತಿ ದುರುಪಯೋಗವಾಗುತ್ತಿದೆ ಎನ್ನುವುದಕ್ಕೆ ಒಂದೇ ಒಂದು ಉದಾಹರಣೆಯನ್ನು ನಾನು ಕೊಡುತ್ತೇನೆ ನನ್ನ ಹತ್ತಿರ ಒಂದು ಪಾಂಪ್‌ಲೆಟ್ ಇದೆ. ಪತ್ರಿಕೆಗಳಲ್ಲಿ ಬಂದಿರತಕ್ಕಂತಹದ್ದನ್ನು ಪಾಂಪ್‌ಲೆಟ್ ಮಾಡಿದ್ದಾರೆ. ತಾವು ದಯಮಾಡಿ ಅನುಮತಿಯನ್ನು ಕೊಟ್ಟರೆ ಅದನ್ನು ಓದುತ್ತೇನೆ.

ಅಧ್ಯಕ್ಷರು.—ಅದನ್ನು ಓದುವುದು ಬೇಡ, ಮಂತ್ರಿಗಳಿಗೆ ಕಳುಹಿಸಿಕೊಡಿ ಅವರು ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಯು. ಭೂಪತಿ.—ಏನು ಇದೆ ಅದನ್ನಾದರೂ ಹೇಳುತ್ತೇನೆ. ಸಿಂಧನೂರು ತಾಲ್ಲೂಕಿನಲ್ಲಿರುವ ಟಿ.ಎ ಪಿ ಸಿ.ಎಂ ಎಸ್.ಗೆ ನಡೆದಂತಹ ಚುನಾವಣೆಯೊಳಗೆ ಜನತಾ ಪಕ್ಷದ ಪರವಾಗಿ ಎಂ.ವೈ.ಆರ್. ೧೧೬೯ ನಂಬರ್‌ನ ಜೀಪನ್ನು ಉಪಯೋಗಿಸಿದ್ದಾರೆ ಎನ್ನತಕ್ಕಂಥಹದ್ದು ಪತ್ರಿಕೆಯಲ್ಲೇ ಪ್ರಕಟವಾಗಿದೆ. ಆ ಅಭ್ಯರ್ಥಿಯ ಹೆಸರೂ ಕೂಡ ಇದೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಪತ್ರಿಕೆಯಲ್ಲೇ ಪ್ರಶ್ನೆ ಮಾಡಿದ್ದಾರೆ. ಅಭ್ಯರ್ಥಿಯ ಹೆಸರನ್ನೂ ಕೂಡ ಅವರಲ್ಲಿ ಪ್ರಕಟಮಾಡಿದ್ದಾರೆ. ಅದೇ ರೀತಿಯಲ್ಲಿ ಸಿಂಧನೂರು ತಾಲ್ಲೂಕಿನಲ್ಲಿರುವ ಟಿ.ಎ.ಪಿ.ಸಿ.ಎಂ.ಎಸ್.ನ ಸಂಸ್ಥೆಯೊಳಗೆ ೧೨೫ ಚೀಲ ಸಕ್ಕರೆ, ೧೦೦ ಚೀಲ ಅಕ್ಕಿ ಹಾಗೂ ೪೦೦ ಚೀಲ ಸಿಮೆಂಟ್ ಇವುಗಳಿಗೆ ಲೆಕ್ಕಪತ್ರವೇ ಇಲ್ಲದೆ ಮಂಗಮಾಯವಾಗಿದೆ ಎಂದೂ ಕೂಡ ಹೇಳಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟವರು ಏನೇನು ಕ್ರಮ ತೆಗೆದುಕೊಂಡಿದ್ದಾರೆಂಬುದು ನನಗೂ ಗೊತ್ತಿಲ್ಲ, ಅದರ

ಕಾಪಿಗಳು ನನ್ನ ಹತ್ತಿರ ಇವೆ. ಅವುಗಳನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕಳುಹಿಸಿ ಕೊಡುತ್ತಿದ್ದೇನೆ.

ನಂತರ ಸಹಕಾರಿ ಸಂಘದಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿ ಬಗ್ಗೆ ವರದಿಯಲ್ಲಿ ಸ್ವಲ್ಪ ಮಟ್ಟಿಗೆ ಹೇಳಿದ್ದಾರೆ. ಇದರ ಬಗ್ಗೆ ಒಂದೇ ಒಂದು ಉದಾಹರಣೆಯನ್ನು ಕೊಡುವುದಾದರೆ ತಿಪಟೂರು ತಾಲ್ಲೂಕು, ಹೊನ್ನಳ್ಳಿ ಹೋಬಳಿ, ಹಲ್ಕುರ್ಕಿ ಸೇವಾ ಸಹಕಾರ ಸಂಘದ ಕಾರ್ಯದರ್ಶಿ ಡಿ. ಜಿ. ಆನಂದಮೂರ್ತಿ ಎಂಬುವರು ೩೦–೯–೮೪ನೇ ಇಸವಿಯಿಂದ ಕಾಣೆಯಾಗಿದ್ದಾರೆಂಬ ಒಂದು ವದಂತಿ ಇದೆ. ಅವರು ಕಾಣೆಯಾಗಿದ್ದಾರೋ ಅಥವಾ ಕೊಲೆಯಾಗಿದ್ದಾರೋ ಇವೊತ್ತಿನವರೆಗೂ ಅದು ಪತ್ತೆ ಇಲ್ಲ. ಅವರ ಹೆಂಡತಿ ಸರ್ಕಾರದ ಅಧಿಕಾರಿಗಳೆಲ್ಲರಿಗೂ ಬರೆದದ್ದಾಯಿತು. ಎಲ್ಲಾ ಪೋಲೀಸ್ ಅಧಿಕಾರಿಗಳಿಗೂ ದೂರನ್ನು ಕೊಟ್ಟಿದ್ದಾಯಿತು. ಕೊನೆಗೆ ಸಹಕಾರ ಸಚಿವರಿಗೂ ಬರೆದದ್ದಾಯಿತು. ಆದರೆ ಇವೊತ್ತಿನವರೆಗೂ ಅವರು ಏನಾಗಿದ್ದಾರೆ ಎಂಬುದರ ಬಗ್ಗೆ ವರದಿಯೇ ಇಲ್ಲ. ಇದರ ಬಗ್ಗೆ ಇಷ್ಟೊಂದು ವ್ಯವಹಾರ ಮಾಡಿ ಇಷ್ಟೊಂದು ದೊಡ್ಡ ಫೈಲು ಆಗಿದೆ (ಈ ಹಂತದಲ್ಲಿ ಅಧ್ಯಕ್ಷರಿಗೆ ಆ ಫೈಲನ್ನು ತೋರಿಸಿದರು). ಸಹಕಾರಿ ಸಂಘದಲ್ಲಿ ಕೆಲಸ ಮಾಡತಕ್ಕ ಒಬ್ಬ ಕಾರ್ಮಿಕರಿಗೆ ದೊರೆಯತಕ್ಕಂತಹ ನ್ಯಾಯ ಇದು.

ಶ್ರೀ ಆರ್. ಎಲ್. ಜಾಲಪ್ಪ.—ಇದಕ್ಕೂ ಹಿಂದೆ ಒಂದು ಸೊಸೈಟಿಯಲ್ಲಿ ೧೮ ಸಾವಿರವೋ ೨೯ ಸಾವಿರವೋ ಹಣವನ್ನು ತಿಂದು ಹಾಕಿ ಅವನನ್ನು ಸಸ್‌ಪೆಂಡ್ ಮಾಡಿದ್ದರು. ಅವರಿಂದ ಬರಬೇಕಾದ ಬಾಕಿ ಇನ್ನೂ ೮೦ ಸಾವಿರ ರೂಪಾಯಿಗಳು ಇವೆ. ಅವನನ್ನು ರೀಇನ್‌ಸ್ಟೇಟ್ ಮಾಡಿ ಹಾಲಿನ ಸೊಸೈಟಿಗೆ ಹಾಕಿದರು. ಅಲ್ಲಿ ಹಿಂದಿನ ಕಾರ್ಯದರ್ಶಿಯವರಿಂದ ವಸೂಲಿ ಮಾಡಿದಂತಹ ೨೦ ಸಾವಿರ ರೂಪಾಯಿಗಳನ್ನು ವಸೂಲಿ ಮಾಡಿ, ಅದನ್ನು ಜಮಾ ಮಾಡದೆ. ನಮ್ಮ ಅಧಿಕಾರಿಗಳು ಅಲ್ಲಿಗೆ ಹೋದಾಗ ಪತ್ತೆ ಇಲ್ಲದೆ ಓಡಿ ಹೋಗಿದ್ದಾರೆ. ಅವನೊಬ್ಬ ಹ್ಯಾಬಿಚ್ಯುಯಲ್ ಅಫೆಂಡರ್. ಕಾರ್ಮಿಕರಿಗೆ ತೊಂದರೆಯಾಗಿದೆ ಎಂದು ತಾವು ೩೩೪ ರ ಕೆಳಗೆ ಈ ಒಂದು ವಿಷಯವನ್ನು ಸದನದಲ್ಲಿ ಎತ್ತಿದ್ದೀರಿ. ನಾನು ನಂತರ ಅದನ್ನು ಉತ್ತರಿಸುವ ಸಲುವಾಗಿ ರೆಡಿಯಾಗಿ ಬಂದಿದ್ದೆ. ತಾವು ಇರಲಿಲ್ಲ ನೀವು ನಾಲ್ಕು ಜನ ಸಹಿ ಮಾಡಿ ಕೊಟ್ಟಿದ್ದೀರಿ. ನಾನು ರೆಡಿಯಾಗಿ ಬಂದಿದ್ದೆ. ನಾಳೆ ಉತ್ತರ ಕೊಡುವಾಗ ಇದನ್ನು ವಿವರವಾಗಿ ಹೇಳುತ್ತೇನೆ.

ಶ್ರೀ ಯು. ಭೂಪತಿ.—ತಾವೇನೋ ಉತ್ತರವನ್ನು ಕೊಡುತ್ತೇನೆಂದು ಹೇಳುತ್ತೀರಿ. ಇದರಲ್ಲಿ ಇನ್ನೂ ಕೆಲವರು ಇನ್ವಾಲ್ವ್ ಆಗಿದ್ದಾರೆ ಎನ್ನತಕ್ಕಂಥಹದ್ದು ಇದೆ. ಅವರ ಹೆಸರುಗಳೆಲ್ಲವೂ ಇವೆ. ಎಷ್ಟೆಷ್ಟು ಹಣ ಏನೇನು ಆಗಿದೆ ಎಂದೂ ಇದೆ. ಶ್ರೀ ಈಶ್ವರಪ್ಪ, ನಿರ್ದೇಶಕರು, ಶಿವಣ್ಣ ಎನ್ನತಕ್ಕಂತಹವರು ಕಾರ್ಯದರ್ಶಿ, ಸುಮಾರು ೩ ವರ್ಷಗಳ ಕಾಲ ೧೯೮೧–೮೪ ರವರೆಗೆ ೨೨,೯೦೭ ರೂಪಾಯಿಗಳನ್ನು ಶಿವಣ್ಣ ಸೇಲ್ಸ್‌ಮನ್ ಹಾಗೂ ಶ್ರೀ ಬಿ. ಟಿ. ರಾಮಣ್ಣ ಎಂಬುವರು ಸೇರಿ ೩೭,೦೩೬ ರೂಪಾಯಿಗಳನ್ನು ಸೇಲ್ಸ್ ಮ್ಯಾನ್ ಒಬ್ಬರೇ ಶ್ರೀ ಬಿ. ಟಿ. ರಾಮಣ್ಣ ಅವರು ೪೮,೭೩೪ ರೂಪಾಯಿಗಳನ್ನು ಸಂಘಕ್ಕೆ ವಂಚನೆ ಮಾಡಿದ್ದಾರೆಂದು ತಿಳಿದು ಬಂದಿದೆ. ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಈಗ ತಾವೇನು ಆ ಬಗ್ಗೆ ಉತ್ತರವನ್ನು ಹೇಳುತ್ತೇನೆಂದು ಹೇಳಿದ್ದೀರಿ ಆ ಉತ್ತರ ತಮ್ಮ ಇಲಾಖೆಯ ಅಧಿಕಾರಿಗಳು ಕೊಟ್ಟಿರತಕ್ಕ ಮಾಹಿತಿಯೇ ? ಅಥವಾ ತಾವೇನಾದರೂ ತನಿಖೆ ಮಾಡಿಸಿದ್ದೀರೋ ಎನ್ನತಕ್ಕಂತಹದ್ದು ನನಗೆ ತಿಳಿಯಲಿಲ್ಲ. ಇದರ ಬಗ್ಗೆ ಸರಿಯಾದ ಮಾಹಿತಿ ಸಿಕ್ಕಬೇಕು ಎಂದು ಆದರೆ ಇದರ ಬಗ್ಗೆ ಸರಿಯಾಗಿ ತನಿಖೆ ಮಾಡಿಸಿ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರು ಇಲ್ಲಿ ಹೇಳತಕ್ಕಂತಹದ್ದು ಅವರು ತನಿಖೆ ಮಾಡಿಸಿ ಇದನ್ನು ತಂದು ಓದುತ್ತಿದ್ದಾರೋ ? ಯಾರೋ ತಂದು ಕೊಟ್ಟದ್ದನ್ನು ಇಲ್ಲಿ ತಂದು ಓದುತ್ತಿದ್ದಾರೋ ಎಂದು ನಾನು ನಮ್ಮ ಅಧಿಕಾರಿಗಳನ್ನು ಕಳುಹಿಸಿ ವಿಚಾರಣೆ ಮಾಡಿಸಿ ಅವರಿಂದ ಬಂದಂತಹ ವರದಿಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ಶ್ರೀ ಯು. ಭೂಪತಿ.—ನನಗೆ ಬಂದಿರುವ ಮಾಹಿತಿ ಎಂದು ಪ್ರಾರಂಭದಲ್ಲೇ ಹೇಳಿದ್ದೇನೆ. ಆ ಮಾಹಿತಿ ಯಾರ ಮೂಲಕವಾದರೂ ಬರಬಹುದು. ಆದರೆ ನಾನು ತಮ್ಮನ್ನು ಕೇಳುತ್ತೇನೆ. ನೀವು ಕೊಡತಕ್ಕಂತಹ ಉತ್ತರ ನಿಮ್ಮ ಅಧಿಕಾರಿಗಳು ಕೊಟ್ಟಿರತಕ್ಕಂತಹ ಮಾಹಿತಿಯಿಂದ. ಇದರ ಬಗ್ಗೆ ದಯಮಾಡಿ ತನಿಖೆ ಮಾಡಿಸಿ. ಬೇಕಾದರೆ ಸಿ.ಬಿ.ಐ. ಗೆ ಇದನ್ನು ಒಪ್ಪಿಸಿ. ನಿಮ್ಮ ಅಧಿಕಾರಿಗಳ ಮೇಲೆ

ನಮಗಂತೂ ನಂಬಿಕೆ ಇಲ್ಲ. ದಯಮಾಡಿ ಇದನ್ನು ಸಿ. ಬಿ. ಐ. ಗೆ ಒಪ್ಪಿಸಿ, ಅವರು ತನಿಖೆ ಮಾಡಿ ವರದಿಯನ್ನು ಕೊಡಲಿ, ಆವಾಗ ಗೊತ್ತಾಗುತ್ತದೆ, ಯಾರ್‍ಯಾರು ವಂಚನೆ ಮಾಡಿದ್ದಾರೆ? ಏನಾಗಿದೆ ಎಂದು ಯಾವ ರೀತಿ ಸಹಕಾರಿ ಸಂಘಗಳು ಉಪಯೋಗವಾಗುತ್ತಿವೆ ಎಂಬುದಕ್ಕೆ ಇವೆಲ್ಲಾ ಉದಾಹರಣೆಗಳು. ಬೆಂಗಳೂರಿನಲ್ಲಿ ಹಲವಾರು ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಗಳು ಬೃಹದಾಕಾರವಾಗಿ ದೊಡ್ಡ ಭೂತದೋಪಾಧಿಯಲ್ಲಿ ಬೆಳೆಯುತ್ತಿವೆ ಎಂಬುದಾಗಿ ಪತ್ರಿಕೆಗಳಲ್ಲೇ ಬಂದಿದೆ. ಅವರು ಲಕ್ಷಾಂತರ ರೂಪಾಯಿಗಳನ್ನು ಪೋಲು ಮಾಡುತ್ತಿದ್ದಾರೆ. ರೆವಿನ್ಯೂ ಲ್ಯಾಂಡ್‌ನ್ನು ಖರೀದಿಮಾಡಿ ಲೇಔಟ್‌ಗಳನ್ನು ಮಾಡಿ ಮಾರಾಟ ಮಾಡುತ್ತಿದ್ದಾರೆ ಬಿ.ಡಿ.ಎ. ಜೊತೆಗೆ ಕಾಂಪಿಟ್ ಮಾಡುತ್ತಿದ್ದಾರೆ. ಇದರಿಂದಾಗಿ ಬಿ.ಡಿ.ಎ. ಸೈಟುಗಳ ಬೆಲೆ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದು ಇವತ್ತಿನವರೆಗೂ ನನಗಂತೂ ತಿಳಿದು ಬಂದಿಲ್ಲ. ಇದನ್ನು ಮೊದಲು ಸ್ವಲ್ಪ ತಡೆಹಿಡಿದಿದ್ದರು. ಈವಾಗ ಅವುಗಳಿಗೆ ಯಾವುದೇ ಅಡ್ಡಿ ಇಲ್ಲದೆ ಬೆಳೆಯುತ್ತಿವೆ ವಿಶ್ವಭಾರತಿ ಹೌಸಿಂಗ್ ಸೊಸೈಟಿ ಎಂದು ಇದೆ. ಅವರು ಕೊಡತಕ್ಕಂಥ ಪೇಪರ್ ಅಡ್ವರ್‌ಟೈಜ್‌ಮೆಂಟ್ ಏನು? ಡೆಕ್ಕನ್ ಹೆರಾಲ್ಡ್‌ನಲ್ಲಿ ಮುಖ ಪುಟದಲ್ಲೇ ಬಂದಿದೆ. ಅದಕ್ಕೆ ಸುಮಾರು ೨೦-೨೫ ಸಾವಿರ ರೂಪಾಯಿಗಳಾಗಬಹುದು. ಇದರಿಂದ ಎಷ್ಟು ಲಾಭ ಇರಬೇಕೆಂಬುದನ್ನು ತಾವು ದಯಮಾಡಿ ಆಲೋಚನೆ ಮಾಡಬೇಕಾಗಿದೆ. ಕೆಲವು ಕಾರ್ಮಿಕರ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಗಳೂ ಇವೆ. ಉದಾಹರಣೆಗೆ ಹೇಳುವುದಾದರೆ ಎಚ್.ಎ.ಎಲ್. ನವರ ಹೌಸಿಂಗ್ ಸೊಸೈಟಿ ಕೆಲವು ಉತ್ತಮವಾಗಿ ಉಪಯೋಗಿಸಿಕೊಳ್ಳುತ್ತಿರಬಹುದು. ಕೆಲವರು ಪೋಲು ಮಾಡಿರಬಹುದು. ಆದರೆ ಪೋಲು ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಮೋಸ ಮಾಡತಕ್ಕ ಹೌಸಿಂಗ್ ಸೊಸೈಟಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅದನ್ನು ದಯಮಾಡಿ ತಿಳಿಸಬೇಕು. ಇದರ ಜೊತೆಗೆ ಸಹಕಾರಿ ಸಕ್ಕರೆ ಕಾರ್ಖಾನೆ ಬಗ್ಗೆ ಅದೇ ರೀತಿ ಸಹಕಾರಿ ನೂಲಿನ ಗಿರಣಿಯ ಬಗ್ಗೆ ತಮ್ಮ ವರದಿಯಲ್ಲಿ ಹೇಳಿದ್ದೀರಿ. ಇವೊತ್ತಿನ ದಿವಸ ಸಹಕಾರಿ ಸಕ್ಕರೆ ಕಾರ್ಖಾನೆಯ ಬಗ್ಗೆ ಹೇಳುವುದಾದರೆ, ಹಿರಿಯೂರಿನ ವಾಣಿ ವಿಲಾಸ್ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಡಿಸ್‌ಪ್ಯೂಟ್ ಬಹಳ ದಿವಸಗಳ ಹಿಂದಿನಿಂದಲೂ ಇದೆ. ಅದೇ ರೀತಿ ಸಹಕಾರಿ ಹತ್ತಿ ಗಿರಣಿಯ ಬಗ್ಗೆ ಹೇಳುವುದಾದರೆ ಬಿಜಾಪುರದಲ್ಲಿರುವ ಸಹಕಾರಿ ಸ್ಪಿನ್ನಿಂಗ್ ಮಿಲ್‌ನ ಡಿಸ್‌ಪ್ಯೂಟ್ ಬಹು ದಿವಸಗಳ ಹಿಂದಿನಿಂದಲೂ ಇದೆ. ಮಾನ್ಯ ಸಚಿವರನ್ನು ಭೇಟಿಯಾಗಲು ಅಲ್ಲಿಂದ ಕಾರ್ಮಿಕರು ಯಾತ್ರೆ ಬಂದಿದ್ದರು. ಅವರಿಗೆ ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ದುಡ್ಡು ಕೊಡುತ್ತೇನೆಂದು ಹೇಳಿದ್ದೀರಿ. ಆದರೆ ಇದುವರೆಗೂ ಏನನ್ನು ಪ್ರಾರಂಭ ಮಾಡಿಲ್ಲ. ಅದು ಏನು ಎಂದು ನನಗೆ ಗೊತ್ತಾಗಲಿಲ್ಲ. ವರ್ಕ್ ಬೋರ್ಡ್ ಬಗ್ಗೆ ಕಾರ್ಮಿಕರು ಒಪ್ಪುವುದಾದರೆ ಪ್ರಾರಂಭ ಮಾಡುತ್ತೇನೆಂದು ಸಚಿವರು ಹೇಳುತ್ತಾರೆ. ಈ ಬಗ್ಗೆ ಕಾರ್ಮಿಕ ಸಚಿವರು ಎರಡೂ ಕಡೆಯವರನ್ನು ಕರೆಯಿಸಿ ಮಾತುಕತೆ ಮಾಡಿ ಇತ್ಯರ್ಥಪಡಿಸಬಹುದು. ಆದಷ್ಟು ಬೇಗ ಈ ಬಗ್ಗೆ ನಿರ್ಣಯ ತೆಗೆದುಕೊಂಡರೆ ಒಳ್ಳೆಯದೆಂದು ನನಗನ್ನಿಸುತ್ತಿದೆ. ಈ ರೀತಿಯ ಅನೇಕ ಉದಾಹರಣೆಗಳನ್ನು ನಾನು ಕೊಡಬಹುದು. ಆದರೆ ನನಗೆ ತಾವು ೧೦ ನಿಮಿಷ ಟೈಮು ಕೊಟ್ಟಿದ್ದೀರಿ. ಅದಕ್ಕಾಗಿ ಉದಾಹರಣೆಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಾರೆ ನನ್ನ ಅಭಿಪ್ರಾಯದಲ್ಲಿ ಈ ಸಹಕಾರಿ ಚಳುವಳಿ ಕೆಲವೇ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಾತ್ರ ನಮ್ಮ ದೇಶದಲ್ಲಿ ಮೀಸಲಾಗಿದೆಯೇ ವಿನಹ, ಯಾರು ಆರ್ಥಿಕ ಹಾಗೂ ಸಾಮಾಜಿಕ ಅನ್ಯಾಯಗಳಿಗೆ ಗುರಿಯಾಗಿದ್ದಾರೋ ಅವರು ಈ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಆ ವರ್ಗಕ್ಕೆ ಇವುಗಳು ಮುಟ್ಟುತ್ತಿಲ್ಲ, ಆ ಜನಗಳಿಗೆ ಇವುಗಳು ಮುಟ್ಟುತ್ತಿಲ್ಲ, ಮಧ್ಯದಲ್ಲೇ ಹೋಗುತ್ತಿವೆ. ಇದನ್ನು ತಪ್ಪಿಸುವುದಕ್ಕೆ ಸಹಕಾರಿ ಇಲಾಖೆಯಲ್ಲಿ ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಎಂದು ಹೇಳಿ ಹಲವಾರು ಸಮಿತಿಗಳು ಕೊಟ್ಟಂತಹ ವರದಿಗಳು ಇವೆ. ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು ಕೊಟ್ಟಂತಹ ವರದಿಯೂ ಕೂಡ ಇದೆ. ಆ ವರದಿಗಳನ್ನು ಎಷ್ಟರ ಮಟ್ಟಿಗೆ ಜಾರಿಗೆ ತಂದಿದ್ದೀರಿ? ವರದಿಗಳು ವರದಿಗಳಾಗಿಯೇ ಉಳಿಯುವುದಕ್ಕೆ ಬದಲಾಗಿ ಅವುಗಳನ್ನು ಕಾರ್ಯರೂಪಕ್ಕೆ ತರುವುದು ಬಹಳ ಮುಖ್ಯ. ಯಾವುದೋ ಒಂದು ವಿಭಾಗಕ್ಕೆ ಹಣವನ್ನು ಸ್ವಲ್ಪ ಜಾಸ್ತಿ ಕೊಡಬಹುದು. ಒಂದು ವಿಭಾಗಕ್ಕೆ ಸ್ವಲ್ಪ ಹಣವನ್ನು ಕೊಡಬಹುದು. ಅದಲ್ಲ ಮುಖ್ಯ. ನಂತರ ಕಾರ್ಮಿಕರ ಸೊಸೈಟಿಯ ಬಗ್ಗೆ ಹೇಳುವುದಾದರೆ ಬೀಡಿ ಸೊಸೈಟಿಯನ್ನು ತೆಗೆದುಕೊಂಡರೆ, ಇಲ್ಲಿರತಕ್ಕ ಬೀಡಿ ಕಾರ್ಮಿಕರ ಸೊಸೈಟಿಗೂ, ಕೇರಳದಲ್ಲಿರತಕ್ಕ ಬೀಡಿ ಕಾರ್ಮಿಕರ ಸೊಸೈಟಿಗೂ ಬಹಳಷ್ಟು ವ್ಯತ್ಯಾಸ ಇದೆ. ಅಲ್ಲಿರತಕ್ಕ ಸೌಲಭ್ಯಗಳು ಇಲ್ಲಿರತಕ್ಕ ಕಾರ್ಮಿಕರಿಗೆ ಸಿಕ್ಕುತ್ತಿಲ್ಲ. ಕಾರಣ ನಾವು ಸೊಸೈಟಿಗಳನ್ನು ಮಾಡುತ್ತೇವೆಯೇ ವಿನಹ we don't

find any market to sell the goods. Individuals will compete definitely with the cooperative organisations. ಅವರಿಗೆ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ರೀತಿಯ ವ್ಯವಸ್ಥೆಯನ್ನು ಮಾಡುವುದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ಬಗ್ಗೆ ತಾವು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ರಾಜ್ಯದಲ್ಲಿ ಗೋಡೌನ್ ಕಟ್ಟುವುದಕ್ಕೆ ಸರ್ಕಾರ ಹಣ ಮಂಜೂರಾತಿಯನ್ನು ನೀಡುತ್ತಿದೆ ಅದು ಸಂತೋಷದ ವಿಚಾರ. ನನ್ನ ಹುಟ್ಟಿದ ಊರಿನಲ್ಲಿ ಇರುವಂತಹ ಗೋಡೌನ್‌ನಲ್ಲಿ ಮಾಜಿ ಶಾಸಕರೊಬ್ಬರು ಬೀಡಿ ಎಲೆಗಳನ್ನು ತುಂಬಿಕೊಂಡಿದ್ದಾರೆ. ಈ ರೀತಿಯ ಉಪಯೋಗವನ್ನು ಗೋಡೌನ್‌ಗಳಲ್ಲಿ ಮಾಡಿಕೊಳ್ಳುತ್ತಿದ್ದಾರೆ. ಯಾವ ಉದ್ದೇಶಕ್ಕಾಗಿ ಗೋಡೌನ್‌ಗಳನ್ನು ಕಟ್ಟಲಾಗುತ್ತಿದೆಯೋ ಆ ಉದ್ದೇಶ ಇದರಿಂದ ಸಾಧನೆಯಾಗುತ್ತಿಲ್ಲ. ಅದರಿಂದ ಜನತೆಗೆ ಉಪಯೋಗವಾಗುತ್ತಿಲ್ಲವೆಂದು ನನ್ನ ಅಭಿಪ್ರಾಯ. ಈ ರೀತಿಯ ಅನೇಕ ಉದಾಹರಣೆಗಳಿವೆ. ಮಾರ್ಕೆಟ್ ಕಮಿಟಿಗಳಲ್ಲಿ ರಶೀತಿಯನ್ನು ಕೊಡುವಾಗ ಎರಡು ರೀತಿಯ ರಶೀತಿಗಳನ್ನು ಬರೆಯುತ್ತಾರೆ. ಮುಂದುಗಡೆ ಬರೆಯತಕ್ಕದ್ದು ಆಡಿಟ್ ಲೆಕ್ಕ. ಹಿಂದುಗಡೆ ಬರೆಯತಕ್ಕದ್ದು ರೈತರ ಲೆಕ್ಕ. ಕಮಿಷನ್ ಎಷ್ಟು ತೆಗೆದುಕೊಳ್ಳಬೇಕು, ಯಾವ ರೀತಿ ಮಾಡಬೇಕೆಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಈ ರೀತಿ ಎರಡು ಲೆಕ್ಕ ಬರೆಯುವುದನ್ನು ಮೊದಲು ತಪ್ಪಿಸಬೇಕು. ಮಾರ್ಕೆಟ್ ಕಮಿಟಿಗಳಲ್ಲಿ ಇರತಕ್ಕ ದಳ್ಳಾಳಿಗಳು ಯಾವರೀತಿ ಮೋಸ ಮಾಡುತ್ತಾರೆ ಎನ್ನತಕ್ಕ ವಿಚಾರ ನನಗೆ ಸ್ವಲ್ಪ ಗೊತ್ತಿದೆ. ನಂ. ೧ ರಶೀತಿ ಆಡಿಟ್ ಲೆಕ್ಕ, ನಂ. ೨ ರಶೀತಿ ರೈತರ ಲೆಕ್ಕ. ನಂ. ೨ ರಶೀತಿಯಲ್ಲಿ ರೈತರಿಗೆ ಆಸೆ ತೋರಿಸಿ ಬೆಲೆ ಜಾಸ್ತಿ ಕೊಡಿಸುತ್ತೇವೆಂದು ಮಾಲನ್ನು ಖರೀದಿ ಮಾಡುತ್ತಾರೆ. ಯಾವುದೇ ಅಧಿಕೃತವಾದ ರಶೀತಿಯನ್ನು ಇವರು ಕೊಡುವುದಿಲ್ಲ. ಈ ತರಹ ಖರೀದಿ ಮಾಡತಕ್ಕವರು ಜಾಸ್ತಿಯಾಗಿದ್ದಾರೆ. ದಳ್ಳಾಳಿಗಳ ಕೈಗೆ ರೈತನ ಮಾಲು ಹೋದರೆ ಲೀಗಲ್ ಆಗಿ ಕೋರ್ಟಿಗೆ ಹೋಗುವುದಕ್ಕೆ ಅವಕಾಶವಿಲ್ಲ. ನಡೆಯತಕ್ಕ ಅನ್ಯಾಯಗಳನ್ನು ತಪ್ಪಿಸಲಿಕ್ಕೆ ದಯಮಾಡಿ ಮಾನ್ಯಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕ ಹತ್ತಿಯನ್ನು ಮಾರ್ಕೆಟ್ ಸೊಸೈಟಿಗಳಲ್ಲಿ ಖರೀದಿ ಮಾಡುತ್ತಿದ್ದಾರೆಯೋ ಎಂದರೆ ಅದು ಸಾಧ್ಯವಾಗಿಲ್ಲ. ಅದಕ್ಕೆ ಬರೀ ರಾಜ್ಯಸರ್ಕಾರವೇ ಕಾರಣವೆಂದು ಹೇಳುವುದಿಲ್ಲ. ಹತ್ತಿ ದರವನ್ನು ಫಿಕ್ಸ್ ಮಾಡತಕ್ಕವರು ಮತ್ತು ಸಕ್ಕರೆ ಬೆಲೆಯನ್ನು ಫಿಕ್ಸ್ ಮಾಡತಕ್ಕವರು ಕೇಂದ್ರದವರು. ಮಾಡಿದಂತಹ ಉತ್ಪಾದನೆಯನ್ನು ಖರೀದಿ ಮಾಡದಿದ್ದರೆ ಪುನಃ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇವೊತ್ತು ಎಷ್ಟೋ ಕೈಗಾರಿಕೆಗಳು ಮುಚ್ಚಿಕೊಂಡು ಹೋಗುತ್ತಿವೆ. ಇವೊತ್ತು ರೈತರಿಗೆ ಕೊಡತಕ್ಕ ಕಬ್ಬಿನ ದರ, ಬೆಳೆದಂತಹ ರೈತನಿಗೆ ಅದು ಸಾಕಾಗುವುದಿಲ್ಲ. ಖರ್ಚಿಗೆ ಸರಿಯಾದ ಬೆಲೆ ಸಿಗದಿದ್ದರೆ ಯಾರು ಉತ್ಪನ್ನ ಮಾಡುತ್ತಾರೆ ? ಉತ್ಪಾದನೆ ಮಾಡಿದಂತಹ ಕಬ್ಬಿಗೆ ಸರಿಯಾದ ದರ ಬರದಿದ್ದರೆ ಯಾವರೀತಿ ಕಬ್ಬನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿಯ ಲೋಪದೋಷಗಳಿವೆ. ಸರ್ಕಾರ ಇದನ್ನು ಕೂಲಂಕಷವಾಗಿ ಅಭ್ಯಾಸ ಮಾಡಿ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಸಹಕಾರಿ ಸಂಘಗಳು ನಾಶವಾಗುತ್ತಿವೆ, ಸಹಕಾರಿ ಸಂಘಗಳನ್ನು ಮುಚ್ಚಿದರೆ ಏನೂ ಉಪಯೋಗವಾಗುವುದಿಲ್ಲವೆಂದು ನನ್ನ ಅಭಿಪ್ರಾಯ.

ಅಧ್ಯಕ್ಷರು:—ಮಾನ್ಯ ಸದಸ್ಯರು ಮಾತನಾಡಲಿಕ್ಕೆ ಶುರು ಮಾಡಿ ೧೫ ನಿಮಿಷ ಆಯಿತು. ಬೇಗ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಯಮ್. ಭೂಪತಿ.—ಹಾಗಾದರೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಲು).—ಸನ್ಮಾನ್ಯ ಅಧ್ಯಕ್ಷರೆ, ಸಹಕಾರ ಚಳುವಳಿ ಅದು ಬೃಹತ್ ಚಳುವಳಿ ಅದು ಇವೊತ್ತು ತಪ್ಪುದಾರಿಗೆ ಹೋಗಿ ಅದರಿಂದ ಅನ್ಯಾಯವಾಗುತ್ತಿದೆ. ನಾನು ಬಹಳ ಹೊತ್ತು ಮಾತನಾಡದೆ, ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆಯ ಬಗ್ಗೆ ಮಾತನಾಡುತ್ತೇನೆ. ಸುಮಾರು ೬ ಕೋಟಿ ರೂಪಾಯಿಗಳ ಬಂಡವಾಳದಲ್ಲಿ ಕೋಲಾರ ಜಿಲ್ಲೆಯ ಗೌರಿಬಿದನೂರಿನಲ್ಲಿ ಒಂದೇ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಿದರು ಇವೊತ್ತು ಅದರಲ್ಲಿ ಸುಮಾರು ಮೂರು ಕೋಟಿ ರೂಪಾಯಿಗಳ ನಷ್ಟವಾಗಿದೆ. ಅದಕ್ಕೆ ಯಾರು ಕಾರಣ ಎನ್ನುವುದು ಮಾನ್ಯ ಸಹಕಾರ ಮಂತ್ರಿಗಳಿಗೆ ಗೊತ್ತು. ಅಲ್ಲಿ ದುರ್ವ್ಯವಹಾರ ನಡೆಸಿರತಕ್ಕವರು ಕೆಲವು ಪ್ರತಿಷ್ಠಿತ ವ್ಯಕ್ತಿಗಳು. ಈಗ ಅಲಂಬ್, ಗೋಕಾಕ್ ಸಹಕಾರ ಸಕ್ಕರೆ ಕಾರ್ಖಾನೆ ೧ ಕೋಟಿ

ರೂಪಾಯಿಗಳ ಬಂಡವಾಳ ಹೂಡಿ ಲಾಭ ತೆಗೆದುಕೊಳ್ಳುವುದಕ್ಕೆ ಮುಂದಾಗಿದ್ದಾರೆ. ಈ ರಿಪೋರ್ಟಿನಲ್ಲಿ ಎನ್. ಸಿ. ಡಿ. ಸಿ ಯವರು ಒಂದು ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆಂದು ಗೊತ್ತಾಯಿತು. ಈ ವರ್ಷ ಗೌರಿಬಿದನೂರು ಭಾಗದಲ್ಲಿ ಮಳೆಯೂ ಇಲ್ಲ, ಕಬ್ಬು ಇಲ್ಲ. ಕಾರ್ಖಾನೆ ಮುಚ್ಚಿರುವುದರಿಂದ ಆ ಭಾಗದ ರೈತರು ಬೆಳೆದಂತಹ ಕಬ್ಬು ಹಿಂದೂಪುರಕ್ಕೆ ಹೋಗುತ್ತಿದೆ. ಗೌರಿಬಿದನೂರು ಭಾಗದ ೮ ಸಾವಿರ ರೈತದೃಷ್ಟಿಯಿಂದ ೧೨೦೦ ಕಾರ್ಮಿಕರ ಹಿತದೃಷ್ಟಿಯಿಂದ ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಜೊತೆಗೆ ೮೭ ಲಕ್ಷ ರೂಪಾಯಿಯ ಡಿಸ್ಟಿಲರಿ ಪ್ರಾರಂಭ ಮಾಡಿದ್ದಾರೆ. ಅದಕ್ಕಾಗಿ ೪ಲಕ್ಷದ ೮೦ ಸಾವಿರ ರೂಪಾಯಿಗಳನ್ನು ಲೀಸ್ ಕೊಟ್ಟಿದ್ದಾರೆ. ಅದರಿಂದ ಲಾಭ ಬಂದಿದ್ದರೆ ಸಹಕಾರ ಸಕ್ಕರೆ ಕಾರ್ಖಾನೆ ಲಾಭದಲ್ಲಿ ಹೋಗುತ್ತಿತ್ತು. ಲಾಭ ಬರುವಂತಹದ್ದನ್ನು ಪ್ರವೇಟ್‌ನವರಿಗೆ ಕೊಟ್ಟಿದ್ದಾರೆ. ಲಾಭ ಬಾರದೆ ಇರತಕ್ಕದ್ದನ್ನು ಇವರು ಇಟ್ಟುಕೊಂಡಿದ್ದಾರೆ. ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆಯನ್ನು ಮುಚ್ಚುವ ಸ್ಥಿತಿಯಲ್ಲಿದೆ. ಕೋಲಾರ ಜಿಲ್ಲೆಯಲ್ಲಿ ಅದು ಒಂದೇ ಒಂದು ಸಕ್ಕರೆ ಕಾರ್ಖಾನೆ ಇದೆ. ಕರ್ನಾಟಕ ರಾಜ್ಯದಲ್ಲಿರತಕ್ಕ ಸಹಕಾರ ಸಕ್ಕರೆ ಕಾರ್ಖಾನೆಗಳಲ್ಲಿ ನಾಲ್ಕೈದು ಇಂತಹ ಸ್ಥಿತಿಯಲ್ಲಿವೆ. ಗೌರಿಬಿದನೂರು ಕಾರ್ಖಾನೆ ಬಹಳ ಕಡಿಮೆ ನಷ್ಟದಲ್ಲಿರತಕ್ಕ ಕಾರ್ಖಾನೆ. ನಮ್ಮ ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆಯನ್ನು ಮುಚ್ಚುವುದು ಸರಿಯಿಲ್ಲ. ಬೇರೆಯವರಿಗೆ ನ್ಯಾಯವಾಗಿ ಲೀಸ್ ಮೇಲೆ ಕೊಡಿ. ಮಂಡ್ಯ ಷುಗರ್ ಫ್ಯಾಕ್ಟರಿಗೆ ಇದನ್ನು ವಹಿಸಿ ತಕ್ಷಣ ಶುರು ಮಾಡಬೇಕೆಂದು ನನ್ನ ಕೋರಿಕೆ. ಆಡಿಟ್ ಸರಿಯಾಗಿ ಆಗಿಲ್ಲ. ಆಡಿಟ್ ರಿಪೋರ್ಟ್ ಪ್ರಕಾರ ಒಟ್ಟು ೨೩ ಸಾವಿರದ ೧೨೦ ಸೊಸೈಟಿಗಳು ಇದ್ದರೆ, ಅವುಗಳಲ್ಲಿ ಆಡಿಟ್ ಮಾಡಿ ಲೆಕ್ಕ ಕೊಟ್ಟಿರುವ ಸೊಸೈಟಿಗಳು ೧೪ ಸಾವಿರ ಸೊಸೈಟಿಗಳು ಮಾತ್ರ. ಕಾಲಕ್ಕೆ ಸರಿಯಾಗಿ ಆಡಿಟ್ ನಡೆಯದಿದ್ದರೆ ಸರಿಯಾಗಿ ಸಕ್ಕರೆ ಕಾರ್ಖಾನೆಗಳನ್ನು ಕಂಟ್ರೋಲ್ ಮಾಡದಿದ್ದರೆ ಸಹಕಾರಿ ಮೂವ್‌ಮೆಂಟ್ ಹೇಗಾಗುತ್ತದೆ? ಅರ್ಧ ಆಡಿಟ್ ಮಾಡಿರುವುದರಲ್ಲಿ ಇಷ್ಟೊಂದು ದುರುಪಯೋಗವಾಗಿದೆ. ಪೂರ್ತಿ ಎಲ್ಲಾ ಅಡಿಟ್ ಮಾಡಿದರೆ ಸುಮಾರು ೩ ಕೋಟಿ ರೂಪಾಯಿಗಳು ಆಗಬಹುದೆಂದು ಮಂಡ್ಯದ ಕೆಂಪೇಗೌಡರು ಸ್ಪಷ್ಟವಾಗಿ ಹೇಳಿದ್ದಾರೆ. ಈ ರೀತಿ ಹಣ ತಿಂದು ಹಾಕುವವರಿಗೆ ಯಾವುದೇ ರೂಲ್ಸ್ ಇಲ್ಲ. ಈಗ ಎಲ್ಲಾ ಕಡೆಯೂ ಕಂಟ್ರೋಲ್ ತಪ್ಪಿ ಹೋಗಿದೆ. ದುರುಪಯೋಗವಾಗುವುದನ್ನು ತಪ್ಪಿಸಬೇಕು, ಎಲ್ಲಾ ಸೊಸೈಟಿಗಳಲ್ಲೂ ದುರುಪಯೋಗವಾಗುವುದಿಲ್ಲ. ಈಗ ಕೆಲವೊಂದು ಸೊಸೈಟಿಗಳಲ್ಲಿ ರೈತರಿಗೆ ಸರಿಯಾದ ರೀತಿಯಲ್ಲಿ ಸಾಲ ಕೊಡುತ್ತಾರೆ. ಅಲ್ಲಿ ಸಾಲ ಕೂಡ ವಸೂಲಿ ಚೆನ್ನಾಗಿ ಆಗುತ್ತಿದೆ. ನಮ್ಮ ಊರಿನ ತಾಯಲೂರು ಸೊಸೈಟಿಯಲ್ಲಿ ಶೇಕಡ ೯೯ರಷ್ಟು ಸಾಲ ವಸೂಲಿಯಾಗುತ್ತಿದೆ ಅಲ್ಲಿ ಸಾಲ ತೆಗೆದುಕೊಡದಂಥ ರೈತರು ವಾಪಸ್ಸು ಕೊಡುತ್ತಾರೆ, ಸೊಸೈಟಿಯಲ್ಲಿ ಪುನಃ ಸಾಲ ತೆಗೆದುಕೊಳ್ಳುತ್ತಾರೆ. ಬೇರೆ ಸೊಸೈಟಿಗಳಲ್ಲಿ ಸಾಲ ಕೊಡುವಾಗಲೇ ಆರ್. ಆರ್, ಇಂಡೆಕ್ಸ್ ಎಂದು ಹೇಳಿ ೩,೦೦ ರೂಪಾಯಿಗಳಿಂದ ಹಿಡಿದುಕೊಂಡು ಕೊಡುತ್ತಾರೆ. ಆ ರೀತಿ ಮಾಡಿದಾಗ ಅವರಿಗೆ ಒಂದು ರೀತಿ ಉದಾಸೀನ ಬರುತ್ತದೆ. ನಮಗೇನು ಪುಕ್ಕಟೆ ಸಾಲ ಕೊಟ್ಟಿಲ್ಲ ೫೦೦ರೂಪಾಯಿಗಳನ್ನು ಹಿಡಿದುಕೊಂಡು ಕೊಟ್ಟಿರುತ್ತಾರೆ ಅದನ್ನು ನಾವು ವಾಪಸ್ಸು ಕೊಡುವ ಹಾಗೆ ಇಲ್ಲವೆಂದು ತಿಳಿದು ಸುಮ್ಮನಾಗಿ ಬಿಡುತ್ತಾರೆ. ಲಂಚವಿಲ್ಲದೆ ಎಲ್ಲಿಯೂ ಕೂಡ ಕೆಲಸ ಆಗುತ್ತಿಲ್ಲ. ಇದನ್ನೆಲ್ಲಾ ಸಹಕಾರಿಕ್ಷೇತ್ರದಲ್ಲಿ ಕಂಟ್ರೋಲ್ ಮಾಡದಿದ್ದರೆ ಮುಂದೆ ಬಹಳ ತೊಂದರೆಯಾಗುತ್ತದೆ.

ನಬಾರ್ಡ್‌ಸಂಸ್ಥೆಯವರು ನಮ್ಮ ಕರ್ನಾಟಕ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಜಿಯಲಜಿಸ್ಟ್ ತೋರಿಸಿದ ಕಡೆಯಲ್ಲಿ ಬಾವಿಗಳಲ್ಲಿ ನೀರು ಸಿಕ್ಕಿಲ್ಲ ಕೋಲಾರ ಮುಳಬಾಗಲು ಮತ್ತು ಗೌರಿಬಿದನೂರು ಭಾಗಗಳನ್ನು ಬ್ಲಾಕ್ ಏರಿಯಾ ಎಂದು ಘೋಷಣೆ ಮಾಡಿದ್ದಾರೆ.

ಶ್ರೀ ಆರ್. ಎನ್. ಜಾಲಪ್ಪ.—ಜಿಯಾಲಜಿಸ್ಟ್ ನೀರು ಸಿಕ್ಕುವುದಿಲ್ಲವೆಂದು ಹೇಳಿದರೆ ಅದು ನಬಾರ್ಡ್‌ನವರ ತಪ್ಪಲ್ಲ ನಬಾರ್ಡ್‌ನವರು ನಮಗೆ ಅನ್ಯಾಯ ಮಾಡುತ್ತಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಮಗೆ ಸಾಲ ಸಿಗುತ್ತಿಲ್ಲ ನಮಗೆ ಬಾವಿ ತೆಗೆಸಲು ಸಾಲ ಕೊಡದಿದ್ದರೆ ನಾವು ಹೇಗೆ ಬದುಕಬೇಕು? ಪ್ರವೇಟ್‌ನವರು ಬೋರ್‌ವೆಲ್ ಹಾಕಿಸಿದರೆ ನೀರು ಸಿಗುತ್ತದೆ ಅದೇ ಸರ್ಕಾರದವರು ಬೋರ್‌ವೆಲ್ ಹಾಕಿಸಲು ಜಿಯಾಲಜಿಸ್ಟ್ ಟೆಸ್ಟ್ ಮಾಡಿದರೆ ನೀರು ಸಿಗುವುದಿಲ್ಲ. ಕೋಲಾರ ಜಿಲ್ಲೆಯಲ್ಲಿ ಡಾರ್ಕ್ ಏರಿಯಾ ಎಂದು ಹೇಳಿದರೆ ನಾವು ಯಾವರೀತಿ ಮಾಡಬೇಕು?

ಈಗಾಗಲೇ ಡ್ರಾಟ್ ಏರಿಯಾ ಎಂದು ೫ ತಾಲ್ಲೂಕುಗಳಲ್ಲಿ ಯಾವುದೇ ರೀತಿಯ ಸಾಲಸೌಲಭ್ಯ ದೊರೆಯುತ್ತಿಲ್ಲ. ಇನ್ನು ಎಂಟು ದಿವಸಗಳಲ್ಲಿ ಮಳೆ ಬಾರದಿದ್ದರೆ ಡ್ರಾಟ್ ಏರಿಯಾ ಎಂದು ಯಾವುದೇ ರೀತಿಯ ಸಾಲ ದೊರೆಯುವುದಿಲ್ಲ ಎನ್ನುವ ಭಯ ನಮಗೆ ಉಂಟಾಗಿದೆ.

ಕೋಲಾರ ಬೆಲ್ಟ್ ಏನಿದೆ ಆ ಒಂದು ಪರಿಸ್ಥಿತಿಗೆ ಅಲ್ಲಿ ಬಂದಿದೆ. ಸಾಲ ಸೊಸೈಟಿಗೆ ಬಾರದೆ ಅದು ಪೂರ್ತಿಯಾಗಿ ನಿಂತು ಹೋಗಿ ಬಿಡುತ್ತದೆ. ಇನ್ನು ಮೇಲೆ ಪಿ.ಎಲ್.ಡಿ. ಬ್ಯಾಂಕ್‌ನವರು ಸಾಲವನ್ನು ವಸೂಲು ಮಾಡತಕ್ಕಂತಹದ್ದೇ ಒಂದು ಪ್ರಸಂಗವಾಗಿ ಬಿಡುತ್ತದೆ. ಶ್ರೀಮಾನ್ ಜಾಲಪ್ಪನವರು ಇದರ ಬಗ್ಗೆ ಶ್ರದ್ಧೆ ವಹಿಸಬೇಕು, ಅವರು ಸ್ವತಃ ಕಷ್ಟಪಟ್ಟು ವ್ಯವಸಾಯ ಮಾಡುವಂತಹ ರೈತರೇ ಆಗಿದ್ದಾರೆ. ನಬಾರ್ಡಿನವರು ಏನೊಂದು ಸುತ್ತೋಲೆಯನ್ನು ಕಳುಹಿಸಿದ್ದಾರೆ, ಅದನ್ನು ವಾಪಸು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಈಗ ನಿಜವಾಗಿಯೂ ಅದೂ ಡ್ರಾಟ್ ಆಗಿ ಬಿಡುತ್ತದೆ. ಬೆಂಗಳೂರು ಜಿಲ್ಲೆಯ ಹೊಸಕೋಟೆ ಹಾಗೂ ದೇವನ ಹಳ್ಳಿಯಲ್ಲೂ ಇದು ಪ್ರಾರಂಭವಾಗುತ್ತಿದೆ. ನಂತರ ಅದು ಶ್ರೀಮಾನ್ ವೀರಣ್ಣನವರ ತಾಲ್ಲೂಕಿಗೂ Spread ಆಗುತ್ತದೆ. ಆದ್ದರಿಂದ ಇದರ ಬಗ್ಗೆ ದಯಮಾಡಿ ಯೋಚನೆ ಮಾಡಬೇಕು. ಇದರ ಬಗ್ಗೆ ಶ್ರದ್ಧೆ ವಹಿಸಿ ಏನು ರೂಲ್ಸ್ ಮಾಡಿದ್ದಾರೆ, ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಈಗಾಗಲೇ ಸಾಲ ವಸೂಲಾತಿಯ ಬಗ್ಗೆ ಮಾರ್ಜಿನಲ್ ಫಾರ್ಮರ್ಸ್ ಹಾಗೂ ಸಣ್ಣ ರೈತರು ಯಾರು ಸಾಲವನ್ನು ತೆಗೆದುಕೊಂಡಿದ್ದಾರೆ, ಆ ಸಾಲದ ವಸೂಲಾತಿ ರದ್ದಾಗಬೇಕೆಂದು ತತ್ವಶಃ ಒಪ್ಪಿಕೊಂಡಿದ್ದೀರಿ. ನಿಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಅದು ಕೂಡ ಒಂದು. ಶ್ರೀಮಾನ್ ಗುಂಡೂರಾವ್‌ರವರು ಇದನ್ನು ಮಾಡಿದರು ಎಂದು ಅವರ ಮೇಲೆ ಏನೆಲ್ಲಾ ಮಾತನಾಡಿದೆವು. ಎಲ್ಲರಿಂದಲೂ ಅರ್ಜಿಯನ್ನು ತೆಗೆದುಕೊಂಡರು. ಈ ರೀತಿ ರದ್ದು ಮಾಡುವುದರಿಂದ ಎಷ್ಟು ಕೋಟಿ ರೂಪಾಯಿಗಳಾಗುತ್ತವೆ ಎಂಬುದನ್ನು ಅವರು ಲೆಕ್ಕ ಹಾಕಿಸಿದ್ದಾರೆ. ಅವರು ಲೆಕ್ಕ ಹಾಕಿಸಿದ ಪ್ರಕಾರ ೮೫ ಕೋಟಿ ರೂಪಾಯಿಗಳು ಆಗುತ್ತವೆಂದು ನನಗೆ ತಿಳಿದಿದೆ. ಆದ್ದರಿಂದ ಸಣ್ಣ ರೈತರ ಹಾಗೂ ಮಾರ್ಜಿನಲ್ ಫಾರ್ಮರ್ಸ್ ಅವರ ಸಾಲವನ್ನು ರದ್ದು ಮಾಡಬೇಕು. ಸಾರ್ವಜನಿಕ ಉದ್ದಿಮೆಗಳಲ್ಲಿ ೧೨೦ ಕೋಟಿ ರೂಪಾಯಿಗಳವರೆಗೆ ನಷ್ಟವಾಗುತ್ತಿದೆ. ಇದರಲ್ಲಿ ಕೆಲವೇ ಜನರು ಈ ಒಂದು ಉಪಯೋಗವನ್ನು ಪಡೆದುಕೊಂಡಿದ್ದಾರೆ. ಆ ೧೨೦ ಕೋಟಿ ರೂಪಾಯಿಗಳನ್ನು ಒರಿಸುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಆದರೆ ರೈತ ಇವತ್ತು ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾನೆ. ಅವರ ಸರಾಸರಿ ವರಮಾನವನ್ನು ತೆಗೆದುಕೊಂಡರೆ ಅದು ಒಂದು ಸಾವಿರದಿಂದ ಎರಡು ಸಾವಿರದವರೆಗೆ ಮಾತ್ರ. ಅವನು ಅತ್ಯಂತ ಕೀಳು ಮಟ್ಟದಲ್ಲಿದ್ದಾನೆ. ಇದರ ಬಗ್ಗೆ ದಯಮಾಡಿ ತಾವು ಯೋಚನೆ ಮಾಡಬೇಕು. ರೈತರ ಸಾಲ ಏನಿದೆ ಅದನ್ನು ರದ್ದು ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇದರಿಂದ ಜಾಸ್ತಿ ಹೊರೆ ಏನೂ ಆಗುವುದಿಲ್ಲ. ಸುಮ್ಮನೆ ನಬಾರ್ಡಿನವರು ಅಡ್ಡಿ ಬರುತ್ತಾರೆ. ಮಹರಾಷ್ಟ್ರದಲ್ಲಿ ಶ್ರೀಮಾನ್ ಅಂತುಳೆಯವರ ಕಾಲದಲ್ಲಿ ಬಹಳ ಧೈರ್ಯದಿಂದ ಇದನ್ನು ಮಾಡಿದರು. ನಬಾರ್ಡ್ ಹಾಗೂ ರಿಸರ್ವ್ ಬ್ಯಾಂಕನ್ನು ಸೃಷ್ಟಿ ಮಾಡಿದವರು ನಾವು. ಬ್ಯಾಂಕಲ್ಲ ನಮ್ಮನ್ನು ಸೃಷ್ಟಿ ಮಾಡಿದ್ದುದು ಎಂಬುದಾಗಿ ಅವರಿಗೆ ತಿರುಗಿಸಿ ಹೇಳಿ, ಮಹಾರಾಷ್ಟ್ರದಲ್ಲಿ ಧೈರ್ಯದಿಂದ ಸಾಲವನ್ನು ವಜಾ ಮಾಡಿದರು. ಅದೇ ರೀತಿ ತಮಿಳುನಾಡಿನಲ್ಲಿ ಎಂ. ಜಿ. ರಾಮಚಂದ್ರನ್‌ನವರು ಕೂಡ ರದ್ದು ಮಾಡಿದರು. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ, ಸಹಕಾರಿ ಚಳುವಳಿ ಬೆಳೆಯಬೇಕು ಎಂದು ಇದ್ದರೆ, ನಿಮ್ಮ ಅಧಿಕಾರಿಗಳು ಬಹಳ ಶ್ರದ್ಧೆ ವಹಿಸಬೇಕು. ಮೇಲಾಧಿಕಾರಿಗಳಿಂದ ಹಿಡಿದು, ಸೆಕ್ರೆಟರಿಯವರೆಗೆ ಪೂರ್ತಿಯಾಗಿ ನಿಮ್ಮ ಕಂಟ್ರೋಲ್‌ನಲ್ಲಿ ತೆಗೆದುಕೊಳ್ಳದಿದ್ದರೆ ಇದು ಸಾಧ್ಯವಾಗುವುದಿಲ್ಲ. ಇಷ್ಟು ಮಾತನಾಡಲು ಅವಕಾಶ ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಗಂಗಾಧರ್ (ಶ್ರವಣ ಬೆಳಗೊಳ ಕ್ಷೇತ್ರ).—ಮಾನ್ಯ ಅಧ್ಯಕ್ಷರೆ, ಸಹಕಾರ ಇಲಾಖೆಯ ಮಂತ್ರಿಗಳು ಈ ಸದನದಲ್ಲಿ ಮಂಡಿಸಿರತಕ್ಕ ಬೇಡಿಕೆಯನ್ನು ಸ್ವಾಗತಿಸುತ್ತಾ, ಕೆಲವು ಸಲಹೆಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೊಡುವುದಕ್ಕೆ ಬಯಸುತ್ತೇನೆ. ಇವೊತ್ತು ಈ ಸದನದಲ್ಲಿ ಈ ಬೇಡಿಕೆಯ ಪರವಾಗಿ ಹಾಗೂ ವಿರೋಧವಾಗಿ ತುಂಬಾ ಚರ್ಚೆಗಳಾಗಿವೆ. ಆದರೂ ಕೂಡ ನಾನಾದರೂ ಈ ಬಗ್ಗೆ ಹೇಳುವುದಾದರೆ, ಈ ಸಹಕಾರಿ ಸಂಸ್ಥೆಗಳು ಏನು ಇವೆ, ಅವುಗಳೆಲ್ಲವೂ ಕೂಡ ರಾಜಕೀಯ ವ್ಯಕ್ತಿಗಳಿಂದ ಮತ್ತು ಅಧಿಕಾರಿಗಳಿಂದ ತುಂಬಿ ದಂತಹ ಸಂಸ್ಥೆಗಳಾಗಿವೆ ಏಕೆಂದರೆ ಈಗ ತಾನೆ ಕೆಲವು

ಹಿರಿಯ ಸದಸ್ಯರು ಎಲ್ಲರೂ ಕೂಡಾ ಟೀಕೆ ಮಾಡಿದ್ದಾರೆ. ಇದಕ್ಕೊಂದು ಗಾಧೆ ನೆನಪಿಗೆ ಬರುತ್ತಿದೆ. ಅದೇನೆಂದರೆ, ''ತಾಯಿಯಂತೆ ಮಕ್ಕಳು ನೂಲಿನಂತೆ ಸೀರೆ'' ಈ ರೀತಿಯ ಗಾದೆ ಗನುಗುಣವಾಗಿ ಹಿಂದಿನಿಂದ ನಡೆದುಕೊಂಡು ಬಂದಿರತಕ್ಕಂತಹ ಈ ಸಹಕಾರಿ ಸಂಘಗಳು ಆ ರೀತಿ ಇವೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುವುದಾದರೆ, ನಮ್ಮ ಜಿಲ್ಲೆಯನ್ನೇ ತೆಗೆದುಕೊಂಡರೆ, ಜಿಲ್ಲಾ ಬ್ಯಾಂಕಿನಿಂದ ವ್ಯವಹಾರ ಮಾಡುವಂತಹ ೧೬೭ ಸೊಸೈಟಿಗಳಲ್ಲಿ, ೧೬೩ ಸೊಸೈಟಿಗಳು ಡಿಫಾಲ್ಟ್ ಆಗಿವೆ. ಈ ಸೊಸೈಟಿಗಳಿಂದ ಸರ್ಕಾರಕ್ಕೆ ಬರುವಂತಹ ಹಣ ೨,೬೫,೦೦,೦೦೦ ರೂಪಾಯಿಗಳು. ಅದರಲ್ಲೂ ಸರ್ಕಾರಕ್ಕೆ ನ್ಯಾಯವಾಗಿ ರೈತರು ಕೊಡಬೇಕಾದುದು ೧,೨೫,೦೦,೦೦೦ ರೂಪಾಯಿಗಳು. ಅಂದ ಮೇಲೆ ಇನ್ನುಳಿದ ೧,೪೦ ೦೦,೦೦೦ ರೂಪಾಯಿಗಳನ್ನು ಅಲ್ಲಿ ಆಡಳಿತ ಮಾಡುವಂತಹ ಜನ ಮತ್ತು ಅಲ್ಲಿ ಏನು ಕಾರ್ಯದರ್ಶಿಗಳು ಎಂದು ಇದ್ದಾರೆ. ಅವರು ಈ ಹಣವನ್ನು ಕಬಳಿಸಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಈ ೧೬೩ ಸೊಸೈಟಿಗಳಲ್ಲೂ ಕೂಡ ಏನು ಕಾರ್ಯ ಮಾಡಿದ್ದರೆಂದರೆ ಸಂಮ್ಮಾನ ಸಂಬಳ ತೆಗೆದುಕೊಳ್ಳುವುದು ಇಷ್ಟೆಲ್ಲಾ ಕೊಟ್ಟಿದ್ದರೂ, ಈ ಒಂದು ಅವ್ಯವಸ್ಥೆಯಾಗಿದೆ ಇಡೀ ಕರ್ನಾಟಕದಲ್ಲಿ ಹಾಸನ ಜಿಲ್ಲೆ ಎಂದರೆ ಕಳ್ಳರ ಸಂತೆ ಎಂದು ನಾನು ಹೇಳಬೇಕಾಗುತ್ತದೆ. ಆದರೆ ಜನತಾ ಸರ್ಕಾರ ಈಗ ತಾನೆ ೨ ವರ್ಷಗಳಿಂದ ಅಧಿಕಾರಕ್ಕೆ ಬಂದು ಏನು ಮಾಡುವುದಕ್ಕಾಗುತ್ತದೆ ಈ ಎರಡು ವರ್ಷಗಳಲ್ಲಿ ''ಎತ್ತು ಏರಿಗೆ ಎಳೆದರೆ, ಎಮ್ಮೆ ನೀರಿಗೆ ಎಳೆಯಿತು'' ಎಂಬ ಗಾದೆಯಂತೆ, ಈ ಎರಡು ವರ್ಷಗಳಲ್ಲಿ ಏನನ್ನೂ ಮಾಡದೇ ಇದ್ದರೂ ಕೂಡ ಸಹಕಾರಿ ಸಂಘಗಳ ಬಗ್ಗೆ ಏನಿದೆ ಎಂಬುದನ್ನು ಸರ್ಕಾರದವರ ಕೂಲಂಕುಷವಾಗಿ ಪರಿಶೀಲಿಸಿದ್ದಾರೆ. ಮುಂದೆ ಈ ಸೊಸೈಟಿಗಳು ಸರಿಯಾಗಿ ಆಗಬೇಕೆಂಬುದನ್ನು ತೀರ್ಮಾನ ಮಾಡಿದ್ದಾರೆ. ಆಲೂರು ಟಿ.ಎ.ಪಿ.ಸಿ.ಎಂ.ಎಸ್.ನಲ್ಲಿ ೧,೦೫,೦೦೦ ರೂಪಾಯಿಗಳು ದುರುಪಯೋಗವಾಗಿವೆ. ಹಿಂದಿನ ಎರಡು ವರ್ಷಗಳಲ್ಲಿ ಆ ರೀತಿ ದುರುಪಯೋಗ ಮಾಡಿದಂತಹ ಅಧಿಕಾರಿಗಳಿಗೆ ಬಡ್ತಿಯನ್ನು ಕೊಟ್ಟು ತಿಂಗಳಿಗೆ ಅವರಿಗೆ ೧೦೦ ರೂಪಾಯಿಗಳನ್ನು ರಿಕವರಿ ಮಾಡತಕ್ಕ ಸರ್ಕಾರಿ ಆದೇಶವನ್ನು ಹೊರಡಿಸಿದ್ದಾರೆ. ಇದು ಸರಿಯೇ? ಇದನ್ನು ಎಲ್ಲಾ ಸದಸ್ಯರೂ ಗಮನಿಸಬೇಕೆಂದು ಹೇಳುತ್ತೇನೆ. ಅದೇ ರೀತಿ ಸಕಲೇಶಪುರ ಟಿ.ಎ.ಪಿ.ಸಿ.ಎಂ.ಎಸ್.ನಲ್ಲಿ ೭೫,೦೦೦ ರೂಪಾಯಿಗಳು ದುರುಪಯೋಗವಾಗಿದೆ. ಆದರೂ ಕೂಡ ಆ ಅಧಿಕಾರಿ ಇನ್ನೂ ಅಧಿಕಾರದಲ್ಲಿದ್ದಾರೆ. ಮತ್ತೆ ಅರಕಲಗೂಡು ಸೊಸೈಟಿಯಲ್ಲಿ ೩ ಲಕ್ಷ ರೂಪಾಯಿಗಳು ದುರುಪಯೋಗವಾಗಿದೆ. ಆದರೂ ಅಧಿಕಾರಿಗಳೂ ಇನ್ನೂ ಇದ್ದಾರೆ. ಅವರನ್ನು ಅಧಿಕಾರದಲ್ಲಿ ಮುಂದುವರಿಸತಕ್ಕಂಥದು ಸರಿಯೇ ಎಂಬುದಾಗಿ ಕೇಳುತ್ತಿದ್ದೇನೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಇದೆಲ್ಲವನ್ನೂ ಸರಿಪಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಸಹಕಾರಿ ಸಕ್ಕರೆ ಕಾರ್ಖಾನೆಯ ಬಗ್ಗೆಯೂ ಕೂಡ ಈಗಾಗಲೇ ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲೂ ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ಎಂಬುದಾಗಿ ಇದೆ. ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಸಹಕಾರಿ ರಂಗದಲ್ಲಿ ಸಕ್ಕರೆ ಕಾರ್ಖಾನೆಯೊಂದನ್ನು ಮಾಡಿರುವ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಇವರೆಡಕ್ಕೂ ಇದುವರೆವಿಗೂ ಇನ್‌ಸೆಂಟೀವ್ ಕೊಟ್ಟಿಲ್ಲ. ಆದ್ದರಿಂದ ಸರ್ಕಾರ ಕೂಡಲೆ ಇನ್‌ಸೆಂಟೀವ್ ಕೊಡುವಂತಹ ಏರ್ಪಾಡನ್ನು ಮಾಡಬೇಕು. ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ೧೯೭೭ರಲ್ಲಿ ಸ್ಥಾಪನೆಯಾಗಿದ್ದು ಈ ಸಾಲಿನ ನವಂಬರ್‌ನಲ್ಲಿ ಟ್ರೈಯ್ಯಲ್ ಕ್ರಷ್ಷಿಂಗ್ ಪ್ರಾರಂಭ ಮಾಡಬೇಕೆಂದಿದ್ದಾರೆ. ಇದಕ್ಕೆ ಐ.ಸಿ.ಐ.ಸಿ.ಎಸ್.ನಿಂದ ಸಹಾಯ ಬರುವುದು ಬಹಳ ನಿಧಾನವಾಗಿದ್ದುದರಿಂದ ರಾಜ್ಯ ಸರ್ಕಾರ ಬ್ರಿಡ್ಜ್ ಲೋನ್ ೨ ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಈ ಎರಡು ಕೋಟಿ ರೂಪಾಯಿಗಳಿಗೆ ಬಡ್ಡಿ ಎಷ್ಟಾಗಿದೆ ಎಂದರೆ, ೧ ೪೭ ಲಕ್ಷ ರೂಪಾಯಿಗಳು. ''ಮೂಗಿಗಿಂತ ಮೂಗುತಿ ಭಾರ'' ಎನ್ನುವ ಗಾಧೆಯಂತೆ ಸಾಲಕ್ಕಿಂತ ಬಡ್ಡಿಯೇ ಹೆಚ್ಚಾಗಿದೆ. ಐ.ಡಿ.ಬಿ ಹಾಗೂ ಐ.ಸಿ.ಐ.ಸಿ.ಎಸ್. ಇಲ್ಲಿಂದ ಕೂಡ ೩ ಕೋಟಿ ರೂಪಾಯಿಗಳ ಸಾಲ ಬಂದಿದೆ. ಅನಂತರ ಅಪೆಕ್ಸ್ ಬ್ಯಾಂಕ್‌ನಿಂದ ೧ ಕೋಟಿ ರೂಪಾಯಿಗಳ ಸಾಲ ಮಂಜೂರಾಗಿದೆ. ಇಷ್ಟೆಲ್ಲಾ ಆದ ಮೇಲೂ ಕಾರ್ಖಾನೆಯನ್ನು ಸ್ಥಾಪನೆ ಮಾಡುವಂತಹ ಕಾಲದಲ್ಲಿ ನೀರಿನ ವ್ಯವಸ್ಥೆಯಾಗಿಲ್ಲ. ಮತ್ತೆ ಕ್ರಾಪಿಂಗ್ ಪ್ಯಾಟ್ರನ್ ಅಂದರೆ ಕಬ್ಬು ಬೆಳೆಯುವಂಥದ್ದು, ಅದೂ ಕೂಡ ಆಗಿಲ್ಲ. ಇದನ್ನೆಲ್ಲಾ ನೋಡಿದಾಗ ಈ ಕಾರ್ಖಾನೆಯ ಈ ದುಸ್ಥಿಗೆ ಯಾರು ಕಾರಣರು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಇಷ್ಟೆಲ್ಲಾ ಆದ ಮೇಲೂ ಸಕ್ಕರೆ ಕಾರ್ಖಾನೆ ಲಾಸಾಗುವುದಕ್ಕೆ ಕಾರಣವೇನೆಂದರೆ ಇದಕ್ಕೆ ಪೂರ್ತಿಯಾಗಿ ಈ ಸರ್ಕಾರವೂ ಕಾರಣ ಎಂದು ಅಂತ ನಾನು ಹೇಳುವುದಿಲ್ಲ. ಏಕೆಂದರೆ ''ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆ'' ಮಾಡಿರುವ ರೀತಿಯಲ್ಲಿ ಲೆವಿ ಹುಂಗರನ್ನು ಕೂಡ ತಕ್ಕಂತಹ ಪದ್ಧತಿ

[illegible] ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಬಿಹಾರ್ ರಾಜ್ಯದಲ್ಲಿ ಒಂದು ಕ್ವಿಂಟಾಲ್ ಸಕ್ಕರೆಯು [illegible] ೪೩೫.೩೨ ರೂಪಾಯಿಗಳು ಇದ್ದರೆ; ಆಸ್ಸಾಮಿನಲ್ಲಿ ೩೩೫.೬೫ ರೂಪಾಯಿಗಳು ಒಂದು ಕ್ವಿಂಟಾಲ್‌ಗೆ [illegible]. ಅದೇ ರೀತಿ ಕೇರಳದಲ್ಲಿ ಒಂದು ಕ್ವಿಂಟಾಲ್‌ನ ಬೆಲೆ ೩೭೫ ರೂಪಾಯಿಗಳು ಇದೆ. ಮಧ್ಯ ಪ್ರದೇಶದಲ್ಲಿ ೪೧೬ ರೂಪಾಯಿ ಒಂದು ಕ್ವಿಂಟಾಲ್‌ಗೆ ಇದೆ. ರಾಜಾಸ್ಥಾನದಲ್ಲಿ ೪೧೫ ರೂಪಾಯಿಗಳು ಒಂದು ಕ್ವಿಂಟಾಲ್‌ಗೆ ಇದೆ. ಉತ್ತರ ಪ್ರದೇಶದಲ್ಲಿ ೪೩೨ ರೂಪಾಯಿಗಳು ಇದೆ. ಕರ್ನಾಟಕದಲ್ಲಿ ಒಂದು ಕ್ವಿಂಟಾಲ್ ಸಕ್ಕರೆ ಬೆಲೆ ೩೫೯ ರೂಪಾಯಿಗಳು ಇವೆ. ಈ ರೀತಿಯ ಲಾಸ್‌ಗೆ ಯಾವ ಹೊಣೆ ಎಂಬುದನ್ನು ಇಲ್ಲಿ ಹೇಳಬೇಕಾಗಿದೆ.

೮-೦೦ ಪಿ.ಎಂ.

ಇವೊತ್ತು ರೈತರಿಗೆ ಎಕರೆಯೊಂದಕ್ಕೆ ಎಲ್ಲಾ ಸೇರಿ ಸುಮಾರು ೬ ಸಾವಿರ ರೂಪಾಯಿಗಳು ಖರ್ಚಾಗುತ್ತದೆಂದು ಹೇಳುವಾಗ ಕ್ವಿಂಟಾಲ್ ಭತ್ತಕ್ಕೆ ೨೨೦೫ ರೂಪಾಯಿಗಳು ತಗಲುತ್ತದೆ. ಈ ಸಂದರ್ಭದಲ್ಲಿ ಭಾರತ ಸರ್ಕಾರ ನಿಗದಿ ಮಾಡಿರುವ ೧೪೦ ರೂಪಾಯಿಗಳು ಬೆಲೆ ಏನೇನು ಸಾಲದು. ಹೀಗಾದರೆ ರೈತರಿಗೆ ಆದಾಯ ಎದಿಂದ ಬರುತ್ತದೆಂದು ವಿಚಾರ ಮಾಡಬೇಕಾಗಿದೆ. ಆದ್ದರಿಂದ, ಸರ್ಕಾರದವರು ಈ ಬಗ್ಗೆ ಗಮನಹರಿಸಿ ರೈತರಿಗೆ ಅನುಕೂಲವಾಗುವ ರೀತಿ ವ್ಯವಸ್ಥೆ ಮಾಡುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಬೇಕೆಂದು ಈ ಮೂಲಕ ಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ. ಚಿಟ್‌ಫಂಡ್ ವ್ಯವಹಾರದಲ್ಲಿ ಲೇವಾದೇವಿಗಾರರಿಗೆ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುವಂತ ವ್ಯವಸ್ಥೆ ಮಾಡಲು ಮಂತ್ರಿಗಳು ಗಮನ ಹರಿಸಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಹೋದ ವರ್ಷ ತೆಂಗಿನಕಾಯಿ ಬೆಲೆ ಸಾವಿರಕ್ಕೆ ೩-೪ ಸಾವಿರ ರೂಪಾಯಿಗಳು ಇತ್ತು. ಈ ಸಾರಿ ೨ ಸಾವಿರ ರೂಪಾಯಿಗಳು ಆಗಿರುವುದರಿಂದ ಸಹಕಾರ ಸಂಘದ ವತಿಯಿಂದ ಕಾಫಿ ಬೋರ್ಡ್ ರಚನೆ ಮಾಡುವುದಕ್ಕೆ ಅವಕಾಶ ಮಾಡಬೇಕೆಂದು ಮಂತ್ರಿಗಳನ್ನು ಪ್ರಾರ್ಥಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ.ಜಿ. ಬೆಲ್ಲದ್ (ಧಾರವಾಡ) —ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರಾದ ಜಾಲಪ್ಪನವರು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ನನ್ನ ಅನಿಸಿಕೆಗಳನ್ನು ತಮ್ಮ ಮೂಲಕ ಸಚಿವರ ಗಮನಕ್ಕೆ ತರಬಯಸುತ್ತೇನೆ. ಇವೊತ್ತಿನ ದಿವಸ, ಕರ್ನಾಟಕ ರಾಜ್ಯದಲ್ಲಿ ರೈತನಿಗೆ ಹೆಚ್ಚಿನ ಪ್ರಾಧಾನ್ಯತೆ ಇರುವ ರಾಜ್ಯದಲ್ಲಿ ಸಹಕಾರ ಸಂಸ್ಥೆಗಳು ಎಷ್ಟು ಫಲಪ್ರದವಾಗಿ ಬೆಳೆಯಬೇಕಾಗಿತ್ತೋ ಅಷ್ಟು ಆಗಿಲ್ಲ. ಈ ದಿಸೆಯಲ್ಲಿ ಈಗಾಗಲೇ ಅನೇಕ ಹಿರಿಯ ಸದಸ್ಯರು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯಲ್ಲಿ ತೊಡಗಿರುವ ರೈತ ಸಹಕಾರ ತತ್ವದ ಮೇಲೆ ಬೆಳೆದು ಮುಂದೆ ಬರುವುದು ಅವಶ್ಯಕವಾಗಿದೆ. ಈ ರಾಜ್ಯದಲ್ಲಿ ಸಹಕಾರ ತತ್ವ ಬಹಳಷ್ಟು ಬೆಳೆಯುವುದಕ್ಕೆ ಇಲ್ಲಿಯವರೆಗೆ ಆದಂತಹ ಅಡಚಣೆಗಳು ಎಂದರೆ ಮುಖ್ಯವಾಗಿ ಆಡಳಿತದಲ್ಲಿರುವ ದೋಷ. ಅಧಿಕಾರಿಗಳ ದೋಷದಿಂದ ಸಹಕಾರ ತತ್ವ ಹಾಳಾಗಿದೆ ಮತ್ತು, ರಾಜ್ಯದ ಜನರ ಕೈವಾಡದಿಂದ ಸಹಕಾರ ತತ್ವ ಹಾಳಾಗಿದೆ ಎಂದರೆ ತಪ್ಪಾಗುವುದಿಲ್ಲ. ಸಹಕಾರ ತತ್ವ ಬೇರುಬರ ಬೇಕಾದರೆ ಪಕ್ಷಾತೀತವಾಗಿ ಈ ತತ್ವದ ಆಂದೋಳನ ಈ ರಾಜ್ಯದಲ್ಲಿ ನಡೆಯಬೇಕು. ಮಾನ್ಯ ಜಾಲಪ್ಪನವರು ಇದರಲ್ಲಿ ಸಾಕಷ್ಟು ಅನುಭವಿಗಳಿದ್ದಾರೆ. ಅವರು ಈ ರಂಗದಲ್ಲಿ ಬಹಳ ದೊಡ್ಡ ಕ್ರಾಂತಿ ಕ್ರಾಂತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಎರಡು ವರ್ಷಗಳ ಅವಧಿಯಲ್ಲಿ ನಮ್ಮ ಸರ್ಕಾರ ಈ ಕ್ಷೇತ್ರದಲ್ಲಿ ಬಹಳ ದೊಡ್ಡ ಕೆಲಸ ಮಾಡಿದೆ. ಯಾವ ರೈತ ಉತ್ಪಾದನೆ ಮಾಡುತ್ತಿದ್ದಾನೆ ಅವನನ್ನು ಸಾಲದಿಂದ ಮುಕ್ತನನ್ನಾಗಿ ಮಾಡಲು ಅವನ ಮೇಲಿರುವ ಬಡ್ಡಿಯನ್ನು ಮನ್ನಾ ಮಾಡಲು ಸಹಾಯ ಮಾಡಿದೆ. ಈಗಾಗಲೇ ಬಾವಿಗಳನ್ನು ತೋಡಿಸಿ ಅವನಿಗೆ ಬೇಕಾದ ಸೌಕರ್ಯ ಸೌಲಭ್ಯಗಳನ್ನು ಒದಗಿಸಿ ಕೊಟ್ಟು ಅವನ ಉತ್ಪಾದನೆಗೆ ಸಹಾಯ ಮಾಡುತ್ತಿದೆ. ಇದು ಸ್ತುತ್ಯಾರ್ಹವಾದ ಕೆಲಸ. ಸಹಕಾರ ತತ್ವವನ್ನು ಸರಿಯಾದ ರೀತಿಯಲ್ಲಿ ಬೆಳೆಸಬೇಕಾಗಿದೆ. ಸಹಕಾರಿ ಆ್ಯಕ್ಟ್‌ನಲ್ಲಿ ಏನು ದೋಷ ಇದೆ ಅದನ್ನು ಸರಿಪಡಿಸಬೇಕು. ಅಧಿಕಾರಿಗಳಾಗಲೀ ಅಥವಾ ಯಾವುದೇ ಪದಾಧಿಕಾರಿಗಳಾಗಲೀ ಯಾವುದೇ ರೀತಿಯಲ್ಲಿ ಹಣವನ್ನು ದೋಚಿದ್ದೇ ಆದರೆ ಅವರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕು. ಎಲ್ಲದಕ್ಕಿಂತ ಆಡಳಿತವನ್ನು ಸುಧಾರಿಸುವುದು ಮುಖ್ಯವಾಗಿದೆ. ಸಹಕಾರ ತತ್ವವನ್ನು ಆಚರಣೆಯುತ ತಂದುಕೊಳ್ಳುವುದು ಮುಖ್ಯವಾಗಿದೆ. ಅದಕ್ಕೆ ಸರಿಯಾದ ರೀತಿಯಲ್ಲಿ ತರಬೇತಿ ಕೊಡುವ ವ್ಯವಸ್ಥೆ ಆಗಬೇಕಾಗಿದೆ.

ಇವೊತ್ತಿನ ದಿವಸ, ಚಾಲ್ತಿ ಸಾಲ, ಬೆಳೆ ಸಾಲ, ಅಲ್ಪಾವಧಿ ಸಾಲ, ದೀರ್ಘಾವಧಿ ಸಾಲ ಇತ್ಯಾದಿಗಳನ್ನು ಕೊಡುತ್ತಾರೆ. ಈ ಸಾಲವನ್ನು ಪಡೆಯುವಾಗ ಅನೇಕ ಸಂದರ್ಭಗಳಲ್ಲಿ ರೈತರು ತೊಂದರೆಪಡಬೇಕಾಗಿದೆ, ಆದ್ದರಿಂದ ಈ ತೊಂದರೆಯನ್ನು ತಪ್ಪಿಸತಕ್ಕ ವ್ಯವಸ್ಥೆ ಮಾಡಬೇಕಾಗಿದೆ. ಹಗಲೆಲ್ಲ ರಿಪೋರ್ಟ್ ತೆಗದು ಕೊಂಡು ಸೊಸೈಟಿಗೆ, ಬ್ಯಾಂಕಿಗೆ ತೆಗೆದುಕೊಂಡು ಹೋಗುವ ಕ್ರಮ ಏನಿದೆ ಇದರಲ್ಲಿ ದೋಷ ಇದೆ. ಇದನ್ನು ಮೊದಲು ಹೋಗಲಾಡಿಸಬೇಕು. ಯಾವುದೇ ಸಾಲವಾಗಲಿ, ಭೂಮಿಯ ಹಿಡುವಳಿ, ಬೆಳೆಯತಕ್ಕ ಪ್ರದೇಶ ಹಾಗೂ ಅದರ ಬೆಲೆಗನುಗುಣವಾಗಿ ಸಾಲ ಕೊಡುವಂಥ ವ್ಯವಸ್ಥೆ ಆಗಬೇಕು. ಈ ದಿಸೆಯಲ್ಲಿ ಸರ್ಕಾರ ವಿಚಾರ ಮಾಡಬೇಕಾಗಿದೆ. ಬ್ಯಾಂಕ್ ಮತ್ತು ಸಹಕಾರ ಸಂಘಗಳ ನಡುವಣ ಸಂಬಂಧ ಏನಿದೆ ಅದರಿಂದ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಕೆಳಗಿನ ಸೊಸೈಟಿಗಳಿಗೆ ಅಡಚಣೆಯಾಗುತ್ತಿದೆ. ಜಿಲ್ಲಾ ಬ್ಯಾಂಕುಗಳು ಏನಿವೆ ಅವು ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿ ತೆಗೆದುಕೊಳ್ಳುತ್ತಿವೆ. ಇದನ್ನು ಸರಳಗೊಳಿಸಬೇಕೆಂದು ಹೇಳಬಯಸುತ್ತೇನೆ. ಅನೇಕ ಮಾರ್ಕೆಟಿಂಗ್ ಸೊಸೈಟಿಗಳು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳು ಕೃಷಿ ಹುಟ್ಟುವಳಿಯ ಮೇಲಿರುವುದರಿಂದ ಆ ಸಂಸ್ಥೆಗಳಿಗೆ ಕೃಷಿ ಪದವೀಧರರನ್ನು ತೆಗೆದುಕೊಳ್ಳಬೇಕೆಂದು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾರ್ಕೆಟಿಂಗ್ ವಿಚಾರದಲ್ಲಿ ಪದವೀಧರರಾಗಿರುವವರನ್ನು ಇಲಾಖೆಯಲ್ಲಿ ಅಧಿಕಾರಿಗಳನ್ನಾಗಿ ಆಯ್ಕೆ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ರೈತರ ಹಿತದೃಷ್ಟಿಯಿಂದ ಸಹಕಾರಿ ಆಂದೋಳನ ಬೆಳೆದುಬರಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಶೈತ್ಯ ಗೃಹಗಳು, ಉಗ್ರಾಣಗಳು ಮತ್ತಿತರ ವ್ಯವಸ್ಥೆಗಳು ಆಗಬೇಕೆಂದು ತಮ್ಮ ಮೂಲಕ ಮಂತ್ರಿಗಳಲ್ಲಿ ವಿನಂತಿಸಿಕೊಂಡು, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಇಲ್ಲಿಗೆ ಬೇಡಿಕೆಗಳ ಮೇಲೆ ಚರ್ಚೆ ಮುಕ್ತಾಯವಾಯಿತು. ನಾಳೆ ಬೆಳಿಗ್ಗೆ ಮಂತ್ರಿಗಳು ಉತ್ತರ ನೀಡುವರು. ಈಗ ವಿದ್ಯುಚ್ಛಕ್ತಿ ಮಂತ್ರಿಗಳು ಒಂದು ಹೇಳಿಕೆಯನ್ನು ನೀಡಲಿದ್ದಾರೆ.

Statement by the Minister

reg : Withdrawal of load shedding

SRI J. S. DESHMUKH (Minister for Power, Mines & Geology).—Sir, there has been a number of representations from the rural areas to withdraw the load shedding of 6 hours for IP Sets each day because of drought conditions in the State. The Government after considering the difficulties of the rural podulation, have decided to withdraw this restriction with effect from August 15, 1 85 until a revised decision is taken on the level of power cut after the closure of monsoon.

MR. SPEAKER.—The House now stands adjourned to meet again tomorrow at 9.00 a.m.

The House adjourned at Eight Minutes past Eight of Clock to meet again at Nine of the Clock on Wednesday, the 14th day of August, 1985.